**5. ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟಂತೆ ವಂದನಾರ್ಪಣಾ ಪ್ರಸ್ತಾವ.**

**ಶ್ರೀ ಸಿದ್ಧರಾಮಯ್ಯ (ವಿರೋಧ ಪಕ್ಷದ ನಾಯಕರು)** : ಮಾನ್ಯ ಅಧ್ಯಕ್ಷರೆ, ಇದೇ ತಿಂಗಳ ನಾಲ್ಕನೇ ತಾರೀಖು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಇದು ಸಾಂಪ್ರದಾಯಿಕವಾಗಿ ನಡೆದುಕೊಂಡು ಬಂದಿರುವ ಒಂದು ಪದ್ಧತಿ. ಮಾನ್ಯ ರಾಜ್ಯಪಾಲರ ಭಾಷನವೆಂದರೆ ರಾಜ್ಯಪಾಲರು ಅವರ ಭಾವನೆಗಳನ್ನು ಮತ್ತು ಅಭಿಪ್ರಾಯಗಳನ್ನು ಹೇಳುವಂತಹ ಭಾಷಣ ಅಲ್ಲ. ಅವರು ತಯಾರು ಮಾಡುವ ಭಾಷಣವಲ್ಲ. ಸರ್ಕಾರ ತಯಾರು ಮಾಡಿ ಕೊಡುವ ಭಾಷಣವನ್ನು ಮಾನ್ಯ ರಾಜ್ಯಪಾಲರು ಓದುತ್ತಾರೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಸತ್ಯವಾದಂತಹ ವಿಚಾರಗಳನ್ನು ಸದನಸ ಮುಂದೆ ಇಡುವ ಪ್ರಯತ್ನಗಳನ್ನು ಮಾಡಬೇಕು. ಸರ್ಕಾರದ ನೀತಿ, ಸರ್ಕಾರದ ಬದ್ಧತೆ, ಸರ್ಕಾರದ ಸಿದ್ಧಾಂತ, ಕಾರ್ಯಕ್ರಮಗಳು, ಅವರು ಮಾಡಿರುವಂತಹ ಸಾಧನೆಗಳು ಮತ್ತು ಮುಂದಿನ ದೂರದೃಷ್ಟಿ ಇಟ್ಟುಕೊಂಡು ನಾವು ಈ ರಾಜ್ಯಕ್ಕೆ ಏನು ಮಾಡುತ್ತೇವೆಂಬ ಎಲ್ಲಾ ವಿಚಾರಗಳು ಈ ಭಾಷಣದಲ್ಲಿರಬೇಕು. ಆದರೆ ಇದು ಯಾವುದೂ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕಾಣಿಸಲಿಲ್ಲ. ಮಾನ್ಯ ರಾಜ್ಯಪಾಲರ ಭಾಷಣವನ್ನು ನಾನು ಎರಡು ಬಾರಿ ಓದಿದ್ದೇನೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಸಂಪೂರ್ಣವಾಗಿ ಸತ್ಯಕ್ಕೆ ದೂರವಾದಂತಹ ವಿಚಾರಗಳನ್ನೇ ಪ್ರಸ್ತಾಪ ಮಾಡಿದೆ. ಸರ್ಕಾರ ಅಧಿಕಾರಕ್ಕೆ ಬಂದು ಇವತ್ತಿಗೆ ಸುಮಾರು ನಾಲ್ಕು ಮುಕ್ಕಾಲು ವರ್ಷವಾಯಿತು. ಇನ್ನು ಕೇವಲ ಮೂರು ತಿಂಗಳು ಕಳೆದರೆ ಐದು ವರ್ಷ ತುಂಬುತ್ತದೆ. ಏಪ್ರಿಲ್, ಮೇ ತಿಂಗಳಲ್ಲಿ ಚುನಾವಣೆ ಬರುತ್ತದೆ.

**ಅಧ್ಯಕ್ಷರು** : ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಮಾನ್ಯ ಉಪ ಮುಖ್ಯಮಂತ್ರಿಗಳು ದಯವಿಟ್ಟು ನಿಮ್ಮ ಸ್ಥಾನಕ್ಕೆ ಬನ್ನಿ.

**ಶ್ರೀ ಸಿದ್ಧರಾಮಯ್ಯ** : ಬಿ.ಜೆ.ಪಿ ಅಧ್ಯಕ್ಷರು ಹೊರಗೆ ಕರೆದುಕೊಂಡು ಹೋಗಿ ಮಾತನಾಡುವುದು ಒಳ್ಳೆಯದು. ಆಪರೇಷನ್ ಕಮಲ ಈಗ ನಡೆಯುವುದಿಲ್ಲ. ಕರ್ನಾಟಕವನ್ನು ಸಂಪದ್ಭರಿತ ರಾಜ್ಯವನ್ನಾಗಿ ಮಾಡಿದ್ದೇವೆ, ಗ್ರಾಮ ಸ್ವರಾಜ್ಯ ಮಾಡಿದ್ದೇವೆ, ರಾಮರಾಜ್ಯ ಮಾಡಿದ್ದೇವೆಂದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದ್ದಾರೆ. ಇವರು ಅಧಿಕಾರಕ್ಕೆ ಬಂದ

ನಂತರ ಕರ್ನಾಟಕ ರಾಜ್ಯ ಎಲ್ಲಾ ಅಭಿವೃದ್ಧಿ ದೃಷ್ಟಿಕೋನದಿಂದ, ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ, ಆಂತರಿಕ ಉತ್ಪನ್ನದ ದೃಷ್ಟಿಯಿಂದ, ಕಾನೂನು ಸುವ್ಯವಸ್ಥೆಯ ದೃಷ್ಟಿಯಿಂದ, ಎಲ್ಲಕ್ಕಿಂತ ಮಿಗಿಲಾಗಿ ಭ್ರಷ್ಟಾಚಾರ ಇದನ್ನೆಲ್ಲಾ ನೋಡಿದಾಗ ಬಹುಶಃ ಕರ್ನಾಟಕದ ಇತಿಹಾಸದಲ್ಲಿ ಎಂದೆಂದೂ ನಡೆಯಲಾರದ ಘಟನೆಗಳು ಈ ರಾಜ್ಯದಲ್ಲಿ ನಡೆದು ಹೋಗಿದೆ. ಎಂದೆಂದೂ ನಡೆದಿರಲಿಲ್ಲ. ಅಷ್ಟರಮಟ್ಟಿಗೆ ಇಲ್ಲಿ ನಡೆದಿದೆ. ಇವರು ಅಧಿಕಾರಕ್ಕೆ ಬಂದಾಗ ಇವರಿಗೇನು majority ಬಂದಿರಲಿಲ್ಲ. 110 ಸ್ಥಾನಗಳಷ್ಟೆ ಬಂದಿದ್ದು, ಜನರು ಇವರಿಗೆ ಬಹುಮತ ಕೊಟ್ಟಿರಲಿಲ್ಲ.

**ಶ್ರೀ ಆರ್.ಅಶೋಕ್ :** Central ನಲ್ಲಿ ಕಾಂಗ್ರೆಸ್‌ಗೆ ಕೂಡ majority ಇಲ್ಲ.

**ಶ್ರೀ ಸಿದ್ಧರಾಮಯ್ಯ :** ನಿಜ ಅದನ್ನೆಲ್ಲಾ ಒಪ್ಪಿಕೊಳ್ಳುತ್ತೇವೆ. ಅದು ಸಮ್ಮಿಶ್ರ ಸರ್ಕಾರ. ನಿಮ್ಮದು ಸಮ್ಮಿಶ್ರ ಸರ್ಕಾರವಲ್ಲ. ಅದನ್ನು ಸಮ್ಮಿಶ್ರ ಸರ್ಕಾರವೆಂದೇ ಕರೆಸಿಕೊಂಡಿರುವುದು. United Progressive Alliance (UPA) ಎಂದು ಕರೆದುಕೊಂಡಿರುವುದು. It is an admitted fact. Admitted facts need not be proved Mr.Ashok. ಇವರ ಪರಿಸ್ಥಿತಿ ಆ ರೀತಿ ಇಲ್ಲ. ಕಾಂಗ್ರೆಸ್‌ಗೆ ದೆಹಲಿಯಲ್ಲಿ ಬಹುಮತವಿಲ್ಲವೆನ್ನುವುದು ಬಹಳ ಸ್ಪಷ್ಟವಾದ ವಿಚಾರ. It is a known fact. ಅದನ್ನು ಯಾರೂ ಪ್ರಸ್ತಾಪ ಮಾಡಬೇಕಾದ ಅಗತ್ಯವಿಲ್ಲ.

ಅನೇಕ ರಾಜಕೀಯ ಪಕ್ಷಗಳೆಲ್ಲವೂ Alliance ಮಾಡಿಕೊಂಡು ಸರ್ಕಾರ ಮಾಡಿದ್ದಾರೆ. ಇಲ್ಲಿ ಇವರಿಗೆ ಬಂದಿದ್ದು 110 ಸ್ಥಾನಗಳು ಮಾತ್ರ. 116 ಸ್ಥಾನಗಳು ಆಗಲೇ ಇಲ್ಲ. ಸರ್ಕಾರ ರಚನೆ ಮಾಡುವುದಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾಡಿಕೊಳ್ಳುವುದಕ್ಕೆ ಏನು ಮಾಡಿದಿರಿ? 'ಆಪರೇಷನ್ ಕಮಲ' ವೆಂದು ಮಾಡಿದಿರಿ. ಅದನ್ನು ನಿಮ್ಮ ಕಡೆಯವರೇ ಯಾರೋ ಇಟ್ಟಿರುವುದು. ಬಹುಶಃ ಆರ್.ಎಸ್.ಎಸ್. ನವರು ಇದನ್ನು ಇಟ್ಟಿರಬೇಕೆಂದು ಅನಿಸುತ್ತದೆ. ಏಕೆಂದರೆ ಇಂತಹ ಪದಗಳು ಅವರಿಗೇ ತಿಳಿಯುವುದು. ಅಶೋಕ ಅವರೇ, ನಿಮಗೆ RSS ಟ್ರೈನಿಂಗ್ ಆಗಿಲ್ಲ ಅಲ್ಲವೇ? ಅದಕ್ಕೆ ನಿಮಗೆ ಗೊತ್ತಾಗುವುದಿಲ್ಲ. ಸುರೇಶ್ ಕುಮಾರ್ ಅವರಿಗೆ ಗೊತ್ತಾಗುತ್ತದೆ. ಇಲ್ಲ, ಆಗಿಲ್ಲ, ಆಗಿದೆಯೇ?

**ಶ್ರೀ ಎಸ್.ಸುರೇಶ್ ಕುಮಾರ್ :** ಅವರಿಗೂ ಆಗಿದೆ, ಅರವಿಂದ ಲಿಂಬಾವಳಿ ಅವರಿಗೂ ಆಗಿದೆ.

**ಶ್ರೀ ಸಿದ್ಧರಾಮಯ್ಯ :** ಅರವಿಂದ ಲಿಂಬಾವಳಿ ಅವರಿಗೆ ಆಗಿರುವುದು ನನಗೆ ಗೊತ್ತು. ಅವರು ಬಿಜಾಪುರ ದಿಂದ ಇಲ್ಲಿಗೆ ಬಂದು ಕುಂಕುಮ ಇಡುವುದಕ್ಕೆ ಯಾವಾಗ ಪ್ರಾರಂಭ ಮಾಡಿದರೋ ಆಗಲೇ ಗೊತ್ತಾಯಿತು. ಬಿಜಾಪುರದಲ್ಲಿ ಕುಂಕುಮ ಇಡುವುದಿಲ್ಲ, ಅಲ್ಲಿ ಏನಿದ್ದರೂ ವಿಭೂತಿ ಇಟ್ಟುಕೊಳ್ಳುತ್ತಾರೆ. ಇಲ್ಲಿ ಕುಂಕುಮ. ಇವರು ಸರ್ಕಾರ ರಚನೆ ಮಾಡುವುದಕ್ಕಾಗಿ ಬಹಳ ಅನೈತಿಕವಾದ ರಾಜಕಾರಣ ಪ್ರಾರಂಭ ಮಾಡಿದರು. ಕರ್ನಾಟಕದ ಇತಿಹಾಸದಲ್ಲಿಯೇ ಒಂದು ಹೊಸ ದಾಖಲೆ ಮಾಡಿದರು. ಹಿಂದೆ ಯಾವಾಗಲೂ ಈ ರೀತಿ ಆಗಿರಲಿಲ್ಲ. ಹಿಂದೆ ರಾಜೀನಾಮೆ ಕೊಟ್ಟು ಪಕ್ಷಕ್ಕೆ ಹೋಗಿರುವುದೆಲ್ಲ ಇತ್ತು. ಮೊದಲ 6 ಜನ independent ಶಾಸಕರನ್ನು ತೆಗೆದುಕೊಳ್ಳುವ ಮೂಲಕ ಆಪರೇಷನ್ ಕಮಲ ಪ್ರಾರಂಭ ಮಾಡಿದರು. ಆಪರೇಷನ್ ಕಮಲದಲ್ಲಿ ಬಂದಿರುವ ಎಲ್ಲರಿಗೂ ಮಂತ್ರಿ ಪದವಿಯನ್ನು ಕೊಟ್ಟರು. ಇವರು ಹೇಗೆ ಎಂದರೆ, ಇವರ ಸರ್ಕಾರದಲ್ಲಿ ಎಲ್ಲರೂ Cabinet ಸಚಿವರುಗಳೇ. ಜೂನಿಯರ್, ಸೀನಿಯರ್ ಎನ್ನುವುದು ಇಲ್ಲವೇ ಇಲ್ಲ. ಆದ್ದರಿಂದ ಲಂಚ ಹೊಡೆಯುವುದರಲ್ಲಿಯೂ ಎಲ್ಲರೂ ಸಮನಾಗಿಯೇ ಇದ್ದರು. ಇವರು ಆಪರೇಷನ್ ಕಮಲದ ಮೂಲಕ 6 ಜನರನ್ನು ತೆಗೆದುಕೊಂಡು, ಸರ್ಕಾರ ಮಾಡಿ, ಅಷ್ಟಕ್ಕೇ ಸುಮ್ಮನೆ ಆಗಲಿಲ್ಲ. ಮತ್ತೆ 8 ಜನಕ್ಕೆ ಆಪರೇಷನ್ ಕಮಲ ಪ್ರಾರಂಭ ಮಾಡಿದರು. ಅದರಲ್ಲಿ ಜೆ.ಡಿ.(ಎಸ್) ನವರು, ಕಾಂಗ್ರೆಸ್‌ನವರೆಲ್ಲರನ್ನೂ ತೆಗೆದುಕೊಂಡರು. ಆ ರೀತಿ ಮಾಡಿ ಎಂಟು ಬೈ ಎಲೆಕ್ಷನ್‌ಗಳನ್ನು ಮಾಡಿದರು. ಇದರ ಕಾಲದಲ್ಲಿ ನಡೆದ ಬೈ ಎಲೆಕ್ಷನ್‌ಗಳು ಬಹುಶಃ ಕರ್ನಾಟಕದಲ್ಲಿ ಯಾವತ್ತೂ ಕೂಡ ನಡೆದಿರಲಿಲ್ಲ. ನಾನೂ ಸಹ ಅಸೆಂಬ್ಲಿಗೆ ಬಂದು ಕಳೆದ ಜನರಿಗೆ 30 ವರ್ಷಗಳಾಯಿತು. ನಾನೂ ಕೂಡ ಎರಡು ಮೂರು ಸರ್ಕಾರಗಳಲ್ಲಿ, ಶ್ರೀಯುತರುಗಳಾದ ರಾಮಕೃಷ್ಣ ಹೆಗಡೆ ಅವರ ಸರ್ಕಾರದಲ್ಲಿ, ದೇವೇಗೌಡರ ಸರ್ಕಾರದಲ್ಲಿ, ಜೆ.ಹೆಚ್.ಪಟೇಲ್ ಅವರ ಸರ್ಕಾರದಲ್ಲಿ, ಎಸ್.ಆರ್. ಬೊಮ್ಮಾಯಿ ಅವರ ಸರ್ಕಾರದಲ್ಲಿ, ಧರ್ಮಸಿಂಗ್ ಅವರ ಕಾಲದಲ್ಲಿ ಮಂತ್ರಿಯಾಗಿ ಕಾರ್ಯ ನಿರ್ವಹಿಸಿರುತ್ತೇನೆ ದೀರ್ಘಕಾಲದವರೆಗೆ ಮಂತ್ರಿಯಾಗಿದ್ದೆ, ಉಪ ಮುಖ್ಯಮಂತ್ರಿಯಾಗಿದ್ದೆ ಮತ್ತು ಈ ಕಾಲದಲ್ಲಿ ಅನೇಕ ಉಪಚುನಾವಣೆಗಳನ್ನು ನೋಡಿದ್ದೇನೆ. ಸ್ವತಃ ನಾವೂ ಸಹ ಉಪ ಚುನಾವಣೆಗಳನ್ನು ಮಾಡಿದ್ದೇವೆ,

ಬೇರೆಯವರು ಮಾಡಿರುವುದನ್ನೂ ಸಹ ನೋಡಿದ್ದೇವೆ. ಆದರೆ ಬಿ.ಜೆ.ಪಿ. ಪಕ್ಷದವರು ಮಾಡಿದಂತಹ ಉಪಚುನಾವಣೆಗಳನ್ನು ನಾನು ಯಾವ ಕಾಲದಲ್ಲಿಯೂ ನೋಡಿಲ್ಲ. ಒಂದು ಉಪಚುನಾವಣೆ ಎಂದರೆ ಆ ಕ್ಷೇತ್ರಕ್ಕೆ ಪ್ಯಾಕೇಜ್ ರೂಪದಲ್ಲಿ 100 ಕೋಟಿ ರೂ.ಗಳ ಕೆಲಸವನ್ನು ಕೊಟ್ಟು ಬಿಡುವುದು, ಮೊದಲೇ 100 ಕೋ ಟಿ ರೂ.ಗಳು. ಆಮೇಲೆ ಒಂದು ಚುನಾವಣೆಗೆ 20–25 ಕೋಟಿ ರೂ.ಗಳನ್ನು ಖರ್ಚು ಮಾಡುವುದು. ನೀವು ಹಾಗೆಯೇ ಮಾಡಿರುವುದಲ್ಲವೇ? ನನಗಂತೂ ಗೊತ್ತಿಲ್ಲ. ಆಗ ನೀವು ಎಲ್ಲಿದ್ದಿರಿ?

**ಶ್ರೀ ಉಮೇಶ್ ವಿ.ಕತ್ತಿ** : ನಾನು ಜನತಾದಳದಲ್ಲಿದ್ದೆ.

**ಶ್ರೀ ಸಿದ್ಧರಾಮಯ್ಯ** : ನೀವು ನಮ್ಮ ಕಡೆ ಬರಲಿಲ್ಲ. ನಿಮಗೆ ಏನೂ ಗೊತ್ತಿಲ್ಲ ಬಿಡಿ. ಒಂದು ವೇಳೆ ನೀವು ಬಂದಿದ್ದರೂ ನಮ್ಮ ಪರವಾಗಿಯೇ ಮಾಡುತ್ತಿದ್ದಿರಿ. ಬಂದಿಲ್ಲ ಅಲ್ಲಿಗೆ. ನಾನು ಮಾಡಿರುವ ಉಪಚುನಾವಣೆ ಆಪರೇಷನ್ ಕಮಲವಲ್ಲ. ನನ್ನನ್ನು ಜೆ.ಡಿ.(ಎಸ್) ನಿಂದ ತೆಗೆದು ಹಾಕಿದ್ದರು, ನನ್ನನ್ನು expel ಮಾಡಿದರು.

**ಶ್ರೀ ಆರ್.ಅಶೋಕ್** : ಏಕೆ ತೆಗೆದುಹಾಕಿದರು?

**ಶ್ರೀ ಸಿದ್ಧರಾಮಯ್ಯ** : ನಿಮಗೆ ರೇವಣ್ಣ ಹಾಗೂ ದೇವೇಗೌಡರ ಜೊತೆ ನೆಂಟಸ್ಥನ ಇದೆಯೆಲ್ಲಾ, ನೀವೇ ಕೇಳಿ? ಕುಮಾರಸ್ವಾಮಿ ಅವರೇ ನೆಂಟಸ್ಥನ ಇಲ್ಲವೇ ಎಂಬುದನ್ನು ನೀವೇ ಹೇಳಿ. ಏನೂ ಇಲ್ಲ ಎಂದರೂ fact remains.

**ಶ್ರೀ ಆರ್.ಅಶೋಕ್** : ನಿಮ್ಮ ಮಾತನ್ನು ಶ್ರೀ ರೇವಣ್ಣನವರು ಕೇಳುತ್ತಿದ್ದರಲ್ಲಾ?

**ಶ್ರೀ ಸಿದ್ಧರಾಮಯ್ಯ** : ಬಹಳ ವರ್ಷ ಜೊತೆಯಲ್ಲದ್ದ ಕಾರಣ ಎಲ್ಲೋ ಒಂದು ಕಡೆ ಮಾತು ಕೇಳಬೇಕೆನಿಸುತ್ತದೆ. ಬಚ್ಚೇಗೌಡರು ಈಗ ನಮ್ಮ ಜೊತೆಯಲ್ಲಿಲ್ಲ. ಆದರೂ ಈಗ ನಾವು ಹೇಳಿದ ಮಾತು ಅವರು ಕೇಳಲ್ಲವೇ?

**ಡಾ. ಹೆಚ್.ಸಿ. ಮಹದೇವಪ್ಪ** : ಮಾತೇನೋ ಕೇಳುತ್ತಾರೆ. ಆದರೆ ಸ್ವಲ್ಪ ಡಿಲೇ ಮಾಡುತ್ತಾರೆ!

**ಶ್ರೀ ಸಿದ್ಧರಾಮಯ್ಯ** : ಇದು damaging statement. ನಾನು ಏಕೆ ಈ ರೀತಿ ಹೇಳುತ್ತಿದ್ದೇನೆಂದರೆ, ಕರ್ನಾಟಕದಲ್ಲಿ ರಾಜಕಾರಣ ಅನೈತಿಕವಾಗಿ ಕೆಳಮಟ್ಟಕ್ಕೆ ಹೋಗುವುದಕ್ಕೆ ಬಿ.ಜೆ.ಪಿ. ಸರ್ಕಾರ ಕಾರಣ ಎನ್ನುವ ಮಾತಗಳನ್ನು ಹೇಳಬೇಕಾಗುತ್ತದೆ. ರಾಜಕೀಯ ಮೌಲ್ಯಗಳು ಇಂದು ಕುಸಿಯುತ್ತಿದ್ದರೆ ಅದಕ್ಕೆ ಬಿ.ಜೆ.ಪಿ. ಸರ್ಕಾರ ಕಾರಣ. ನಾನು ಯಾವುದೇ ಕಾಲದಲ್ಲಿಯೂ ಈ ರೀತಿಯ ಚುನಾವಣೆಗಳನ್ನು ನೋಡಿರಲಿಲ್ಲ. ರಾಜ್ಯದಲ್ಲಿ ಸಾರ್ವಜನಿಕವಾಗಿ ನಾವು ಎಲ್ಲರೂ ಎಂ.ಎಲ್.ಎ.ಗಳೆಂದು ಹೇಳಿಕೊಳ್ಳುವುದಕ್ಕೆ ನಾಚಿಕೆಯಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಕರ್ನಾಟಕದಲ್ಲಿ ಎಂದೆಂದೂ ನಡೆಯಬಾರದಂತ ಘಟನೆಗಳು, ರಾಜಕೀಯ ಮೌಲ್ಯಗಳನ್ನು ನಾಶಮಾಡು-ವಂತಹ ಘಟನೆಗಳು, ರಾಜಕೀಯವು ನೈತಿಕವಾಗಿ ಅಧಃಪತನ ಯಾವ ಕಾಲದಲ್ಲೂ ನಡೆದಿರಲಿಲ್ಲ. ಇದರ ಕಾಲದಲ್ಲಿ ಇದು ನಡೆಯಿತು ಎನ್ನುವುದನ್ನು ಅತ್ಯಂತ ನೋವಿನಿಂದ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಇಲ್ಲಿಲ್ಲ, ಅವರು ರಾಜೀನಾಮೆ ಕೊಟ್ಟಿದ್ದಾರೆ, ಅವರೇ ಇದನ್ನೆಲ್ಲವನ್ನು ಪ್ರಾರಂಭ ಮಾಡಿದವರು. ಅವರು ಅಧಿಕಾರಕ್ಕೆ ಬಂದಮೇಲೆ ಏನೇನು ಮಾಡಬಾರದೋ ಅದೆಲ್ಲವನ್ನೂ ಇಲ್ಲಿ ಮಾಡಿ ಹಾಕಿದರು. ನಾನು ಈಗ ಅವರ ಮೇಲೆ ಆರೋಪ ಮಾಡುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಅವರು defend ಮಾಡಿಕೊಳ್ಳುವುದಕ್ಕೆ ಇಲ್ಲಿಲ್ಲ. ಹೊರಗಡೆ ಇದ್ದಾರೆ. ಏನೇನು ಮಾಡಬಾರದೋ ಅದೆಲ್ಲವನ್ನೂ ಮಾಡಿದರು ಮಾನ್ಯ ಕತ್ತಿಯವರೆ. ರೈತರ ಮೇಲೆ ಪ್ರಮಾಣ ವಚನ ಮಾಡಿ ಅಧಿಕಾರಕ್ಕೆ ಬಂದವರು. ಬಹುಶಃ ಕರ್ನಾಟಕದ ಇತಿಹಾಸದಲ್ಲೇ ಯಾರೂ ರೈತರ ಮೇಲೆ ಪ್ರಮಾಣ ವಚನ ಮಾಡಿರಲಿಲ್ಲ. ಸಂವಿಧಾನದಲ್ಲೂ ಕೂಡ ಅದಕ್ಕೆ ಅವಕಾಶವಿಲ್ಲ. ರೈತರ ಮೇಲೆ, ಯಾರದೋ ಲೀಡರ್‌ಗಳ ಮೇಲೆ, ಲೀಡರ್ ಹೆಂಡತಿಯರ ಮೇಲೆ, ಅವರ ಮಕ್ಕಳ ಮೇಲೆ ಪ್ರಮಾಣವಚನ ಮಾಡುವುದು ಯಾವಾಗಲೂ ಇರಲಿಲ್ಲ. ಯಾವಾಗಲಾದರೂ ಇತ್ತೇ ಎಂಬುದನ್ನು ನೀವೇ ಹೇಳಿ. ಯಾವ ಕಾಲದಲ್ಲಾದರೂ ಇದು ಇತ್ತೇ? 'ಭಟ್ಟಂಗಿತನ' ಪ್ರಾರಂಭವಾದುದೆ ಈಗ. ಇದನೇ ರಾಜಕೀಯ ಭಟ್ಟಂಗಿತನ ಎಂದು ಕರೆಯುವುದು. ಇದು ಪ್ರಾರಂಭವಾದುದು ಬಿ.ಜೆ.ಪಿ. ಸರ್ಕಾರ ಅಧಿಕಾರಕ್ಕೆ ಬಮದ ಮೇಲೆ. ನನ್ನ ಪ್ರಕಾರ ಇದು ಸಂವಿಧಾನಕ್ಕೆ ಮಾಡುವ ಅಗೌರವ.

ಮಾನ್ಯ ಅಧ್ಯಕ್ಷರೆ ತಾವು ವಕೀಲರು, ಹೌದಾ ಅತವಾ ಇಲ್ಲವೇ? ರಾಜ್ಯಪಾಲರು ಪ್ರಮಾಣ ವಚನ ಮಾಡುವುದಕ್ಕೆ ಈ ರೀತಿಯ ಅವಕಾಶ ಕೊಡಬಾರದಿತ್ತು. ಸಂವಿಧಾನದಲ್ಲಿ ಹೇಳಿರುವುದು ಏನೆಂದರೆ; ದೇವರು ಅಥವಾ ಸತ್ಯ. ದೇವರ ಮೇಲೆ, ಸತ್ಯ ನಿಷ್ಠೆಯ ಮೇಲೆ ಅಲ್ಲವೇ? ಅದನ್ನು ಹೊರತುಪಡಿಸಿ ಸಂವಿಧಾನದಲ್ಲಿ ಬೇರೆ ಏನಾದರೂ ಇದೆಯೇ? ಇವರು ಸಂವಿಧಾನದಲ್ಲಿ ಇಲ್ಲದೇ ಇರುವ ಪದಗಳನ್ನು ಬಳಸುವುದಕ್ಕೆ ಪ್ರಾರಂಭ ಮಾಡಿದರು. ಕೆಲವರು ಯಡಿಯೂರಪ್ಪನವರ ಹೆಸರಿನಲ್ಲಿ ಪ್ರಮಾಣ ವಚನ ತೆಗೆದುಕೊಳ್ಳುವುದು, ಕೆಲವರು ಇನ್ನ್ಯಾರದೋ ಹೆಸರಿನಲ್ಲಿ ತೆಗೆದುಕೊಳ್ಳುವುದು, ಇದು ಸಂವಿಧಾನಕ್ಕೆ ಆದಂತಹ ಅಪಚಾರ, ಅಗೌರವ ಇವರು ಅಂವಿಧಾನವನ್ನು ಸರಿಯಾಗಿ ಓದಿಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ ಅಥವಾ ಸಂವಿಧಾನಕ್ಕೆ ಗೌರವ ಕೊಡಬೇಕೆನ್ನುವ ಕನಿಷ್ಠ ಜ್ಞಾನ ಇದೆಯೋ ಇಲ್ಲವೋ ಗೊತ್ತಿಲ್ಲ. ನನ್ನ ಪ್ರಕಾರ ರಾಜ್ಯಪಾಲರೇ ಸತ್ಯ ಅಥವಾ ನಿಷ್ಠೆಯ ಮೇಲೆ ಅಥವಾ ದೇವರ ಮೇಲೆ ತೆಗೆದುಕೊಳ್ಳಿ ಎಮಬುದನ್ನು ಅವರಿಗೆ ಆ ಸಂದರ್ಭದಲ್ಲಿ ಹೇಳಬೇಕಾಗಿತ್ತು. ನಾವೆಲ್ಲಾ ಸತ್ಯ ನಿಷ್ಠೆಯ ಮೇಲೆ ಪ್ರಮಾಣವಚನವನ್ನು ತೆಗೆದುಕೊಂಡಿದ್ದೇವೆ.

ನಾನು ಎಂ.ಎಲ್.ಎ. ಆದಾಗ, ಮಂತ್ರಿ ಆದಾಗ ಸತ್ಯ-ನಿಷ್ಠೆ ಮೇಲೆ ತೆಗೆದುಕೊಂಡಿದ್ದೇವೆ. ನೀವು ಪ್ರಮಾಣ ವಚನವನ್ನು ಸತ್ಯ ನಿಷ್ಠೆ ಮೇಲೆ ತೆಗೆದುಕೊಂಡಿದ್ದೀರಿ ಎಂದು ಕಾಣಿಸುತ್ತದೆ. ಪತ್ರಿಕೆಗಳಲ್ಲಿ ಬಂದಿದೆ. ಲೀಡರ್ ಹೆಂಡತಿ ಹೆಸರಿನಲ್ಲಿ ಪ್ರಮಾಣ ವಚನವನ್ನು ತೆಗೆದುಕೊಂಡಿರುವುದನ್ನು ನಾವೆಲ್ಲಾ ಪತ್ರಿಕೆಗಳಲ್ಲಿ ನೋಡಿದ್ದೀವಿ ಭಟ್ಟಂಗಿತನಕ್ಕೆ, ಇದಕ್ಕಿಂತಾ ಮತ್ತೊಂದು ಉದಾಹರಣೆ ಇದೆಯೆ ಮಾನ್ಯ ಅಧ್ಯಕ್ಷರೆ? ಇವುಗಳಿಗೆ ಅವಕಾಶ ಇರಬಾರದು. ನಾವು ಒಂದು ರಾಜ್ಯಾಂಗವನ್ನು ರಚಿಸಿಕೊಂಡು, ಅದರ ಚೌಕಟ್ಟಿನಲ್ಲಿ ಕೆಲಸ ಮಾಡಬೇಕೆಂದು ಹೇಳಿ ಇಲ್ಲಿ ಬಂದಿರತಕ್ಕಂತದವರು. ರಾಜ್ಯಾಂಗದ ಚೌಕಟ್ಟಿನಲ್ಲಿ ಕೆಲಸ ಮಾಡುತ್ತೇವೆ, ರಾಜ್ಯಾಂಗಕ್ಕೆ ಗೌರವ ಕೊಡುತ್ತೇವೆ. ರಜ್ಯಾಂಗವನ್ನು ಎತ್ತಿ ಹಿಡಿಯುತ್ತೇವೆಂಬ ಮಾತುಗಳನ್ನೆಲ್ಲಾ ಹೇಳಿ ನಾವೆಲ್ಲಾ ಇಲ್ಲಿ ಪ್ರಮಾಣ ವಚನ ಮಾಡಿದ್ದೇವೆ. ಇದನ್ನೆಲ್ಲಾ ಇವರು ನಾಶ ಮಾಡಿದರು. ಅದರ ವಿರುದ್ಧವಾಗಿ ನಡೆದುಕೊಂಡರು. ಹಾಗಾಗಿ ಇವತ್ತು ಇಡೀ ಪ್ರಜಾಪ್ರಭುತ್ವ ವ್ಯವಸ್ಥೆ, ಪ್ರಜಾಪ್ರಭುತ್ವದ ಮೌಲ್ಯಗಳು

ಕುಸಿಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇದು ಆಗಬಾರದು. ಇದು ಇವರ ಕಾಲದಲ್ಲಿ ಅಯಿತು ಎನ್ನುವುದನ್ನು ಅತ್ಯಂತ ನೋವಿನಿಂದ ಹೇಳಬೇಕಾಗಿದೆ. ಇದನ್ನು ಐದು ವರ್ಷಗಳಲ್ಲಿ ದೊಡ್ಡ ಸಾಧನೆ ಮಾಡಿದ್ದೇವೆಂದು ಹೇಳಿಕೊಂಡಿದ್ದಾರೆ. ನನ್ನ ಪ್ರಕಾರ ಇವರು ಅಧಿಕಾರಕ್ಕೆ ಬಂದ ಮೇಲೆ ಅಭಿವೃದ್ಧಿ ಹತ್ತು ವರ್ಷ ಹಿಮದಕ್ಕೆ ಹೊರಟು ಹೋಗಿದೆ. ರಾಜ್ಯದ ಗೌರವ ಮಣ್ಣು ಪಾಲಾಗಿದೆ. ಸಮೃದ್ಧ ಕರ್ನಾಟಕ ಮಾಡುತ್ತೇವೆಂದು ಹೇಳಿದರು. ಸಮೃದ್ಧ ಕರ್ನಾಟಕಕ್ಕೆ ಬಿ.ಜೆ.ಪಿ.ಯೇ ಉತ್ತರವೆಂದು ಹೇಳಿದರು. ಇವತ್ತು ಈ ರಾಜ್ಯ ಅಭಿವೃದ್ಧಿಯಲ್ಲಿ ಹಿಂದೆ ಹೋಗಿದೆ. ಜೊತೆಗೆ ಈ ರಾಜ್ಯದ ಆಡಳಿತ ಸಂಪೂರ್ಣವಾಗಿ ನೆಲ ಕಚ್ಚಿದೆ. There is nob Government and no Governance at all. ಸರ್ಕಾರ ಇಲ್ಲ ಮತ್ತು ನನ್ನ ಪ್ರಕಾರ ಇಲ್ಲಿ ಪ್ರಜಾಪ್ರಭುತ್ವದ ರೀತ್ಯ ಸ್ಥಾಪನೆ ಆದ ಸರ್ಕಾರ ಇಲ್ಲ. ನೈತಿಕತೆ ಇರತಕ್ಕಂಥ ಸರ್ಕಾರವಿಲ್ಲ. ಅನೈತಿಕ ಸರ್ಕಾರ ದಿನಾಂಕ 10.10.2010 ರಿಂದ ಇವತ್ತಿನವರೆಗೂ ಇದೆ. ಯಡಿಯೂರಪ್ಪನವರ ಕಾಲದಿಂದ ಇವತ್ತಿನವರೆಗೂ ಇದೆ. ಏಕೆಂದರೆ ಮಾನ್ಯ ಯಡಿಯೂರಪ್ಪನವರು vote of confidence move ಮಾಡಿದರಲ್ಲಾ ಅವತ್ತೇ ಸರ್ಕಾರಕ್ಕೆ ಬಹುಮತ ಹೊರಟು ಹೋಯಿತು. ಅವತ್ತಿನಿಂದ ಇವರಿಗೆ ಬಹುಮತನೇ ಇಲ್ಲ. ಈಗಲೂ ಬಹುಮತ ಇಲ್ಲ. ಮಾನ್ಯ ಅಶೋಕ್ ರವರೆ ಬಹುಮತ ಇದೆಯೇ?

**ಶ್ರೀ ಆರ್.ಅಶೋಕ್** : ಐದು ವರ್ಷದಿಂದ ಬಹುಮತ ಇಲ್ಲ ಇಲ್ಲವೆಂದು ಹೇಳುತ್ತಲೇ ಇದ್ದೀರಿ. ಐದು ವರ್ಷದಿಂದ ನಮ್ಮ ಸರ್ಕಾರ ನಡೆದುಕೊಂಡು ಬರುತ್ತಲೇ ಇದೆ. ಬಹುಮತ ಇದೆಯೆಂದು ಹಲವಾರು ಬಾರಿ ಸಾಬೀತು ಮಾಡಿ ಬಿಟ್ಟಿದ್ದೇವೆ ಇವತ್ತು ಕೇಳಿದರೆ ಇವತ್ತೂ ಸಾಬೀತು ಮಾಡುತ್ತೇವೆ.

**ಶ್ರೀ ಸಿದ್ಧರಾಮಯ್ಯ** : ತಾವು ತಾಂತ್ರಿಕವಾಗಿ ಇದ್ದೀರಿ. ಉಮೇಶ್ ಕತ್ತಿಯವರು ಹಾವೇರಿಗೆ breakfast ಹೋಗಿರಲಿಲ್ಲವೆ?

**ಶ್ರೀ ಕೆ.ಎಸ್.ಈಶ್ವರಪ್ಪ** : ನೀವು ನಿಮ್ಮ ಮನೆಗೆ ಕರೆಯಿರಿ, ನಾವು ಮನೆಗೂ ಬರುತ್ತೇವೆ.

**ಶ್ರೀ ಸಿದ್ಧರಾಮಯ್ಯ** : ಈಶ್ವರಪ್ಪನವರೆ ತಾವು ಈ ತರಹ ಉತ್ತರ ಹೇಳಿದರೆ ಹೇಗೆ?

**ಶ್ರೀ ಕೆ.ಎಸ್.ಈಶ್ವರಪ್ಪ** : ಅವರು ಒಳ್ಳೆಯ ನಾಯಕರು. ಎಲ್ಲರನ್ನೂ ಪ್ರೀತಿಯಿಂದ ಕರೆಯುತ್ತಿದ್ದರು. ಒಂದು ದಿನವಾದರೂ ಕುರಿ ಕಡಿಯಲಿಲ್ಲ, ಊಟಕ್ಕೆ ಕರೆಯಲಿಲ್ಲ. ನೀವು ಊಟಕ್ಕೆ ಕರೆಯಿರಿ ನಿಮ್ಮ ಮನೆಗೆ ಬರುತ್ತೇವೆ.

**ಶ್ರೀ ಸಿದ್ಧರಾಮಯ್ಯ** : ನೀವು ಕರೆದಿದ್ದೀರಾ?

**ಶ್ರೀ ಕೆ.ಎಸ್.ಈಶ್ವರಪ್ಪ** : ಬಹುಮತದ ಪ್ರಶ್ನೆಯನ್ನು ಮಾತನಾಡುವ ಹಾಗೆ ಇಲ್ಲ. ಬಹುಮತ ಇದೆಯೆಂದು ಆರಾಮವಾಗಿ ಇದ್ದೇವೆ. ಉಮೇಶ್ ಕತ್ತಿಯವರನ್ನು ಬರೀ ಊಟಕ್ಕೇ ಕರೆಯಬೇಡಿ. ಬರೀ ಊಟಕ್ಕೆ ಕರೆದರೆ ಅವರು ಬರುವುದಿಲ್ಲ. ನಿಮ್ಮ ಸ್ನೇಹಿತರು ಹೇಗೆ ಎಂದು ನಿಮಗೆ ಗೊತ್ತಿದೆ. ಆ ಪ್ರಕಾರ ಕರೆಯಿರಿ. ಅದಕ್ಕೂ ಅವರು ಬರುತ್ತಾರೆ.

**ಶ್ರೀ ಮಾಲೀಕಯ್ಯ ಗುತ್ತೇದಾರ್** : ಇವೆಲ್ಲಾ ಕಂಡಿಷನ್ ಮಾಡಿಯೇ ತೆಗೆದುಕೊಂಡಿದ್ದಾರೆ.

**ಶ್ರೀ ಸಿದ್ಧರಾಮಯ್ಯ** : ಅವೆಲ್ಲ ಒಪ್ಪಿಕೊಂಡು, condition ಮಾಡಿ ತಾವು ತೆಗೆದುಕೊಂಡಿದ್ದೀರಿ.

**ಶ್ರೀ ಕೆ.ಎಸ್.ಈಶ್ವರಪ್ಪ** : ನನಗೆ ಗೊತ್ತೇ ಇರಲಿಲ್ಲ, ಅವರೂ ನಿಮ್ಮ ಹಾಗೆಯೇ ಎಂದುಕೊಂಡಿದ್ದೆ, ಆದರೆ ಅವರು ಬೇರೆ ತರಹ ಇದ್ದಾರೆ.

**ಶ್ರೀ ಸಿದ್ಧರಾಮಯ್ಯ** : ನಿರಾಣಿಯವರು ಯಾರ ಜೊತೆ ಇದ್ದಾರೆ ಹೇಳಿ ನೋಡೋಣ ನಮಗೆ ಗೊತ್ತಾಗಬೇಕಲ್ಲ? ನೀವು ಯಡಿಯೂರಪ್ಪನವರ ಜೊತೆನೋ, ಇಲ್ಲ ಈಶ್ವರಪ್ಪನವರ ಜೊತೆನೋ ಹೇಳಿ ನಮಗೆ ಮಾಹಿತಿ ಗೊತ್ತಾಗಬೇಕು.

(ಈ ಹಂತದಲ್ಲಿ ಛೇರ್ಮನ್‌ರವರಾದ ಶ್ರೀ ಚಂದ್ರಕಾಂತ್.ಜಿ.ಬೆಲ್ಲದ ಇವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

**ಶ್ರೀ ಉಮೇಶ್ ವಿ ಕತ್ತಿ** : ಮಾನ್ಯ ಯಡಿಯೂರಪ್ಪನವರ ಕಡೆನೂ ಇಲ್ಲ. ಮಾನ್ಯ ಈಶ್ವರಪ್ಪನವರ ಜೊತೆನೂ ಇಲ್ಲ. ಭಾರತೀಯ ಜನತಾ ಪಾರ್ಟಿ ಜೊತೆಯಲ್ಲಿ ಇದ್ದೇನೆ. ಅದನ್ನೇಕೆ ಚರ್ಚೆ ಮಾಡುತ್ತೀರಿ?

**ಶ್ರೀ ಸಿದ್ಧರಾಮಯ್ಯ** : ಎಷ್ಟು ದಿವಸಗಳವರೆಗೆ ಇದ್ದೀರಿ?

**ಶ್ರೀ ಉಮೇಶ್ ವಿ ಕತ್ತಿ** : ನಾಲ್ಕು ವರ್ಷದಿಂದ ಇದ್ದೇವೆ.

**ಶ್ರೀ ಸಿದ್ಧರಾಮಯ್ಯ** : ಸರ್ಕಾರ ಇರುವವರೆಗೆ ಇದ್ದೀರಿ. ಆಮೇಲೆ?

**ಶ್ರೀ ಉಮೇಶ್ ವಿ ಕತ್ತಿ** : ನಿಮ್ಮ ಜೊತೆ ಚರ್ಚೆ ಮಾಡಿ ಇಲ್ಲೇ ಉಳಿಯುತ್ತೇವೆ. ನಿಮ್ಮನ್ನೂ ಬೇಕಾದರೆ ಜೊತೆಗೆ ಕರೆಸಿಕೊಳ್ಳುತ್ತೇವೆ!

**ಶ್ರೀ ಕೆ.ಎಸ್.ಈಶ್ವರಪ್ಪ** : ತಮ್ಮನ್ನೂ ಇಲ್ಲಿಯೇ ಕರೆಯುತ್ತೇವೆ ಎಂದರು, ತಾವು ಕೇಳಿಸಿಕೊಳ್ಳಲಿಲ್ಲ. ನಿಮ್ಮ ಜೊತೆ ಚರ್ಚೆ ಮಾಡಿ ತಮ್ಮನ್ನು ಕರೆಸಿಕೊಳ್ಳುತ್ತೇವೆಂದರು. ನೀವು ನೋಡಿದಿರಾ ಎನ್ನುತ್ತೀರಿ. ನಿಮ್ಮಗೆ ಕೆಟ್ಟದೇ ಅಭ್ಯಾಸ ಆಗಿದೆ. ಅವರು ಎಲ್ಲರೂ ಕೂಡ ಸಾಯುವವರೆಗೆ ಬಿ.ಜೆ.ಪಿಯಲ್ಲಿರುತ್ತಾರೆ.

**ಶ್ರೀ ಸಿದ್ಧರಾಮಯ್ಯ** : ತಾವು ಹೀಗೆ ಹೇಳಿ ಶ್ರೀಮತಿ ಶೋಭ ಕರಂದ್ಲಾಜೆ ಅವರು ಹೊರಟು ಹೋದರು.

**ಶ್ರೀ ಕೆ.ಎಸ್.ಈಶ್ವರಪ್ಪ** : ನೀವು ದೇವೇಗೌಡರು ಜೊತೆ ಇದ್ದಾಗ ಸಾಯುವವರೆಗೂ ಕಾಮಗ್ರೆಸ್ ವಿರುದ್ಧವಾಗಿರುತ್ತೇನೆಮದು ಹೇಳಿದ್ದೀರಿ.

**ಶ್ರೀ ಸಿದ್ಧರಾಮಯ್ಯ** : I Never said like that.

**ಶ್ರೀ ಕೆ.ಎಸ್. ಈಶ್ವರಪ್ಪ** : ಸಾಯೋ ತನಕ ಕಾಂಗ್ರೆಸ್ ವಿರೋಧಿ ಎಂದು ಹೇಳಲಿಲ್ಲವೇ? ಹೋಗಲಿ ಕಾಂಗ್ರೆಸ್ ಬಿಡುವುದಿಲ್ಲವೆಂದು ಇವತ್ತಾದರೂ ಹೇಳುತ್ತೀರಾ?

**ಶ್ರೀ ಸಿದ್ಧರಾಮಯ್ಯ** : ನಾನು ಜನತಾ ಪಾರ್ಟಿಯಿಂದ, socialist party ಯಿಂದ ರಾಜಕೀಯ ಪ್ರಾರಂಭ ಮಾಡಿದ್ದೇನೆ. ಆ ಮೇಲೆ ಜನತಾ ಪಾರ್ಟಿ emergency ಯಲ್ಲಿ, ಜನತಾ ದಳದಿಂದ expel ಮಾಡುವ ವರೆಗೂಜನತಾ ದಳದಲ್ಲೇ ಇದ್ದೆ. ನಾನಾಗಿ ಜನತಾ ಪಾರ್ಟಿ ಬಿಡಲಿಲ್ಲ. I was expelled from Janata Dal by Mr.H.D.DeveGowda. ಅಲ್ಲದೇ ಹೋದರೆ ನಾನು ಜನತಾ ದಳದಲ್ಲಿಯೇ ಇರುತ್ತಿದ್ದೆ. ಈಗಲೂ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. Since I was expelled, there was no other alternative except to join Congress Party, because Congress Party is also a secular party, Congress party is also committed to social justice. Whichever party, ಕರ್ನಾಟಕದಲ್ಲಿ ಮತ್ತು ದೇಶದಲ್ಲಿ Social justice ಮತ್ತೆ Secularism, democratic principles ಗೆ ಯಾವ ಪಕ್ಷ ಬದ್ಧವಾಗಿದೆ ಎಂದು ನೋಡಿದೆ, alternative ಕಾಂಗ್ರೆಸ್ ಪಕ್ಷ ಇತ್ತು. ಜನತಾ ದಳಲ್ಲಿದ್ದಾಗ ವಿರೋಧ ಮಾಡಿರುವುದು ನಿಜ ಮುಚ್ಚುಮರೆಯಿಲ್ಲ.

O - 24 - F-60

ಅದರ ಬಗ್ಗೆ ಎರಡನೇ ಮಾತಿಲ್ಲ. ನಿವೇಲ್ಲರೂ ಜನತಾ ಪಾರ್ಟಿಯಲ್ಲಿ ಇದ್ದಾಗ ಒಟ್ಟಿಗೆ ಇದ್ದಾಗ ಮಾಡಿರಲಿಲ್ಲವೇ? ಒಟ್ಟಿಗೆ ಮಾಡಿದ್ದೇವೆ. ಇಲ್ಲವೆಂದಲ್ಲ. ನಮಗೆ ಯಾವುದೂ alternative ಇಲ್ಲದೆ ಇದ್ದಾಗ ಅನಿವಾರ್ಯವಾಗಿ ನಾನು ಕಾಂಗ್ರೆಸ್‌ಗೆ ಸೇರಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು.

**ಶ್ರೀ ಉಮೇಶ್ ವಿ ಕತ್ತಿ** : ಅವತ್ತಿನಿಂದ ಹೇಳುತ್ತಲೇ ಇದ್ದೀರಿ.

**ಶ್ರೀ ಸಿದ್ಧರಾಮಯ್ಯ** : ಆ ಪಾರ್ಟಿ ಆದಮೇಲೆ ನಾನು ಇವತ್ತೂ ಹೇಳುತ್ತೇನೆ. ನಾನು ಎಲ್ಲಿಯವರೆಗೆ ರಾಜಕೀಯದಲ್ಲಿರುತ್ತೇನೆ ಅಲ್ಲಿಯವರೆಗೂ ಕಾಂಗ್ರೆಸ್‌ನಲ್ಲಿ ಇರುತ್ತೇನೆ. ಒಂದು ವೇಳೆ ರಾಜಕೀಯ ಬಿಡಬೇಕೆಂದರೆ retire ಆಗುತ್ತೇನೆ. That is my political stand. ಮಾನ್ಯ ಬಚ್ಚೇಗೌಡರೆ, ಐದು ವರ್ಷ ಆದಮೇಲೆ retire ಆಗುತ್ತೇನೆ. ಈ ಚುನಾವಣೆಗೆ ನಿಂತುಕೊಳ್ಳುತ್ತೇನೆ by congress party only. ಈ ಚುನಾವಣೆ ಆದಮೇಲೆ I am going to retire. ಆಗ 70 ವರ್ಷ ಆಗುತ್ತದೆ. ನೀವು ಆರೋಗ್ಯವಾಗಿದ್ದೀರಿ. ನಮಗೆ ನಿಮ್ಮಷ್ಟು ಆರೋಗ್ಯವಿಲ್ಲ. That is the problem.

**ಶ್ರೀ ಬಿ.ಎನ್. ಬಚ್ಚೇಗೌಡ** : ತಾವು ಮುಖ್ಯಮಂತ್ರಿಯಾಗಬೇಕೆಂದು ಬಹಳ tension ತೆಗೆದುಕೊಳ್ಳುತ್ತೀರಿ. ನಮಗೆ ಆ ಅರ್ಹತೆ ಇಲ್ಲ, ಅದಕ್ಕೆ tension ಇಲ್ಲ. ನಾವು ಆರಾಮವಾಗಿದ್ದೇವೆ.

**ಶ್ರೀ ಸಿದ್ಧರಾಮಯ್ಯ** : ನನಗೇನೂ tension ಇಲ್ಲ. ಬಚ್ಚೇಗೌಡರೆ ಕುಳಿತುಕೊಳ್ಳಿ. 1996 ನಲ್ಲಿ ನನಗೆ majority ಇತ್ತು. ನನಗೆ tension ಬಂದಿದ್ದರೆ ಸತ್ತುಹೋಗಿ ಬಿಡುತ್ತಿದ್ದೆ. No tension. ನಿಮಗೂ ಗೊತ್ತಿದೆ. 1996 ನಲ್ಲಿ ನನಗೆ majority ಇತ್ತು 87 ಎಮ್.ಎಲ್.ಎ.ಗಳು ನನಗೆ ಸೈನ್ ಮಾಡಿ ಕೊಟ್ಟಿದ್ದರು. ಆದರೆ ಮಾಡುವುದಕ್ಕೆ ಆಗಲಿಲ್ಲ. ಬಿಡಿ ಕಥೆ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಯಾವತ್ತೂ ಅಧಿಕಾರಕೋಸ್ಕರ tension ಮಾಡಿಕೊಂಡವನೇ ಅಲ್ಲ. ನಾನು ಬಹಳ ನಿರ್ಲಿಪ್ತನಾಗಿರುವವನು. ಅಧಿಕಾರಕ್ಕೆ ನಾನು ಯವತ್ತೂ ಉಳಿದವನಲ್ಲ.

**ಶ್ರೀ ಆರ್.ಅಶೋಕ್** : ಮುಂದೆ ಯಾವಾಗ ಮುಖ್ಯಮಂತ್ರಿಗಳಾಗುತ್ತೀರಿ ಎನ್ನುವುದನ್ನಾದರೂ ಹೇಳಿ ಸಾರ್,ಬಚ್ಚೇಗೌಡರು ಹೇಳಿದಂತೆ tension ಎಲ್ಲಾ ಹೊರಟು ಹೋಗುತ್ತದೆ.

**ಶ್ರೀ ಸಿದ್ಧರಾಮಯ್ಯ** : ಕಾಂಗ್ರೆಸ್ ಹೈಕಮಾಂಡ್ ಯಾವಾಗ ಮಾಡುತ್ತಾರೋ ಆಗ ಆಗುತ್ತೇನೆ ಅಷ್ಟೇ. ಅದರ ಬಗ್ಗೆ ಹಿಂದೆ ಮುಂದೆ ಹೇಳುವುದೇನಿಲ್ಲ. ನಾನು Chief Minister ಆಗಬೇಕೆಂದು ಆಸೆ ಇಟ್ಟು ಕೊಂಡಿರುವುದು ನಿಜ. I am not an hypocrite. ಅದು ಆದರೆ ಕಾಂಗ್ರೆಸ್ ಪಕ್ಷದಲ್ಲೇ ಎಂದು ನನಗೆ ಗೊತ್ತಿದೆ. ಅದನ್ನು ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಅಧಿಕಾರಕ್ಕೋಸ್ಕರವಾಗಿ ತಲೆ ಕೆಡಿಸಿಕೊಂಡು, ಟೆನ್‌ಶನ್ ಮಾಡಿಕೊಮಡು ಒದ್ದಾಡುವ ಪ್ರವೃತ್ತಿಯವನಲ್ಲ.

**ಶ್ರೀ ಉಮೇಶ್ ವಿ.ಕತ್ತಿ** : 1996ರಲ್ಲಿ majority ಇದ್ದಿದ್ದು ನಿಜ. ಆದರೆ, ನೀವು ಆಗಬಾರದೆನ್ನುವ ದೃಷ್ಟಿಯಿಂದ ದೇವೇಗೌಡರವರು ನಿಮ್ಮ ಹೆಸರನ್ನು propose ಮಾಡಿದ್ದರು. ಹಾಗಾಗಿ ನೀವು ಆಗಲಿಲ್ಲ.

**ಶ್ರೀ ಸಿ.ಎಸ್.ಪುಟ್ಟರಾಜು** : ಕಾರಣ ಬೇಡ ಎಂದು ಹೇಳಿದ್ದಾರಲ್ಲ.

**ಶ್ರೀ ಉಮೇಶ್ ವಿ ಕತ್ತಿ** : ದೇವೇಗೌಡರು ನಿಮ್ಮ ಹೆಸರನ್ನು propose ಮಾಡದೇ ಇದ್ದಿದ್ದರೆ ನೀವು ಆಗುತ್ತಿದ್ದಿರಿ. ದೇವೇಗೌಡರು ನಿಮ್ಮ ಹೆಸರು propose ಮಾಡಿದ್ದಕ್ಕೆ ನಿಮ್ಮ majority ಹೋಯಿತು. Correction ಮಾಡಿದೆ ಅಷ್ಟೇ.

**ಶ್ರೀ ಸಿ.ಎಸ್.ಪುಟ್ಟರಾಜು : ಅವರನ್ನು ಕುಳ್ಳಿರಿಸಿ.**

(ಗೊಂದಲ)

**ಶ್ರೀ ಉಮೇಶ್ ವಿ.ಕತ್ತಿ** : ಆಗ ನಾನು ಒಬ್ಬ ಶಾಸಕನಾಗಿದ್ದೆ. ನನ್ನ ಅನುಭವವನ್ನು ಹಂಚಿಕೊಳ್ಳುತ್ತಿದ್ದೇನೆ. ಅದನ್ನು Correction ಮಾಡಬೇಕು ಅಷ್ಟೇ ನಾನು.

(ಗೊಂದಲ)

**ಶ್ರೀ ಉಮೇಶ್ ವಿ.ಕತ್ತಿ** : ದೇವೇಗೌಡರು propose ಮಾಡಿದ ಕಾರಣಕ್ಕೆ ಆಗಲಿಲ್ಲ. ನಾನು ಸಿದ್ದರಾಮಯ್ಯನವರ ಜೊತೆಗೇ ಇದ್ದೆ. ಸಿದ್ದರಾಮಣ್ಣನಿಗೆ majority ಇತ್ತು. ಆಗ ದೇವೇಗೌಡರು ಹೆಸರು propose

ಮಾಡಿದ್ದಕ್ಕೆ ತಾವು ನಿಲ್ಲುವುದಕ್ಕೆ ಆಗಲಿಲ್ಲ. ಅದು ನನಗೆ ಗೊತ್ತಿದೆ. ನನ್ನ ಅನುಭವ ಹಂಚಿಕೊಳ್ಳಬೇಕು ಅಷ್ಟೇ ನಾನು.

**ಶ್ರೀ ಸಿ.ಎಸ್.ಪುಟ್ಟರಾಜು** : ಕೇಳಿರುವ ಪ್ರಶ್ನೆಗೆ ಉತ್ತರ ಹೇಳಿ. ಹೆಚ್ಚು ಮಾತನಾಡುವುದಕ್ಕೆ ಹೋಗಬೇಡಿ. ಸಿದ್ದರಾಮಯ್ಯನವರನ್ನು ನೀವೇನು ಹೊಸದಾಗಿ ನೋಡುತ್ತಿಲ್ಲ.

**ಶ್ರೀ ಉಮೇಶ್ ವಿ.ಕತ್ತಿ** : ಅವರೂ ನೋಡಿದ್ದಾರೆ, ನಾನು ನೋಡಿದ್ದೇ–ನೆ. ನೀವು ಹೊಸದಾಗಿ ನೋಡುತ್ತಿದ್ದಿರ ಅಷ್ಟೆ.

**ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್** : ಉಮೇಶ್ ಅವರೇ, ಅವರು ಮುಖ್ಯಮಂತ್ರಿಗಳಾಗುವುದಕ್ಕೆ ವಿರೋಧ ಮಾಡಿದವರು ನೀವೇ.

**ಶ್ರೀ ಸಿದ್ದರಾಮಯ್ಯ** : ನಾನು ಮುಖ್ಯಮಂತ್ರಿಯಾಗುವುದಕ್ಕೆ first ಪುಟ್ಟರಾಜುನೂ ಬರೆದು ಕೊಟ್ಟಿದ್ದರು. ಆದ್ದರಿಂದ ಮಾನ್ಯ ಛೇರ್ಮನ್‌ರವರೆ, ನಾನೇನು ಹೇಳುತ್ತಿದ್ದೇನೆಂದರೆ ಮುಖ್ಯಮಂತ್ರಿಯಾಗಬೇಕೆಂದು ಹೇಳಿ ವಾಮಮಾರ್ಗದಿಂದ ಪ್ರಯತ್ನ ಮಾಡುವುದಕ್ಕೆ ಹೋಗುವುದಿಲ್ಲ. ಅಶೋಕ್–ರವರೆ, ನಾವು ಅಹಿಂದ ಸಮಾವೇಶ ಮಾಡಿದಾಗ, ನನಗೆ ಹೇಳಿ ಕಳುಹಿಸಿದರು. ನೀನು ಅಹಿಂದ ಸಮಾವೇಶ ಮಾಡಬೇಡ. ನಿನ್ನನ್ನು Deputy Chief Minister ಆಗಿ ಮುಂದುವರೆಸುತ್ತೇವೆಂದು ಹೇಳಿದರು. ಸಮಾವೇಶ ಮಾಡಿದರೆ ನಿನಗೆ Deputy Chief Minister ಹೋಗುತ್ತದೆ ಎಂದು ಹೇಳಿದರು. ನಾನು ಹೇಳಿದೆ, ಹೋದರೆ ಹೋಯಿತು. Deputy Chief Minister ಆಗುವುದಕ್ಕೆ ನಮ್ಮ ಅಪ್ಪ ಏನು ನನಗೆ ಹುಟ್ಟಿಸಿ ಸಾಕಿರಲಿಲ್ಲ. ನಮ್ಮ ಅಪ್ಪ ಹೊಲ ಉಳಬಹುದು, ಕುರಿ ಕಾಯಬಹಿದೆಮದು ತಿಳಿದುಕೊಂಡಿದ್ದರು. ಏನೋ luckily ಓದಿದೆ, ರಾಜಕಾರಣಕ್ಕೆ ಬಂದೆ; ಇಲ್ಲಿವರೆಗೂ ಬಂದಿದ್ದೇವೆ. ನಾವೇನು ಇದರ ಬಗ್ಗೆ ಕನಸು ಕಂಡಿರಲಿಲ್ಲ. ನಮ್ಮದೇನು ರಾಜಕೀಯ ಕುಟುಂಬವೂ ಅಲ್ಲ. ನಮ್ಮ ಅಪ್ಪ ಗ್ರಾಮ ಪಂಚಾಯತಿ ಎಲೆಕ್ಷನ್‌ನಲ್ಲಿ ಸೋತಿದ್ದರು. It is a matter of fact, ನಾನು ತಾಲ್ಲೂಕು ಬೋರ್ಡ್‌ಗೆ ಚುನಾವಣೆಗೆ ನಿಂತುಕೊಳ್ಳಬೇಕೆಂದು ನಮ್ಮ ಅಪ್ಪನ ಹತ್ತಿರ ಕೇಳುವುದಕ್ಕೆ ಹೋದೆನು. ಯಾವುದೇ ಕಾರಣಕ್ಕೂ ನಿಲ್ಲಬೇಡ. ಹಾಗಿದ್ದರೆ ಮನೆ ಬಿಟ್ಟು ನೀನು ಹೊರಟು ಹೋಗು ಎಂದು 1978 ರಲೇ ನಮ್ಮಪ್ಪ ಹೇಳಿ ಬಿಟ್ಟರು. ಆ ನಂತರ ಊರಿನವರೆಲ್ಲಾ ಪಂಚಾಯಿತಿ ಸೇರಿಸಿ ನ್ಯಾಯ ಮಾಡಿ, ಆಮೇಲೆ

ನಮ್ಮ ಅಪ್ಪನನ್ನು ಒಪ್ಪಿಸಿ, ನೀನು ಒಂದು ರೂಪಾಯಿ ಖರ್ಚು ಮಾಡಿ ಕೊಡಬೇಡಪ್ಪ ಎಂದು ಹೇಳಿ, ನಾನು ಲಾಯರ್ ಕೆಲಸದಲ್ಲಿ ಸಂಪಾದನ್ನೆ ಮಾಡಿದ್ದ ಕೇವಲ ಮೂರರೂವರೆ ಸಾವಿರ ರೂಪಾಯಿ ದುಡ್ಡಿನಲ್ಲಿ ತಾಲ್ಲೂಕು ಬೋರ್ಡ್ member ಆದೆ. ಆಮೇಲೆ ನಮ್ಮ ಅಪ್ಪನಿಗೆ ಖುಷಿ ಆಯಿತು. ಅದು ಬೇರೆ ವಿಚಾರ. ಆಮೇಲೆ ನಮ್ಮ ಅಪ್ಪ ಬಹಳ ಖುಷಿಪಟ್ಟು Assembly ಗೆ ನಿಲ್ಲಿಸಿದ್ದರು It's a differdnt thing. ನಮ್ಮ ಅಪ್ಪ ಗ್ರಾಮ ಪಂಚಾಯಿತಿಯಲ್ಲಿ ನಿಂತಾಗ ನಮ್ಮ ಊರಿನವರು ಸೋಲಿಸಿ ಬಿಟ್ಟಿದ್ದರು. ಅದಕ್ಕೆ ಚುನಾವಣೆ ಅಂದರೆ ನಮ್ಮಪ್ಪ ಉರಿದು ಬೀಳುತ್ತಿದ್ದರು. ಆಗುತ್ತಿರಲಿಲ್ಲ But ಅದೇನೇ ಇರಲಿ. ನಮಗೂ ಈ ದಾರಿ ಗೊತ್ತೇ ಇರಲಿಲ್ಲ. ಲಾ ಕಾಲೇಜಿನಲ್ಲಿ ನಂಜುಂಡಸ್ವಾಮಿ ಸಹವಾಸ ಸಿಗದೇ ಹೋಗಿದ್ದರೆ, ನಾವು ರಾಜಕೀಯಕ್ಕೂ ಬರುತ್ತಿರಲಿಲ್ಲ ಏನೂ ಇಲ್ಲ. ಎಲ್ಲೋ ಲಾಯರ್ ಕೆಲಸ ಮಾಡಿಕೊಂಡು ಜೀವನ ಮಾಡಿಕೊಂಡು ಇರುತ್ತಿದ್ದೆವು. ಆಕಸ್ಮಿಕವಾಗಿ ರಾಜಕೀಯಕ್ಕೆ ಬಂದೆವು, ಬಂದಿದ್ದೇವೆ. ಇಲ್ಲಿಯವರೆಗೆ ಕೈ ಬಾಯಿ ಶುದ್ಧವಿಟ್ಟುಕೊಂಡು ರಾಜಕಾರಣ ಮಾಡಿಕೊಂಡು ಬಂದಿದ್ದೇವೆ. ಯಾರ ಕೈಯಲ್ಲೂ ಸಹ ಛೀ! ಥೂ! ಎಂದು ಎನಿಸಿಕೊಳ್ಳುವ ಮಟ್ಟಿಗೆ ರಾಜಕೀಯ ಮಾಡಿಲ್ಲ. ಅಂಥ ಪರಿಸ್ಥಿತಿ ಬಂದರೆ ಅವತ್ತೇ ರಾಜಕೀಯ ಬಿಟ್ಟು ಹೋಗುತ್ತೇನೆ. ಇದರಿಂದಲೇ ಬದುಕಬೇಕು ಎಂದೇನೂ ಇಲ್ಲ. ನಮ್ಮ ಅಪ್ಪ ನಮಗೆ ಸಾಕಾಗುವಷ್ಟು, ಜೀವನ ಮಾಡುವುದಕ್ಕಾಗುವಷ್ಟು ಆಸ್ತಿ ಇಟ್ಟಿದ್ದಾರೆ. ಆದ್ದರಿಂದ ಜೀವನ ಮಾಡುವುದಕ್ಕೆ ತೊಂದರೆಯೇನೂ ಇಲ್ಲ. ನಾನೇನು ಶ್ರೀಮಂತ ಏನಲ್ಲ. ಎಷ್ಟು ಆಸ್ತಿ ಬೇಕೋ ಅಷ್ಟು, ಆದರೆ ಬಚ್ಚೇಗೌಡರಷ್ಟು ಆಸ್ತಿ ನಮ್ಮ ಹತ್ತಿರ ಇಲ್ಲ. ಅವರಿಗೆ ಬಹಳ ದೊಡ್ಡ ಆಸ್ತಿಯಿದೆ ರೀ!. . .

**ಶ್ರೀ ಆರ್.ಅಶೋಕ್** : ಅವರು ಪಾಳೇಗಾರರು ಸರ್.

**ಶ್ರೀ ಸಿದ್ಧರಾಮಯ್ಯ** : ದೊಡ್ಡ ಆಸ್ತಿಯಿದೆ ಅವರಿಗೆ. ಏನು ಬಚ್ಚೇಗೌಡರೇ?

**ಶ್ರೀ ಬಿ.ಎನ್. ಬಚ್ಚೇಗೌಡ** : ಹೌದು ಸರ್.

**ಶ್ರೀ ಸಿದ್ಧರಾಮಯ್ಯ** : ಹೌದು, ಬಚ್ಚೇಗೌಡರಿಗೆ ದೊಡ್ಡ ಆಸ್ತಿಯಿದೆ. ನಾವು ಆ ತರಹ ದೊಡ್ಡ ಆಸ್ತಿವಂತರೇನಲ್ಲ. ನಾವು ಉಮೇಶ್ ಕತ್ತಿಯವರ

ತರಹವೂ ಅಲ್ಲ. ಅವರಿಗೆ 60–70 ಎಕರೆ ಜಮೀನು ಇದೆ. ಊಟ ಮಾಡುವುದಕ್ಕೆ, ಬಟ್ಟೆಗೆ, ಜೀವನ ಮಾಡುವುದಕ್ಕೆ ಇಟ್ಟಿದ್ದರು.

**ಶ್ರೀ ಸಿ.ಎಸ್.ಪುಟ್ಟರಾಜು** : ಕತ್ತಿ ಸಾಹೇಬರು ಮಕ್ಕಳನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಬೇಕೆಂದು ಈ ರಾಜ್ಯವನ್ನು ಎರಡು ಭಾಗ ಮಾಡಬೇಕೆಂದು ಇದ್ದಾರೆ. ಅವರಿಗೆ ಏಕೆ ಹೋಲಿಕೆ ಮಾಡುತ್ತೀರಿ?

**ಶ್ರೀ ಸಿದ್ಧರಾಮಯ್ಯ** : ಪಾಪ, ಅವರ ಮಗನನ್ನು ಮುಖ್ಯಮಂತ್ರಿ ಮಾಡಬೇಕೆಂದು ಆಸೆ ಇಟ್ಟುಕೊಂಡರೆ ತಪ್ಪೇನಿಲ್ಲ. Nothing is worng. ಆದರೆ ರಾಜ್ಯ ಒಡೆಯುವುದಕ್ಕೆ ಹೋಗಬೇಡಿ. ರಾಜ್ಯ ಒಡೆಯುವುದಕ್ಕೆ ಹೋಗಬಾರದು.

(ಗೊಂದಲ)

**ಶ್ರೀ ಉಮೇಶ್ ವಿ.ಕತ್ತಿ** : ನಾನು ಒಂದು correction ಮಾಡುತ್ತೇನೆ. ಇಲ್ಲ ಸರ್, ನಾನು ಅಖಂಡ ಕರ್ನಾಟಕಕ್ಕೆ ಮುಖ್ಯಮಂತ್ರಿಯಾದರೆ, ನನ್ನ ಮಗ ಆಗ ಎಂಎಲ್ಎ ಆದರೆ ಉತ್ತರ ಕರ್ನಾಟಕದ ಮುಖ್ಯಮಂತ್ರಿ ನನ್ನ ಮಗ!

**ಶ್ರೀ ಸಿದ್ಧರಾಮಯ್ಯ** : ನಿನ್ನ ಮಗ ಆಗುತ್ತಾನೋ ಇಲ್ಲವೋ ಗೊತ್ತಿಲ್ಲ. ನೀವಂತೂ ಅಖಂಡ ಕರ್ನಾಟಕದ ಮುಖ್ಯಮಂತ್ರಿಯಾಗುವುದಿಲ್ಲ!

**ಶ್ರೀ ಉಮೇಶ್ ವಿ.ಕತ್ತಿ** : 100% ನಾನು ಅಖಂಡ ಕರ್ನಾಟಕದ ಮುಖ್ಯಮಂತ್ರಿಯಾಗುತ್ತೇನೆ.

**ಶ್ರೀ ಸಿದ್ಧರಾಮಯ್ಯ** : ಆಗುವುದಿಲ್ಲ ಬಿಡಪ್ಪ.

**ಶ್ರೀ ಉಮೇಶ್ ವಿ.ಕತ್ತಿ** : ನಾನು ಆಗಲೇ ಬೇಕು ಸರ್. ಆಗದೇ ಆಗುವ ಹಾಗೆ ಇಲ್ಲ. ಆದರೆ ನಾನು ಅದರ ಬೆನ್ನು ಹತ್ತಿಲ್ಲ. ಆಗೇ ಆಗುತ್ತೀನಿ.

**ಶ್ರೀ ಸಿದ್ಧರಾಮಯ್ಯ** : ಮುಂದಿನ ಬಾರಿ ನಿಮ್ಮ claim ಇದೆಯೇ?

**ಶ್ರೀ ಉಮೇಶ್ ವಿ.ಕತ್ತಿ** : ಇನ್ನೂ ವಯಸ್ಸಿದೆ ಸರ್. ಈಗ ನನಗೆ 50 ವರ್ಷ, ಇನ್ನು 20 ವರ್ಷ time ಇದೆ. ನಾನು ಇನ್ನೂ retire ಆಗುವುದಕ್ಕೆ 20 ವರ್ಷ time ಇದೆ.

**ಶ್ರೀ ಮುರುಗೇಶ್ ಆರ್.ನಿರಾಣಿ** : ಈ ಬಾರಿ ಅವಕಾಶವಿತ್ತು, ಆದರೆ ಬಿಟ್ಟು ಕೊಟ್ಟಿದ್ದಾರೆ!

**ಶ್ರೀ ಸಿದ್ಧರಾಮಯ್ಯ** : ಹಾಗಾದರೆ ನಿಮಗೆ? ನೀವೆಲ್ಲಾ ಕೆ.ಜೆ.ಪಿ.ಗೆ ಹೋಗುತ್ತಿದ್ದೀರಿ. ಈಗ ನಿಮ್ಮ ಭವಿಷ್ಯ ಮಂಕಾಗಿ ಹೋಯಿತು.

**ಡಾ|| ಹೆಚ್.ಸಿ.ಮಹದೇವಪ್ಪ** : ಇವರದ್ದೂ ಈ ಬಾರಿ ಇತ್ತು. ಆದರೆ ಬಿಟ್ಟು ಕೊಟ್ಟಿದ್ದಾರೆ.

**ಶ್ರೀ ಸಿದ್ಧರಾಮಯ್ಯ** : ಆಗಿ ಹೋಯಿತು. ಇದರ ಭವಿಷ್ಯ ಮಂಕಾಗಿ ಹೋಯಿತಪ್ಪ. ಬಿಜೆಪಿಯಲ್ಲಿದ್ದಿದ್ದರೆ ಹೇಗೋ ಸ್ವಲ್ಪ ಪರವಾಗಿರಲಿಲ್ಲ. ಹೇಗೋ ತಳುಕು ಬಳುಕು ಇರುತ್ತಿತ್ತು. ಅಲ್ಲಿಗೆ ಹೋದ ಮೇಲೆ?. . .

**ಶ್ರೀ ಕೆ.ಎಸ್.ಈಶ್ವರಪ್ಪ** : ಎಲ್ಲಿ ಹೋಗಿದ್ದಾರೆ? ಸುಮ್ಮನೆ, ನೀವು ಹೇಳುತ್ತಿದ್ದೀರಷ್ಟೇ?

**ಶ್ರೀ ಸಿದ್ಧರಾಮಯ್ಯ** : ಅಯ್ಯೋ, ಅವರನ್ನು ಕೇಳ್ರಪ್ಪಾ.

**ಶ್ರೀ ಕೆ.ಎಸ್.ಈಶ್ವರಪ್ಪ** : ಈಗ ನಿಮ್ಮ ಇಬ್ರಾಹಿಂ ಕೂಡಾ ಕೆ.ಜೆ.ಪಿ.ಗೆ ನಿಮ್ಮನ್ನು ಸೇರಿಸುವುದಕ್ಕೆ ಹೊರಟಿದ್ದರು.

**ಶ್ರೀ ಸಿದ್ಧರಾಮಯ್ಯ** : ನನ್ನನ್ನಾ? Impossible !

**ಶ್ರೀ ಕೆ.ಎಸ್.ಈಶ್ವರಪ್ಪ** : ಹೌದು, ಮತ್ತೆ ನೀವು ಇವರನ್ನು ಎಂದರೆ?

(ಗೊಂದಲ)

**ಶ್ರೀ ಆರ್. ಅಶೋಕ್** : ಹೌದು ಸರ್, ಸಂಧಾನ ಮಾಡುತ್ತಿದಾರೆಂದು ಎಲ್ಲಾ ಪತ್ರಿಕೆಗಳಲ್ಲೂ ಬಂದಿತ್ತು.

**ಶ್ರೀ ಸಿದ್ಧರಾಮಯ್ಯ** : ನನ್ನನ್ನು ಸೇರಿಸುವುದಕ್ಕೆ ಎಂದು ಅಲ್ಲ.

**ಶ್ರೀ ಆರ್. ಅಶೋಕ್** : ಹೌದು ಸರ್, ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ.

**ಶ್ರೀ ಸಿದ್ಧರಾಮಯ್ಯ** : ಸುಮ್ಮನೆ ಏನೇನೋ ಹೇಳುವುದಕ್ಕೆ ಹೋಗಬೇಡಿ.

**ಶ್ರೀ ಕೆ.ಎಸ್.ಈಶ್ವರಪ್ಪ** : ನೋಡಪ್ಪಾ ಇವರು ತಣ್ಣಗೆ ಬಿಜೆಪಿ ಜೊತೆ ಇದ್ದಾರೆ. ನೀವು ಹೋಗಿದ್ದಿರಿ, ನೀವು ಹೋಗಿದ್ದಿರಿ ಎಂದು 10–10 ಬಾರಿ ಹೇಳಿದರೆ ಇವರ ಹೆಸರು ಪೇಪರ್‌ನಲ್ಲಿ ಬಂದಿದ್ದರೆ, ನಿಮ್ಮ ಹೆಸರೂ ಪೇಪರ್‌ನಲ್ಲಿ ಬಂದಿದೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ** : ನನಗೆ ಗೊತ್ತಿಲ್ಲಪ್ಪಾ. ಇಲ್ಲ ಅಂದರೆ ಇಲ್ಲ. 6 ಜನ ಮಂತ್ರಿಗಳು ಹಾವೇರಿಯಲ್ಲಿ breakfast ಸಭೆಗೆ, ಯಡಿಯೂರಪ್ಪ ಸಭೆಗೆ ಹೋಗಿದ್ದರೋ, ಇಲವೋ?

**ಶ್ರೀ ಕೆ.ಎಸ್.ಈಶ್ವರಪ್ಪ** : ಇಬ್ರಾಹಿಂ ಹೋಗಿದ್ದರೋ ಇಲ್ಲವೋ, ನಿಮ್ಮ ಹೆಸರು ಹೇಳಿ ಬಂದಿದ್ದಾರೋ, ಇಲ್ಲವೋ?

**ಶ್ರೀ ಸಿದ್ದರಾಮಯ್ಯ** : ನನ್ನ ಹೆಸರನ್ನು ಹೇಳಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ** : ಇಬ್ರಾಹಿಂ ಅವರನ್ನು ಕೇಳಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ** : ಕೇಳಿ, ನಿಜ ಹೇಳಿಸಿ. ಇಬ್ರಾಹಿಂ ನನ್ನ ಹೆಸರು ಹೇಳಿದ್ದರೆ, ಇವತ್ತೇ ನಾನು ರಾಜೀನಾಮೆ ಕೊಟ್ಟು ಬಿಡುತ್ತೇನೆ. ಹೌದು ಇವತ್ತೇ ರಾಜೀನಾಮೆ ಕೊಡುತ್ತೇನೆ.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ** : ನೀವು ರಾಜಕಾರಣದಲ್ಲಿ ಇರಬೇಕು.

**ಶ್ರೀ ಸಿದ್ದರಾಮಯ್ಯ** : ಹೌದು, ಸತ್ಯ ಹೊರಗೆ ಬರಬೇಕು. ಸತ್ಯ ಗೊತ್ತಾಗಬೇಕು.

**ಶ್ರೀ ಕೆ.ಎಸ್. ಈಶ್ವರಪ್ಪ** : ಇವರೂ ಕೂಡಾ ಕಾಫಿ, ತಿಂಡಿಗೆ ಹೋಗಿದ್ದಾರೆ. ಇಲ್ಲ ಎಂದು ಹೇಳುತ್ತಿಲ್ಲ.

**ಶ್ರೀ ಸಿದ್ದರಾಮಯ್ಯ** : ನೀವು ಈ ತರಹ defend ಮಾಡಿಕೊಂಡರೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ** : ಇಬ್ರಾಹಿಂ ಹೋಗಿದ್ದರೋ, ಇಲ್ಲವೋ?

**ಶ್ರೀ ಸಿದ್ದರಾಮಯ್ಯ** : ಇಬ್ರಾಹಿಂ, ಹಾವೇರಿಗೆ ಹೋಗಿರಲಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ** : ಹಾವೇರಿಗಲ್ಲ.

**ಶ್ರೀ ಸಿದ್ದರಾಮಯ್ಯ** : ಬೇರೆ ಕಡೆ ಅವರಿಬ್ಬರೂ ಭೇಟಿ ಮಾಡಿರುವುದು ನಿಜ. ಇಬ್ರಾಹಿಂ ಯಡಿಯೂರಪ್ಪನವರನ್ನು ಬೇಟಿ ಮಾಡಿರುವುದು ನಿಜ.

**ಶ್ರೀ ಕೆ.ಎಸ್.ಈಶ್ವರಪ್ಪ** : ಇವರು ನೇರವಾಗಿ ಹೋಗಿದ್ದರು.

**ಶ್ರೀ ಸಿದ್ದರಾಮಯ್ಯ** : Ibrahim is not Siddaramaiah, ಅವರಿಗೆ ನಾನು Power of Attorney ಬರೆದು ಕೊಟ್ಟಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ** : ಕೊಟ್ಟಿದ್ದೀರಾ ಎಂದು ನಾನು ಹೇಳುತ್ತಿಲ್ಲಪ್ಪಾ, ಹಾಗೆ ಅವರೂ ಕೂಡಾ ಬಿಜೆಪಿಯಲ್ಲೆ ಇರುತ್ತೇವೆಂದು ಯಾರಿಗೂ ಕೂಡಾ Power of Attorney ಬರೆದು ಕೊಟ್ಟಿಲ್ಲ. ಇಲ್ಲೇ ಇರುತ್ತೇವೆಂದು 10–10 ಬಾರಿ ಹೇಳುತ್ತಾರೆ.

**ಡಾ ॥ ಹೆಚ್.ಸಿ.ಮಹದೇವಪ್ಪ** : ಯಾರೂ ಕೂಡಾ Power of attorney ಬರೆದು ಕೊಡುವ ಪ್ರಶ್ನೆ ಇಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ** : ಮಹದೇವಪ್ಪ ನೀವ್ಯಾಕೆ ಮಧ್ಯೆ ಬರುತ್ತಿದ್ದೀಯಾ? ನಾನು ನಿಮ್ಮ ಹೆಸರು ಇನ್ನೂ ಹೇಳಿಲ್ಲ. ನಾನು ನಿಮ್ಮ ಹೆಸರನ್ನು ಎಲ್ಲಾದರೂ ಹೇಳಿದ್ದೇನೆಯೇ?

**ಶ್ರೀ ಸಿದ್ದರಾಮಯ್ಯ** : ಅವರ ಹೆಸರನ್ನು ಹೇಳಿ ಪರವಾಗಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ** : ನಾನು ಸುಮ್ಮ ಸುಮ್ಮನೆ ಅವರ ಹೆಸರನ್ನು ಹೇಳುವುದಿಲ್ಲ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ** : ಮತ್ತೆ ಮತ್ತೆ ನೀವು ತಿವಿಯುತ್ತಿದ್ದೀರಿ, ಇದಕ್ಕೆ ನಾನು ಏನು ಹೇಳಲಿ?

**ಶ್ರೀ ಸಿದ್ದರಾಮಯ್ಯ** : ಅವರನ್ನು ಕೇಳುತ್ತೀನಿ ಇರಪ್ಪಾ, ಅವರು ಇಲ್ಲಿ ಇರುತ್ತಾರೋ ಅಥವಾ ಅಲ್ಲಿಗೆ ಹೋಗುತ್ತಾರೋ ಎಂದು. ನಿಮಗೂ ಅನುಕೂಲವಾಗಲಿ ಎಂದು. ಕುಳಿತುಕೊಳ್ಳಿ.

**ಶ್ರೀ ಕೆ.ಎಸ್. ಈಶ್ವರಪ್ಪ** : ಏನೆಂದು? ನಮಗೆ ಅವರುಗಳ ಬಗ್ಗೆ ಪೂರಾ ವಿಶ್ವಾಸವಿದೆ. ಇಡೀ ರಾಜ್ಯಕ್ಕೆ ನೀವು ಗೊಂದಲ ಮಾಡಬೇಡಿ.

**ಶ್ರೀ ಸಿದ್ದರಾಮಯ್ಯ** : ಒಂದು ನಿಮಿಷ ಕೇಳುತ್ತಿದ್ದೇನೆ, ನಿರಾಣಿಯವ–ರೇ, ನೀವು ಸ್ಪಷ್ಟಪಡಿಸಿ, ನೀವು ಯಡಿಯೂರಪ್ಪನವರ ಪರ ಹೋಗುವವರೋ, ಕೆಜೆಪಿಗೆ ಹೋಗುವವರೋ ಅಥವಾ ಬಿಜೆಪಿಯಲ್ಲಿ ಇರುವವರೋ? ಹೇಳಿ ನೋಡೋಣ.

**ಶ್ರೀ ಗೋವಿಂದ ಎಂ.ಕಾರಜೋಳ** : ಉಮೇಶ್ ಕತ್ತಿಯವರು ಏನೋ ಹೇಳುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ** : ನಿಮಗೆ ಅನುಕೂಲವಾಗುತ್ತದೆ ಇರಿ.

O - 24 - F-61

**ಶ್ರೀ ಕೆ.ಎಸ್.ಈಶ್ವರಪ್ಪ** : ಇಬ್ರಾಹಿಂ ನೀಡಿರುವ ಪಟ್ಟಿಯಲ್ಲಿ ಯಾರು ಯಾರ ಹೆಸರುಗಳಿವೆ ಎಂದು ಹೇಳಲೆ ಮಹದೇವಪ್ಪನವರೆ? ನೀವು ಹೇಳಿ ಎಂದರೆ ಹೇಳುತ್ತೇನೆ.

**ಡಾ ॥ ಹೆಚ್.ಸಿ.ಮಹದೇವಪ್ಪ** : ನೀವು ಉಪ ಮುಖ್ಯಮಂತ್ರಿಗಳು tension ಆಗಬಾರದು, clarify ಮಾಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ** : ಯಾವುದಕ್ಕೆ tension ಸ್ವಾಮಿ? ಅಶೋಕ್ ಹೇಳಿದಂತೆ, ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ ಇಲ್ಲಿ ಹೊಗಡೆ ಅಧಿಕಾರ ಸ್ವೀಕಾರ ಮಾಡಿದ ದಿನದಿಂದಲೂ ನೀವು ಕನಸು ಕಾಣುತ್ತಿದ್ದೀರಿ. ನೀವು ನನಗೆ ಒಳ್ಳೆಯ ಸ್ನೇಹಿತರು.

**ಡಾ ॥ ಹೆಚ್.ಸಿ. ಮಹದೇವಪ್ಪ** : ಬರುತ್ತೇನೆ, ನೀವು ಚೆನ್ನಾಗಿರಬೇಕು.

(ಗೊಂದಲ)

**ಶ್ರೀ ಸಿದ್ದರಾಮಯ್ಯ** : ನಾನು ಏಕೆ ಹೇಳುತ್ತಿದ್ದೇನೆಂದರೆ, ಹೋಗಿದ್ದ 6 ಜನರಲ್ಲಿ ಈಗಾಗಲೇ ಇಬ್ಬರು ಹೊರಟು ಹೋಗಿದ್ದಾರೆ. ಉದಾಸಿಯವರೊಬ್ಬರು ಮತ್ತು ಶೋಭಾ ಕರಂದ್ಲಾಜೆಯವರು ಹೊರಟು ಹೋಗಿದ್ದಾರೆ. ಉಳಿದ 4 ಜನರ ಬಗ್ಗೆ ಏನು ಎನ್ನುವುದರ ಬಗ್ಗೆ ನನಗೆ ತಿಳಿದುಕೊಳ್ಳಬೇಕೆಂಬ ಕುತೂಹಲ.

**ಶ್ರೀ ಉಮೇಶ್ ವಿ.ಕತ್ತಿ** : ನಾನು ಹಾವೇರಿಗೆ ಹೋಗಿರಲಿಲ್ಲ.

**ಶ್ರೀ ಸಿದ್ದರಾಮಯ** : ನೀವು ಹೋಗಿರಲಿಲ್ಲವೇ?

**ಶ್ರೀ ಉಮೇಶ್ ವಿ.ಕತ್ತಿ** : ಹಾವೇರಿಗೆ ನಾನು ಹೋಗಿರಲಿಲ್ಲ. ನಿಮಗೆ ನಾನು clarify ಮಾಡುತ್ತೇನೆ.

**ಶ್ರೀ ಸಿದ್ದರಾಮಯ್ಯ** : ನೀವು ಹೋಗಿಲ್ಲ ಎಂದರೆ ಬೇಡ.

**ಶ್ರೀ ಉಮೇಶ್ ವಿ.ಕತ್ತಿ** : ನನ್ನ ಹೆಸರು ತೆಗೆದುಕೊಂಡಿದ್ದೀರಲ್ಲ? ನಾನು ಹಾವೇರಿಗೆ ಹೋಗಿರಲಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ** : ನೀವು ಹೋಗಿದ್ದೀರಾ ಎಂದು ನಾನು ಹೇಳುತ್ತೇನೆ. ನಾನು ಇಬ್ರಾಹಿಂನವರ ಪಟ್ಟಿ ಕೋಡಲೇ ಮಹದೇವಪ್ಪನವರೇ?

**ಶ್ರೀ ಸಿದ್ದರಾಮಯ್ಯ** : ಕೊಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಯಡಿಯೂರಪ್ಪನವರ ಹತ್ತಿರ ಇಬ್ರಾಹಿಂ ಹೋಗಿ ಯಾರು ಯಾರು ಬರುತ್ತಾರೆ ಎಂದು ಕೊಟ್ಟಿರುವ ಪಟ್ಟಿಯನ್ನು ನಿಮಗೆ ಕೊಡಲೇ? ಕೊಡಿ ಎಂದರೆ ಕೊಡುತ್ತೇನೆ.

ಡಾ || ಹೆಚ್.ಸಿ.ಮಹದೇವಪ್ಪ : ಅಯ್ಯೋ, ಅವರು ಯಾರ್‍ಯಾರನ್ನು ಭೇಟಿ ಮಾಡಿದ್ದರೋ ಏನು ಕಥೆಯೋ, ಯಾರ್‍ಯಾರ ಹೆಸರು ಇದೆಯೋ, ಏನೋ? ಆದೆಲ್ಲಾ ಏಕೆ?.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇನ್ನೂ ಯಾವ್ಯಾವುದೋ, ನೀವುಗಳು 3rd party ವಿಚಾರ ಹೇಳುವುದಕ್ಕೆ ಹೋಗಬೇಡಿ. Ibrahim is not Siddaramaiah and Siddaramaiah is not Ibrahim. I have not given Power of Attorney to Ibrahim.

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ಅವರು ಅವಳಿ-ಜವಳಿ ತರಹ ಇದ್ದೀರಪ್ಪ.

ಶ್ರೀ ಸಿದ್ದರಾಮಯ್ಯ : ಆ ರೀತಿ ಏನೂ ಇಲ್ಲ. ಅವರೇ ಬೇರೆ, ನಾವೇ ಬೇರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಇಲ್ಲವೇ ಹಾಗಿದ್ದರೆ ಸರಿ ಬಿಡಿ.

ಶ್ರೀ ಸಿದ್ದರಾಮಯ್ಯ : Ibrahim is Ibrahim, Siddaramaih is Siddaramaih. Ibrahim, he can take his own decision as far as Ibrahim is concerned, as far as Siddaramaih is concerned it is only Siddaramaih who could take a decision. Nobody else.

ಶ್ರೀ ಆರ್.ಅಶೋಕ್ : ನಮ್ಮ ಬಗ್ಗೆ?

ಶ್ರೀ ಸಿದ್ದರಾಮಯ್ಯ : ಕುಳಿತುಕೊಳ್ಳಲೇ?

ಶ್ರೀ ಆರ್.ಅಶೋಕ್ : ಬೇಡ ಸರ್, ಹಾಗೆ ಇರಿ.

ಶ್ರೀ ಸಿದ್ದರಾಮಯ್ಯ : ಏಕೆ?

ಶ್ರೀ ಆರ್. ಅಶೋಕ್ : ಉಮೇಶ್ ಕತ್ತಿಯವರ ಬಗ್ಗೆ, ಎಲ್ಲರ ಬಗ್ಗೆ ಹೇಳುತ್ತಿದ್ದೀರಿ. ನಮ್ಮಲ್ಲಿ ಒಬ್ಬೊಬ್ಬರನ್ನೇ ತೋರಿಸಿ ಹೀಗೆ, ನೀವು ಯಾರ್‍ಯಾರು ಎಲ್ಲೆಲ್ಲಿ ಇದ್ದೀರಾ ಎಂದು, ನಿಮ್ಮ ಬೆನ್ನ ಹಿಂದೆಯೇ ಎಲ್ಲಾ ತೋರಿಸಿದರೆ,

ಲ್ಯಾಟೀನ್ ಹಿಡಿದುಕೊಂಡು ಶರದ್‌ಪವಾರ್ ಹತ್ತಿರ ಮೀಟಿಂಗ್ ಹೋಗಿದ್ದರಲ್ಲ? ಗಡಿಯಾರ ನೋಡಿ.

**ಡಾ ॥ ಹೆಚ್.ಸಿ. ಮಹದೇವಪ್ಪ :** ಯಾರೂ ಇಲ್ಲ, ಯಾರೂ ಇಲ್ಲ.

(ಗೊಂದಲ)

**ಶ್ರೀ ಆರ್.ಅಶೋಕ್ :** ಯಾರೂ ಇಲ್ಲ. ಕುಳಿತುಕೊಳ್ಳಿ. ಎಲ್ಲೆಲ್ಲಿ ಮೀಟಿಂಗ್ ಮಾಡಿದರು. ಮೀಟಿಂಗ್ ಮಾಡಿದರೂ ನಾವು ಇಲ್ಲ ಎಂದು ಹೇಳಬಹುದು. ಈಗ ಈಶ್ವರಪ್ಪನವರು ಇಲ್ಲ ಮೀಟಿಂಗ್ ಆಗಿಲ್ಲ ಎಂದು ಹೇಳಿದೀರಿ. ಆದರೆ ಟಿ.ವಿ.ಯಲ್ಲಿ live ಹೇಳಿದ್ದಾರೆ. Live ಆಗಿ ಟಿ.ವಿ.ಯ ಎಲ್ಲಾ ಚಾನೆಲ್‌ಗಳಲ್ಲಿ ಬಂದಿದೆ. ನಾವು Clock, ಗಡಿಯಾರದ ಕಡೆ ನೋಡುತ್ತಿದ್ದೇವೆ. ಆದಷ್ಟು ಬೇಗ ಗಡಿಯಾರದೊಂದು ಸಭೆ ಮಾಡುತ್ತೀರೆಂ–ದು, ಯಾರ್‍ಯಾರು ಸೇರಿದ್ದರು ಆ ಮೀಟಿಂಗ್‌ನಲ್ಲಿ, ಅವರು ಬರುವುದು, ಹೋಗುವುದು ಎಲ್ಲಾ Visuals ಇದೆ, ಅಲ್ಲವೇ? ನಮ್ಮನ್ನೇ ಬೆರಳು ಮಾಡಿ ತೋರಿಸುತ್ತಿದ್ದೀರಲ್ಲ?

**ಶ್ರೀ ಸಿದ್ದರಾಮಯ್ಯ :** ಬಹಳ ಸಂತೋಷ, ಅಶೋಕ್ ನೀವು ಸರ್ಕಾರ ನಡೆಸುತ್ತಿರುವವರು. ನಾವು ವಿರೋಧ ಪಕ್ಷದಲ್ಲಿರುವವರು.

**ಶ್ರೀ ಆರ್.ಅಶೋಕ್ :** ಪ್ರಜಾಪ್ರಭುತ್ವದಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದವರಿಬ್ಬರದೂ ಜವಾಬ್ದಾರಿ ಇದೆ.

**ಶ್ರೀ ಸಿದ್ದರಾಮಯ್ಯ :** Whreas, you people are running the government. ನಾನು ಏನು ಹೇಳುತ್ತೇನೆಂದರೆ, ಕುಮಾರಿ ಶೋಭಾ ಕರಂದ್ಲಾಜೆಯವರು, ಶ್ರೀ ಉದಾಸಿಯವರು ಅಲ್ಲಿಗೆ ಹೋಗಿ ಬಂದ ಮೇಲೆಯೂ ಕೂಡಾ ಸುಮಾರು ದಿನ ಸರ್ಕಾರದಲ್ಲಿ ಮಂತ್ರಿಗಳಾಗಿದ್ದರು. ಏಕೆಂದರೆ ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿತ್ತು. ಅಧಿವೇಶನ ನಡೆಯುವಾಗಲೇ ಹಾವೇರಿಯಲ್ಲಿ ಯಡಿಯೂರಪ್ಪನವರ ಕೆ.ಜೆ.ಪಿ. ಸಮಾವೇಶನ ನಡೆಯಿತು. ಆಗ ಅಲ್ಲಿಗೆ ಹೋಗಿ ಬಂದ ಮೇಲೆ ಇವರಿಬ್ಬರೂ ಸುಮಾರು ದಿನ ಮಂತ್ರಿಮಂಡಲದಲ್ಲಿದ್ದರೋ, ಇಲ್ಲವೋ? ಅದಕ್ಕೆ ನಾನು ಕೇಳುತ್ತಿರುವುದು ನೀವು ಏನಾದರೂ due ಇದೆಯೋ, ಎಂದು ತಿಳಿದುಕೊಳ್ಳಲು ಕೇಳಿದೆ ಅಷ್ಟೆ. ನೀವು ಬಿ.ಜೆ.ಪಿ. ಯಲ್ಲಿಯೇ ಇದ್ದರೂ, ಕೆ.ಜೆ.ಪಿ. ಗೆ ಹೋದರೂ ನನ್ನದೇನೂ ತಕರಾರು ಇಲ್ಲ. ಹೋಗುತ್ತೀರೋ,

ಇಲ್ಲವೋ ಎಂದು ಅನುಮಾನ. ಅದನ್ನು ನಿಮ್ಮ ಬಾಯಿಯಿಂದ ತಿಳಿದುಕೊಳ್ಳೋಣ ಎಂದು ಅಷ್ಟೆ. ನೋಡಿ ಅವರು ಉತ್ತರವನ್ನು ಕೊಡುವುದಿಲ್ಲ. ಅವರು ನೂರಕ್ಕೆ ನೂರರಷ್ಟು ಹೋಗುತ್ತಾರೆ. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ನಿಮ್ಮ ಸರ್ಕಾರಕ್ಕೆ ಬಹುಮತ ಇಲ್ಲ. ಅಲ್ಪಮತದ ಸರ್ಕಾರವಾಗಿದೆ. ಅಲ್ಪಮತದ ಸರ್ಕಾರಕ್ಕೆ ರಾಜ್ಯಪಾಲರ ಭಾಷಣ ಮಂಡಿಸುವುದಕ್ಕೆ, ಬಜೆಟ್ ಮಂಡಿಸುವುದಕ್ಕೆ ನೈತಿಕವಾಗಿ ನಿಮಗೆ ಅಧಿಕಾರವಿಲ್ಲ. ಅನೈತಿಕ ಸರ್ಕಾರ ಇದೆ ಎಂಬ ಕಾರಣಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇಲ್ಲ, ನಿಮಗೆ ಬಹುಮತ ಇದೆ ಎಂದರೆ all right. ಮಾನ್ಯ ಅಧ್ಯಕ್ಷರು ಹೊರಟು ಹೋಗಿದ್ದಾರೆ. ಸುಪ್ರೀಂ ಕೋರ್ಟಿನವರು ಒಂದು ತೀರ್ಮಾನ ಕೊಟ್ಟರು. ಬಾಲಚಂದ್ರ ಜಾರಕಿಹೊಳಿರವರು, ಈಗ ಮಂತ್ರಿಯಾಗಿದ್ದಾರಲ್ಲ ಅವರೆಲ್ಲ Disqualification case ಆದಾಗ ಸುಪ್ರೀಂ ಕೋರ್ಟ್ judgement ನಲ್ಲಿ ಏನೇನು ಹೇಳಿದ್ದಾರೆಂಬುದನ್ನು ಓದಿ ಹೇಳಲೇನು ನಾನು? ಮಾನ್ಯ ಶ್ರೀ ನರೇಂದ್ರಸ್ವಾಮಿ ಅವರನ್ನು ಕೇಳಿ, ಅವರೂ ಇದ್ದರು. He was one of the petitioners.

**ಶ್ರೀ ಕೆ.ಎಸ್. ಈಶ್ವರಪ್ಪ** : ನಿಮ್ಮವರೂ ಇದ್ದರು.

**ಶ್ರೀ ಸಿದ್ದರಾಮಯ್ಯ** : ನಿಮ್ಮವರು ಇದ್ದಾರೆ. ಎಷ್ಟು ಜನ ಎಂದು ಹೇಳಲೇನು? ಹೇಳುವುದಿಲ್ಲ. ನೀವೆಲ್ಲಾ ಅಡ್ಡ ಹಾಕಿ ಬಿಡುತ್ತೀರಿ. ಹೇಳುವುದಕ್ಕೆ ಹೋಗುವುದಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ** : ಕಾಂಗ್ರೆಸ್ ಪಕ್ಷಕ್ಕೆ ಬರಲು ಅರ್ಜಿ ಹಾಕಿಕೊಂಡು ಕುಳಿತಿದ್ದಾರೆ ಎಂದು ರಾಜ್ಯಕ್ಕೆ message ಕೊಡುವ ಪ್ರಯತ್ನ ನೀವು ಮಾಡುತ್ತಿದ್ದೀರಿ. ಅದಕ್ಕೆ ನಿಮ್ಮ ಪಕ್ಷದವರು ಯಾರ್ಯಾರು ಬಿ.ಜೆ.ಪಿ ಗೆ ಬರುವುದಕ್ಕೆ ಇಷ್ಟ ಪಡುತ್ತಿದ್ದಾರೆ ಎಂದು ನಾನು ಹೇಲುವುದಕ್ಕೆ ಹೋಗುವುದಿಲ್ಲ.

**ಶ್ರೀ ಸಿದ್ದರಾಮಯ್ಯ** : ಬರುವವರನ್ನು ದಯಮಾಡಿ ಕರೆದುಕೊಳ್ಳಿ.

**ಶ್ರೀ ಕೆ.ಎಸ್. ಈಶ್ವರಪ್ಪ** : ನಮ್ಮದೇ ನಾಲ್ಕೂವರೆ ವರ್ಷದಿಂದ ಅನುಭವಿಸಿ ಸಾಕಾಗಿದೆ. ಮತ್ತೆ ಕಷ್ಟ ಅನುಭವಿಸುವುದೇನು? ಅದಕ್ಕೆ ಖಂಡಿತ ನಾವು ಆ ಕೆಲಸ ಮಾಡುವುದಿಲ್ಲ.

**ಶ್ರೀ ಸಿದ್ದರಾಮಯ್ಯ** : ಆ ಕೆಲಸ ಮಾಡಬಾರದಿತ್ತು ನೀವು.

**ಶ್ರೀ ಕೆ.ಎಸ್.ಈಶ್ವರಪ್ಪ** : ಒಪ್ಪಿಕೊಂಡಿದ್ದು ಆಗಿದೆ. 10 ಬಾರಿ ಒಪ್ಪಿಕೊಂಡಿದ್ದಾಗಿದೆ.

**ಶ್ರೀ ಸಿದ್ದರಾಮಯ್ಯ** : ಆದ್ದರಿಂದ ಆಪರೇಷನ್ ಕಮಲದಂತಹ ಅನ್ಯೆತಿಕ ಕೆಲಸ ಮಾಡಬಾರದಿತ್ತು ಎಂದು ನಾನು ಹೇಳುತ್ತಿರುವುದು. That is what I am emphasizing. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ; ಈ ನಾಲ್ಕು ಮುಕ್ಕಾಲು ವರ್ಷದಲ್ಲಿ ಆದಂತಹ ಘಟನಾವಳಿಗಳು, ನೀವೂ ಕೂಡಾ ಸೇರಿಸಿಕೊಂಡಿದ್ದನ್ನು ಸರಿ ಒಪ್ಪುವುದಿಲ್ಲ. ಅದು ಸರಿ ಇಲ್ಲ ಎಂದೇ ಹೇಳಿದಿರಿ. ಆಗಬಾರದಿತ್ತು. ಆಗಿ ಹೋಗಿದೆ, ನಮ್ಮಿಂದ ತಪ್ಪಾಗಿದೆ ಎಂದು ಹೇಳುತ್ತಿದ್ದೀರಿ. ಅದನ್ನು ಯಾರೂ ಮಾಡಬಾರದು. ನಾವೂ ಮಾಡಬಾರದು, ನೀವೂ ಮಾಡಬಾರದು. ಅದರಿಂದ ಆಗುವ ಅನಾಹುತಗಳನ್ನೆಲ್ಲಾ ಎದುರಿಸಬೇಕಾಗು–ತ್ತದೆ. ಉಪ್ಪು ತಿಂದವನು ನೀರು ಕುಡಿಯಬೇಕು ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಇವತ್ತು ನೀವು ಮಂಡಿಸಿರತಕ್ಕಂತ ಬಜೆಟ್ ಬಹುಮತ ಇಲ್ಲದ ಸರ್ಕಾರ ಮಂಡಿಸಿರುವ ಬಜೆಟ್ ಆಗಿದೆ. ಬಜೆಟ್ ಮಂಡಿಸಲು ತಾಂತ್ರಿಕವಾಗಿ ನಿಮಗೆ ಬಹುಮತ ಕಾಣಬಹುದು. ಆದರೆ, ವಾಸ್ತವಿಕವಾಗಿ ಬಹುಮತ ಇಲ್ಲ. ಹಾಗಾಗಿ ರಾಜ್ಯಪಾಲರ ಭಾಷಣಕ್ಕೆ ಮತ್ತು ನೀವು ಮಂಡಿಸಿರುವ ಬಜೆಟ್‌ಗೆ ಕವಡೆ ಕಾಸಿನ ಕಿಮ್ಮತ್ತು ಇಲ್ಲ. ಅದಕ್ಕೆ ಏನೇನು ಬೇಕೋ ಅದನ್ನು ಬರೆಸಿ ರಾಜ್ಯಪಾಲರಿಂದ ಓದಿಸಿದ್ದೀದೆಂದು ಹೊರಟಿದ್ದೇನೆ. ಈಗ ರಾಜ್ಯಪಾಲರ ಭಾಷಣದಲ್ಲಿ ಸ್ವಲ್ಪವಾದರೂ ಸತ್ಯ ಇರಬೇಕಲ್ಲ? ಕಾನೂನು ಸುವ್ಯವಸ್ಥೆ ಬಹಳ ಚೆನ್ನಾಗಿ ಇದೆ ಎಂದು ಹೇಳಿದ್ದೀರಿ. ಇದೆಯೇ ಹೇಳಿ ನೋಡೋಣ. ಬೆಂಗಳೂರಿನಲ್ಲಿ ಸಂಜೆ 8 ಗಂಟೆಯ ಮೇಲೆ ಮನೆಯಿಂದ ಒಬ್ಬರೇ ಹೊರಗೆ ಹೋಗಿ ಸುರಕ್ಷಿತವಾಗಿ ವಾಪಸ್ಸು ಬರುತ್ತಾರೇನು?

**ಡಾ: ಹೆಚ್.ಸಿ.ಮಹದೇವಪ್ಪ** : Retired ACP ಅವರೇ ನನಗೆ ಪ್ರಾಣ ಭಯ ಇದೆಯೆಂದು ಡಿ.ಜಿ.ಪಿ.ಯವರಿಗೆ ಪತ್ರ ಬರೆದಿದ್ದಾರೆ.

**ಶ್ರೀ ಸಿದ್ದರಾಮಯ್ಯ** : ನೋಡಿ, ರಜೆ ಕೊಡಲಿಲ್ಲ ಎಂಬ ಕಾರಣಕ್ಕೆ ಒಬ್ಬ constable, Sub-Inspector ಅನ್ನು ಶೂಟ್ ಮಾಡಿ ಬಿಡುತ್ತಾನೆ. ಇದನ್ನು ಕಾನೂನು ಸುವ್ಯವಸ್ಥೆ ಎಂದು ಕರೆಯುವುದೆ? ನನ್ನ ಪ್ರಕಾರ ಇದೊಂದು ಅನುಮಾನಾಸ್ಪದ ಕೊಲೆ. ಇದರಲ್ಲಿ Land Mafia ಗಳ ಕೈವಾಡ

ಇದೆ ಎಂದು ಜನ ಚರ್ಚೆ ಮಾಡುತ್ತಿದ್ದಾರೆ. ಏಕೆಂದರೆ, ಅವರು ಹೊಸದಾಗಿ ಸಬ್ ಇನ್ಸ್‌ಪೆಕ್ಟರ್ ಆಗಿ ಹೋಗಿದ್ದರು. ಸ್ವಲ್ಪ ಬಿಗಿಯಾಗಿದ್ದ, ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳುತ್ತಿದ್ದ. ಇದಕ್ಕೆ ಕಾಣಿಸದ ಕೈ ಕೆಲಸ ಮಾಡಿದೆ. ಸಬ್ ಇನ್ಸ್‌ಪೆಕ್ಟರ್‌ಗೆ ಒಂದು ಗೋಲಿ ಹೊಡೆಯುವುದಿಲ್ಲ. 303 ಗನ್ ಉಪಯೋಗಿಸಿ ಒಂದಲ್ಲ , 3–4 ಗೋಲಿಗಳನ್ನು ಹೊಡೆಯುತ್ತಾನೆ. sudden grave provocation ಆದವನು ಯಾರ್‍ಯಾರೂ ಕೂಡಾ ಹೀಗೆ ಶೂಟ್ ಮಾಡುವುದಿಲ್ಲ. ಇದರ ಹಿಂದೆ ಕಾಣದ ಕೈವಾಡ ಇದೆ. ಅದಕ್ಕಾಗಿ ನಾನು Home Minister ರವರನ್ನು ಒತ್ತಾಯ ಮಾಡುತ್ತೇನೆ. ಇದರ ಬಗ್ಗೆ ಒಂದು Judicial Enquiry ಮಾಡಿಸುವುದು ಒಳ್ಳೆಯದು. ಸತ್ಯ ಹೊರಗೆ ಬರಬೇಕು. ಕೊಲೆಯ ಹಿಂದೆ ಯಾರಿದ್ದಾರೆಂಬುದು ಗೊತ್ತಾಗಬೇಕು. ಯಾವ ಕಾಲದಲ್ಲೂ ಹೀಗಾಗಿರಲಿಲ್ಲ. ಒಬ್ಬ ಸಬ್ ಇನ್ಸ್‌ಪೆಕ್ಟರ್ ಮೇಲೆ ಅಲ್ಲಿ ಕೆಲಸ ಮಾಡತಕ್ಕಂತ ಪೇದೆ ಶೂಟ್ ಮಾಡಿ ಬಿಡುತ್ತಾನೆ. ಕಾನೂನು ಸುವ್ಯವಸ್ಥೆ ಚೆನ್ನಾಗಿದೆ ಎಂದು ಹೇಳಬೇಕೇನು? ಬೆಂಗಳೂರು ನಗರದ ಮನೆಯಲ್ಲಿ ಒಂಟಿ ಮಹಿಳೆ ಇರುವುದಕ್ಕೆ ಆಗುತ್ತದೆಯೇನು? ಕಳೆದ 10 ವರ್ಷಗಳಲ್ಲಿ ಕಾರ್ನಾಟಕದಲ್ಲಿ ಹೆಣ್ಣುಮಕ್ಕಳ ಮೇಲೆ ಬಹಳಷ್ಟು ದೌರ್ಜನ್ಯ ನಡೆದಿದೆ. ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ ನಡೆದಿರುವುದರಲ್ಲಿ ಮುಂಬೈ ಮೊದಲ ಸ್ಥಾನದಲ್ಲಿ, ದೆಹಲಿ ಎರಡನೆಯ ಸ್ಥಾನದಲ್ಲಿ ಹಾಗೂ ಕರ್ನಾಟಕ ಮೂರನೆಯ ಸ್ಥಾನದಲ್ಲಿದೆ. ಹೀಗಿದ್ದರೂ ಇಲ್ಲಿ ಕಾನೂನು ಸುವ್ಯವಸ್ಥೆ ಚೆನ್ನಾಗಿದೆ ಎಂದು ಹೇಳುತ್ತೀರಿ. ಕಾನೂನು ಸುವ್ಯವಸ್ಥೆ ಚೆನ್ನಾಗಿ ಇದೆ ಎಂದು ರಾಜ್ಯಪಾಲರ ಭಾಷಣದಲ್ಲಿ ಓದಿಸಿದ್ದೀರಿ. Bangalore is having 3rd place in the country. ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ, ಅತ್ಯಾಚಾರ ನಡೆಯುತ್ತಿರುವುದರಲ್ಲಿ ಕಳೆದ 10 ವರ್ಷಗಳಲ್ಲಿ 383 ಅತ್ಯಾಚಾರಗಳು ನಡೆದಿವೆ. ಕೇವಲ ಅತ್ಯಾಚಾರಗಳು. ನಾನು ಹೇಳುವುದು ಬೇರೆ offences ಅಲ್ಲ. ನೀವು ಕರಾವಳಿ ಪ್ರದೇಶಕ್ಕೆ ಹೋಗಿ ನೋಡಬೇಕು.

ಮಾನ್ಯ ಅಧ್ಯಕ್ಷರೆ, ನೀವು ಕರಾವಳಿ ಪ್ರದೇಶದಲ್ಲಿ ಹೋಗಿ ನೋಡಬೇಕು. ಅಲ್ಲಿ Homestay ಮೇಲೆ attack ಆಯಿತು, pubs ಮೇಲೆ attack ಆಯಿತು, ಚರ್ಚ್‌ಗಳ ಮೇಲೆ attack ಆಯಿತು, ಮಸೀದಿಗಳ ಮೇಲೆ attack ಆಯಿತು. ಇವತ್ತು ಬೇರೆ ಬೇರೆ ಧರ್ಮಕ್ಕೆ ಸೇರಿದಂತಹ

ಮಕ್ಕಳು, students, ವಿದ್ಯಾರ್ಥಿಗಳು ಒಟ್ಟಿಗೆ ಮಾತನಾಡುವಂತಿಲ್ಲ, ಒಟ್ಟಿಗೆ ಕಾಫಿ ಕುಡಿಯುವಂತಿಲ್ಲ, ಒಟ್ಟಿಗೆ ಬಸ್ಸಿನಲ್ಲಿ ಹೋಗುವಮತಿಲ್ಲ, ಒಟ್ಟಿಗೆ ಕಾರಿನಲ್ಲಿ ಹೋಗುವಂತಿಲ್ಲ, ಒಟ್ಟಿಗೆ ಬಸ್ ಸ್ಟ್ಯಾಂಡ್‌ನಲ್ಲಿ ನಿಂತುಕೊಳ್ಳುವಂತಿ-ಲ್ಲ. This is the situation today in the coastal areas. ಕೋಸ್ಟಲ್ ಏರಿಯಾದ ಶಾಸಕರು ಇಲ್ಲಿದ್ದಾರೆ. ಅಲ್ಲಿ ಕಾನೂನು ಸುವ್ಯವಸ್ಥೆ ಚೆನ್ನಾಗಿದೆಯೇ ಎಂದು ಅವರೇ ಹೇಳಬೇಕು. ಅಲ್ಲಿ ಕಾನೂನು ಸುವ್ಯವಸ್ಥೆ ಚೆನ್ನಾಗಿಲ್ಲ. ಇದಲ್ಲದೆ ಅಲ್ಲಿ ಹೊಸದಾಗಿ 'ನೈತಿಕ ಪೊಲೀಸ್‌ಗಾರಿಕೆ', moral police ಎನ್ನುವುದು ಶುರುವಾಗಿದೆ. ಇವರೇನು ಮಾಡುತ್ತಾರೆ ಎಂದರೆ, ಅಲ್ಲಿ ಯಾರಾದರೂ ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳು ಸೇರಿ ಒಟ್ಟಿಗೆ ಕಾಫಿ ಕುಡಿಯುವುದಕ್ಕೆ ಹೋದರೆ, ಅವರನ್ನು ಹಿಡಿದುಕೊಂಡು ಹೊಡೆಯುವುದು ಆ ರೀತಿ ನಡೆಯುತ್ತಿದೆ. They are taking the law into their hands ever since BJP came to power. ಪೊಲೀಸ್‌ನವರು ಮತ್ತು SP ನಿಸ್ಸಹಾಯಕರಾಗಿದ್ದಾರೆ. The police officers are also helpless. ಇದನ್ನು ಮಾಡುವವರು ಯಾರು? ಶ್ರೀರಾಮ ಸೇನೆ ಹೆಸರಿನಲ್ಲಿ, ಭಜರಂಗ ದಳದ ಹೆಸರಿನಲ್ಲಿ, ವಿಶ್ವ ಹಿಂದೂ ಪರಿಷತ್ತಿನವರ ಹೆಸರಿನಲ್ಲಿ ಇದನ್ನೆಲ್ಲಾ ಮಾಡುತ್ತಿದ್ದಾರೆ. Where is the law and order? ಇವೆಲ್ಲಾ ಇಲ್ಲಿ ಪ್ರಸ್ತಾಪವಾಗಿವೆ. ಅದನ್ನು publish ಮಾಡಿದಂತಹ ನವೀನ್ ಎಂಬ journalist ಸಹ ಜೈಲಿನಲ್ಲಿದ್ದಾನೆ. ಹೀಗೆಲ್ಲಾ ಇದ್ದರೂ law and order ಇದೆ ಎಂದು ನಾವು ಹೇಳಬೇಕೇ? ಒಬ್ಬ ಹೆಣ್ಣುಮಗಳು ನಾಪತ್ತೆಯಾದರು. ನಮ್ಮ ಎಂಎಲ್‌ಎ ಹೆಂಡತಿ ಅವರು. ಅದನ್ನೆಲ್ಲಾ ನಾವು ಇಲ್ಲಿ ಹೇಳಬಾರದು. ಅವರು ಇವತ್ತಿನವರೆಗೂ ಏನಾದರೋ? ಯಾರಿಗೂ ಗೊತ್ತಿಲ್ಲ.

**ಶ್ರೀ ಹೆಚ್.ಗೋಪಾಲ ಭಂಡಾರಿ** :– ಮಾನ್ಯ ಅಧ್ಯಕ್ಷರೆ, ಅದರಲ್ಲಿ ಯಾರೆಲ್ಲಾ ಇದ್ದಾರೆಂದು ಇಲ್ಲಿ ಸ್ವಲ್ಪವಾದರೂ ಮಾಹಿತಿಯನ್ನು ಕೊಡುವುದು ಒಳ್ಳೆಯದು. ಆ ಕೊಲೆ ಪ್ರಕರಣದಲ್ಲಿ ಯಾರೆಲ್ಲಾ involve ಆಗಿದ್ದಾರೆ ಎಂಬ ಬಗ್ಗೆ ಮಾಹಿತಿ ಕೊಡುವುದು ಒಳ್ಳೆಯದು.

**ಶ್ರೀ ಸಿದ್ದರಾಮಯ್ಯ** :– ಅದು ಮಾನ್ಯ ಭಂಡಾರಿಯವರ ಕ್ಷೇತ್ರಕ್ಕೆ ಬರುತ್ತದೆ. ಆದ್ದರಿಂದ ಅದರ ಬಗ್ಗೆ ಅವರಿಗೆಲ್ಲಾ ಗೊತ್ತಿದೆ. ಈ ರೀತಿಯಾಗಿ ಇವತ್ತು ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಹಾಳಾಗಿದೆ. ಇದಲ್ಲದೆ

ಯಾರ್‍ಯಾರು ಈ ರೀತಿಯಾಗಿ communal clash ಗಳಲ್ಲಿ ಭಾಗಿಯಾಗಿದ್ದರೋ ಅವರ ಮೇಲೆ ಹಾಕಿದ್ದ ಕೇಸ್ ವಾಪಸ್ಸು ತೆಗೆದುಕೊಂಡಿದ್ದಾರೆ. ಬೇಕಾದಷ್ಟು communal clashes ಆಗಿವೆ. ಹಾಸನದಲ್ಲಿ communal clash ಆಯಿತು, ಮೈಸೂರಿನಲ್ಲಿ communal clash ಆಯಿತು. ಬೆಂಗಳೂರು ದಾವಣಗೆರೆ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಮುಂತಾದ ಅನೇಕ ಕಡೆಗಳಲ್ಲಿ communal clashes ಆಗಿವೆ. ಈ communal clashes ಗೆ ಯಾರ್‍ಯಾರು ಕಾರಣಕರ್ತರಾಗಿದ್ದರೋ, ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಿದರೆ, ಸರ್ಕಾರ ಕ್ಯಾಬಿನೆಟ್‌ಲ್ಲಿ ತೀರ್ಮಾನ ಮಾಡಿ ಆ ಕೇಸ್‌ಗಳನ್ನೆಲ್ಲಾ ವಾಪಸ್ ತೆಗೆದುಕೊಂಡಿತು. ಅಕ್ರಮ ಗಣಿಗಾರಿಕೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದವರ ಮೇಲೆ ಕೇಸ್‌ಗಳನ್ನು ಹಾಕಿದ್ದನ್ನೂ ಸಹ ಇವರು ವಾಪಸ್ ತೆಗೆದುಕೊಂಡಿದ್ದಾರೆ. Where is the law and order? Law and order ಬಹಳ ಚೆನ್ನಾಗಿದೆ, ಕಾನೂನು ಸುವ್ಯವಸ್ಥೆ ಬಹಳ ಚೆನ್ನಾಗಿ ಮಾಡಿದ್ದೇವೆ ಎಂದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನೀವು ಹೇಳಿದರೆ, ಅದನ್ನು ನಾವು ಒಪ್ಪಿಕೊಳ್ಳಬೇಕೇ? ಮಾನ್ಯ ಅಧ್ಯಕ್ಷರೆ, ಇದನ್ನು ನಾವು ಒಪ್ಪಿಕೊಳ್ಳಬೇಕೇ ಎನ್ನುವುದನ್ನು ನೀವೇ ಹೇಳಿ. ಮಾನ್ಯ ರಾಜ್ಯಪಾಲರ ಬಾಯಿಯಲ್ಲಿ ಅಸತ್ಯವನ್ನು ಹೇಳಿಸಿದ್ದಾರೆ. ನಾನು ಬಹಳ ದೀರ್ಘವಾಗಿ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಈ ರಾಜ್ಯದ ಹಣಕಾಸಿನ ಪರಿಸ್ಥಿತಿ ಬಹಳ ಚೆನ್ನಾಗಿದೆ ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರಿಗೂ ಇದು ಗೊತ್ತಿದೆ. ನೀವು ಬಹಳ Senior MLA ಆಗಿದ್ದೀರಿ. ಪಾಪ! ನೀವು ಮಂತ್ರಿಯಾಗಬೇಕಾಗಿತ್ತು. ಆದರೆ ಏಕೋ ಆಗಲಿಲ್ಲ.

**ಛೇರ್ಮನ್** :- ನೀವು ಮತ್ತು ನಾವು ಇಬ್ಬರೂ ಕೂಡಿಯೇ ಇಲ್ಲಿಗೆ ಬಂದಿದ್ದೆವು.

**ಶ್ರೀ ಸಿದ್ದರಾಮಯ್ಯ** :- ನಾವಿಬ್ಬರೂ ಒಟ್ಟಿಗೇ ಬಂದೆವು. ನಾನು ಮಂತ್ರಿಯಾದೆ. ಆದರೆ ನೀವು ಏಕೋ ಮಂತ್ರಿಯಾಗಲಿಲ್ಲ ಎನ್ನುವುದೇ ನನಗೆ ಬಹಳ ನೋವಿನ ಸಂಗತಿಯಾಗಿದೆ. ನೀವು ಏನೇನೋ ಮೆಹನತ್ ಮಾಡಿದರೂ ಮಂತ್ರಿಯಾಗಲೇ ಇಲ್ಲ. ನಿಮಗೆ ಮಂತ್ರಿ ಪದವಿ ಕೊಡಲೇಬೇಕಾಗಿತ್ತು. You are the most deserving pesson. ನೀವು

O - 124 - F-62

ನಮ್ಮಂತೆಯೇ ಹೋರಾಟದಿಂದ ಬಂದವರು. ಯಾರ್‍ಯಾರಿಗೂ ಕೊಟ್ಟರು, ನಿಮಗೆ ಕೊಡಬೇಕೋ? ಬೇಡವೋ? ನಿಮಗೆ ಮಂತ್ರಿ ಪದವಿ ಕೊಡಬೇಕಾ-ಗಿತ್ತು. ಅದು ಇರಲಿ ಬಿಡಿ. ನೀವೇನು ಪಾಪ ಅಧಿಕಾರಕ್ಕೋಸ್ಕರವೇ ಬಂದವರಲ್ಲ.

**ಶ್ರೀ ಸಿ.ಸಿ.ಪಾಟೀಲ್** :– ಐದು ವರ್ಷಗಳ ಅವಧಿ ಮುಗಿಯಲಿಕ್ಕೆ ಬಂದಿದೆ. ಪುನಃ ಪುನಃ ಅದರ ನೆನಪು ತೆಗೆಯಬೇಡಿ. ಅವರು ಅಧ್ಯಕ್ಷರ ಪೀಠದಲ್ಲಿ ಆರಾಮಾಗಿ ಕುಳಿತಿದ್ದಾರೆ. ಅವರು ಆರಾಮಾಗಿ ಕುಳಿತುಕೊಳ್ಳುವು-ದಕ್ಕೆ ಅವಕಾಶ ಕೊಡಿ. ನೀವು ಮಂತ್ರಿಯಾಗಲಿಲ್ಲವೆಂದು ಪದೇ ಪದೇ ಅವರಿಗೆ ನೆನಪು ಮಾಡಬೇಡಿ!

**ಶ್ರೀ ಸಿದ್ದರಾಮಯ್ಯ** :– ಮಾನ್ಯ ಬೆಲ್ಲದ್‌ರವರು ಮತ್ತು ನಾವು, ಎಂತಹ ಸ್ನೇಹಿತರು ಎಂಬುದು ನಿಮಗೆ ಗೊತ್ತಿಲ್ಲ. ಕನ್ನಡ ಚಳವಳಿಯಿಂದ ಬಂದವರು ನಾವು. ಮಾನ್ಯ ಛೇರ್ಮನ್‌ರವರೆ ನೀವೇ ಈ ಬಗ್ಗೆ ಅವರಿಗೆ ಸ್ವಲ್ಪ ಹೇಳಿಬಿಡಿ..

**ಛೇರ್ಮನ್** :– ಎಲ್ಲರಿಗೂ ಇತಿಹಾಸ ಗೊತ್ತಿದೆ.

**ಶ್ರೀ ಸಿದ್ದರಾಮಯ್ಯ** :– ನಾವು ನಿಮ್ಮ ಬಗ್ಗೆ ಸುಳ್ಳು ಹೇಳುವುದಕ್ಕಾಗು-ತ್ತದೆಯೇ ? It is impossible.

**ಶ್ರೀ ಸಿ.ಸಿ.ಪಾಟೀಲ್** :– ನಿಮ್ಮ ಸ್ನೇಹವನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಐದು ವರ್ಷಗಳ ಅವಧಿ ಮುಗಿಯುತ್ತಾ ಬಂದಿದೆ. ಮಾನ್ಯ ಅಧ್ಯಕ್ಷರ ಪೀಠದಲ್ಲಿ ಅವರು ಬಹಳ ನೆಮ್ಮದಿಯಿಂದ ಕುಳಿತಿದ್ದಾರೆ. ಅವರಿಗೆ ನೀವು ಮಂತ್ರಿಯಾಗಿಲ್ಲ ಎಂದು ಪದೇ ಪದೇ ಅವರಿಗೆ ನೆನಪಿಸಬೇಡಿ ಎಂದು ನಾನು ನಿಮಗೆ ಮನವಿ ಮಾಡುತ್ತಿದ್ದೇನೆ.

**ಶ್ರೀ ಸಿದ್ದರಾಮಯ್ಯ** :– ನೀವು ಕೆಜೆಪಿ ಯೋ, ಬಿಜೆಪಿ ಯೋ? ನೀವು ಯಾವ ಕಡೆ ಇದ್ದೀರಿ ಎಂದು ಸ್ವಲ್ಪ ಹೇಳುತ್ತೀರಾ? To which party do you belong? whether KJP or BJP?

**ಶ್ರೀ ಸಿ.ಸಿ.ಪಾಟೀಲ್** :– ಸಾರ್, ನಾನು ಬಿಜೆಪಿಯಲ್ಲಿದ್ದೇನೆ.

**ಶ್ರೀ ಸಿದ್ದು ಸವದಿ** :– ನಾವಿಬ್ಬರೂ ಮಂತ್ರಿಗಳಾಗುತ್ತೇವೆ.

**ಶ್ರೀ ಸಿದ್ದರಾಮಯ್ಯ** :– ನೀವು ಇಬ್ಬರೂ ಮಂತ್ರಿಗಳಾಗುತ್ತೀರಾ? ನೀವುಗಳು ಮಂತ್ರಿಯಾಗುವುದಕ್ಕೆ ನನ್ನದೇನೂ ತಕರಾರು ಇಲ್ಲ. ಆದರೆ

ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವುದಿಲ್ಲ. ನೀವಂತೂ ಬಿಜೆಪಿಯಿಂದ ಮಂತ್ರಿಗಳಾಗುವುದಕ್ಕೆ ಆಗುವುದಿಲ್ಲ. ಇದನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮಾನ್ಯ ಛೇರ್ಮನ್‌ರವರೆ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುತ್ತದೆಯೇ? ಎಂಬುದನ್ನು ನೀವೇ ಹೇಳಿ.

**ಶ್ರೀ ಉಮೇಶ್ ವಿ.ಕತ್ತಿ** :- ಅವರು ಮಂತ್ರಿಗಳಾಗಬೇಕಾದರೆ ಬಿಜೆಪಿ ಅಧಿಕಾರಕ್ಕೆ ಬರಲೇಬೇಕು.

**ಶ್ರೀ ಸಿದ್ದರಾಮಯ್ಯ** :- ಸುಮ್ಮನೆ ತಮಾಷೆಗೆ ಕೇಳುತ್ತಿದ್ದೇನೆ. ದಯವಿಟ್ಟು ನೀವು ಬೇಸರ ಮಾಡಿಕೊಳ್ಳಬೇಡಿ.

**ಡಾ: ಹೆಚ್.ಸಿ. ಮಹದೇವಪ್ಪ** :- ನೀವು ನ್ಯೂಟ್ರಲ್ ಆಗಿದ್ದ ಮೇಲೆ ಸತ್ಯ ಹೇಳುವುದಕ್ಕೆ ಅಭ್ಯಂತರವೇನಿಲ್ಲ. ನೀವು ಅಲ್ಲಿ ಇರುವುದೇ ಸತ್ಯ ಹೇಳುವುದಕ್ಕೆ.

**ಶ್ರೀ ಸಿದ್ದರಾಮಯ್ಯ** :- ಮಾನ್ಯ ಅಧ್ಯಕ್ಷರೆ, 'ಸತ್ಯಮೇವ ಜಯತೆ' ಎನ್ನುವುದು ನಿಮಗೆ ಚೆನ್ನಾಗಿ ಗೊತ್ತಿದೆ. ನಿಮ್ಮ ಮೇಲೆ ನ್ಯಾಯದ ತಕ್ಕಡಿ ಇದೆ. ಮಾನ್ಯ ಕೆಂಗಲ್ ಹನುಮಂತಯ್ಯನವರು ವಿಧಾನ ಸೌಧದ ಮೇಲೆ ನ್ಯಾಯದ ತಕ್ಕಡಿ ಇದೆ. ಮಾನ್ಯ ಕೆಂಗಲ್ ಹನುಮಂತಯ್ಯನವರು ವಿಧಾನ ಸೌಧದ ಮೇಲೆ 'ಸರ್ಕಾರದ ಕೆಲಸ, ದೇವರ ಕೆಲಸ' ಎಂದು ಬರೆಸಿದ್ದಾರೆ. ಆದರೆ ಅದಕ್ಕೆ ತದ್ವಿರುದ್ಧವಾಗಿ ಇಲ್ಲಿ ಎಲ್ಲಾ ನಡೆಯುತ್ತಿದೆ. ಮಾನ್ಯ ಛೇರ್ಮನ್‌ರವರೆ ಹಣಕಾಸಿನ ಪರಿಸ್ಥಿತಿ ಹೇಗೆ ಕೆಟ್ಟು ಹೋಗಿದೆ ಎಂದರೆ, ನಾನು ಬಜೆಟ್ ಮೇಲೆ ಮಾತನಾಡುವಾಗ ಆ ಬಗ್ಗೆ ಡೀಟೈಲ್ಲಾಗಿ ಮಾತನಾಡುತ್ತೇನೆ. ಈಗ ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತು ನಾನು ಸುಮ್ಮನೆ 2–3 ವಿಚಾರಗಳನ್ನು ಮಾತ್ರ ಹೇಳುತ್ತೇನೆ. 2007–08ರಲ್ಲಿ, ಅಂದರೆ ಐದು ವರ್ಷಗಳ ಹಿಂದೆ, ಈ ರಾಜ್ಯದ ಮೇಲೆ ಇದ್ದಂತಹ ಸಾಲ 73 ಸಾವಿರ ಕೋಟಿ ರೂ.ಗಳು ಮಾತ್ರ. Today, ಈ ಮಾರ್ಚ್‌ರವರೆಗೆ estimated ಸಾಲ 1 ಲಕ್ಷ 18 ಸಾವಿರ ಕೋಟಿ ರೂ.ಗಳಾಗಿದೆ. ಮುಂದಿನ ವರ್ಷಕ್ಕೆ, ಈಗೇನು ಬಜೆಟ್ ಮಂಡಿಸಿದ್ದಾರಲ್ಲಾ, ಆ ವರ್ಷಕ್ಕೆ ಸಾಲ 1 ಲಕ್ಷ 37 ಸಾವಿರ ಕೋಟಿ ರೂ.ಗಳಾಗುತ್ತದೆ. ಆದರೆ ಬಜೆಟ್ ಇರುವುದು 1 ಲಕ್ಷ 17 ಸಾವಿರ ಕೋಟಿ ರೂ.ಗಳು ಮಾತ್ರ. ಅಂದರೆ ನಮ್ಮ ಬಜೆಟ್ ಗಾತ್ರಕ್ಕಿಂತ 20 ಸಾವಿರ ಕೋಟಿ ರೂ.ಗಳ ಜಾಸ್ತಿ ಸಾಲವಿದೆ. ಆದರೆ ನಮ್ಮ ಹಣಕಾಸಿನ ಪರಿಸ್ಥಿತಿ ಬಹಳ ಚೆನ್ನಾಗಿದೆ ಎಂದು ಹೇಳಿಕೊಳ್ಳುತ್ತೀರಿ. ನಾನು 2004–05 ಮತ್ತು

2005–06ರಲ್ಲಿ ಹಣಕಾಸಿನ ಮಂತ್ರಿಯಾಗಿದ್ದೆ. 2004–05ರಲ್ಲಿ fiscal deficit 2.42 ಇತ್ತು. ಅದರ ಮುಂದಿನ ವರ್ಷ ಅಂದರೆ 2005–06ರಲ್ಲಿ fiscal deficit 2.02 ಆಯಿತು. ಆ ಎರಡೂ ವರ್ಷಗಳ ಕಾಲ ನಾನೇ–ಬಜೆಟ್ ಮಂಡಿಸಿದ್ದೆ. What is the fiscal deficit today ? It is 3.98. ಅಂದರೆ ಏನರ್ಥ? fiscal deficit ಹೆಚ್ಚಾಗಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಸಾಲ ಹೆಚ್ಚಾಗಿದೆ.

2006–07ರಲ್ಲಿ revenue surplus was Rs.4100 crore. ಈ ವರ್ಷ ನೀವು ಮಂಡಿಸಿರುವ ಬಜೆಟ್‌ನಲ್ಲಿ ಮತ್ತು Economic Survey ನಲ್ಲಿ ಹೇಳಿರುವ ಪ್ರಕಾರ ರೂ.930 ಕೋಟಿ. It has been reduced from Rs. 4100 crore to Rs.930 crore. ಹಣಕಾಸಿನ ಪರಿಸ್ಥಿತಿ ಚೆನ್ನಾಗಿದೆಯಾ ಹೇಳಿ ನೋಡೋಣ? ಅಂದರೆ, revenue surplus ಎಂದರೆ revenue expenditure ಹೋಗಿ ಇನ್ನು ಉಳಿಕೆ ಹಣ ಅವತ್ತು ರೂ.4100 ಕೋಟಿ ಉಳಿದಿತ್ತು. Today, it has come down. ಮುಂದಿನ ವರ್ಷಕ್ಕೆ ನಿಮ್ಮ revenue surplus ಬರಿ ರೂ.500 ಕೋಟಿ. How can you claim that? ನಮ್ಮ economy robust ಆಗಿದೆ ಎಂದು ಹೇಗೆ ಹೇಳುವುದಕ್ಕಾಗುತ್ತದೆ? As a matter of fact, Mr. Yeddiyurappa inherited robust economy in karnataka when he became the Finance Minister and Chief Minister. Robust economy. ಅದಕ್ಕೆ 2005–06, 2006–07 ರಲ್ಲಿ ಹೇಗಿತ್ತು ಎಂದು ನಾನು ಹೇಳಿದ್ದು, What is the position today? ನೀವು ಬಂದ 5 ವರ್ಷದಲ್ಲಿ ಎರಡು ಪಟ್ಟು ಸಾಲ ಜಾಸ್ತಿಯಾಯಿತು. ಕಳೆದ ವರ್ಷಕ್ಕೆ repayment of debt service ಸುಮಾರು ರೂ.7500 ಕೋಟಿ, interest payment is more than Rs.2,000 crore. About Rs.10,000 crore we have to pay towards interest payment and debt service. ಇದು ಹಣಕಾಸಿನ ಪರಿಸ್ಥಿತಿ ಬಹಳ ಚೆನ್ನಾಗಿದೆ ಎಂದಾ? ರೂ.10,000 ಕೋಟಿ ಅಸಲು, ಬಡ್ಡಿ ಕಟ್ಟುವುದಕ್ಕೆ ಕೊಡಬೇಕು, How can you defend that our karnataka's economy is very good? ಆಮೇಲೆ ಪ್ರತಿವರ್ಷ ತೆರಿಗೆ ಜಾಸ್ತಿ ವಸೂಲ್ಮಾಡಿದ್ದೇವೆಂದು ಹೇಳಿದ್ದೀರಿ, 2004–05 ಮತ್ತು 2005–06ರಲ್ಲಿ ಶೇಕಡ ಹನ್ನೆರಡೂವರೆ ಮತ್ತು ಶೇಕಡ ನಾಲ್ಕು ಇತ್ತು, ನೀವು ಎರಡು ಸೇರಿ ಜಾಸ್ತಿ ಮಾಡಿದಿರಿ, ಇವತ್ತು it is

ಐದೂವರೆ ಪರ್ಸೆಂಟ್ ಹದಿನೈದೂವರೆ ಪರ್ಸೆಂಟ್. ತೆರಿಗೆ ಏರಿಸಿ ಕೂಡ ನಿಮ್ಮ ತೆರಿಗೆ ಕಲೆಕ್ಷನ್ ಅಷ್ಟು. When I was in charge of finance, the tax growth was 29%. It has been reduced to 5% in 2009-10. How can they claim ? ರಾಜ್ಯಪಾಲರ ಭಾಷಣದಲ್ಲಿ, ನಮ್ಮ ಹಣಕಾಸಿನ ಪರಿಸ್ಥಿತಿ ಬಹಳ ಸುಸ್ಥಿತಿಯಲ್ಲಿದೆ, ಉತ್ತಮವಾಗಿದೆ ಎಂದು ಹೇಳಿದ್ದಾರೆ. ಇವತ್ತು fiscal discipline ಎಲ್ಲಾ ಹಾಳಾಯಿತು. ಏನು fiscal consolidation ಆಗಿತ್ತು ಅದೆಲ್ಲವನ್ನೂ ಒಂದೊಂದು ಇಟ್ಟಿಗೆಯಾಗಿ ಕಿತ್ತು ಹಾಕುತ್ತಿದ್ದೀರಿ, ನೀವು ಹೇಳುವ ರೀತಿಯಲ್ಲಿ ಹಣಕಾಸಿನ ಪರಿಸ್ಥಿತಿ ಸರಿಯಿಲ್ಲ. ಇವರು ಬಂದ ಮೇಲೆ ಯಾವತ್ತೂ ಕೂಡ Plan expenditure 70%, 80%. ಕಿಂತ ಮುಂದಕ್ಕೆ ಹೋಗೇ ಇಲ್ಲ. ಈ ವರ್ಷ ಡಿಸೆಂಬರ್ ಅಂತ್ಯದವರೆಗೆ ನೀವು ಮಾಡಿರುವುದು ಕೇವಲ 42%. Plan expenditure is only 42%. ಇನ್ನು 3 ತಿಂಗಳಲ್ಲಿ 58% ಮಾಡುತ್ತೀರಾ? ಆ ಮೂರು ತಿಂಗಳಲ್ಲಿ 58% ಎಂದು ಲೆಕ್ಕ ಏತಕ್ಕೆ ತೋರಿಸಿದ್ದಾರೆಂದರೆ, ಜನವರಿ, ಫೆಬ್ರವರಿ ಮತ್ತು ಮಾರ್ಚಿನಲ್ಲಿ ಎಲ್ಲಾ ಬಿಡುಗಡೆ ಮಾಡಿಬಿಟ್ಟು ತಿಂದುಕೊಳ್ಳುವುದು. ಎರಡೂವರೆ ತಿಂಗಳೇ ಉಳಿಯುವುದು, ಕೊನೆಯ 15 ದಿವಸ ಮಾಡುವ ಹಾಗಿಲ್ಲ, ಟ್ರೆಜರಿ ಎಲ್ಲಾ ಲಾಕ್ ಮಾಡುತ್ತಾರೆ, ಎರಡೂವರೆ ತಿಂಗಳಿನಲ್ಲಿ ಮಾಡುವುದಕ್ಕಾಗುತ್ತದೆಯೇ? ಇವರು ಬಂದ ಮೇಲೆ financial discipline ಎಲ್ಲಾ ಹಾಳಾಯಿತು, ತೆರಿಗೆ ವಸೂಲಿ ಆಗಲಿಲ್ಲ. ಆಮೇಲೆ ಅಸೆಟ್ ಕ್ರಿಯೇಟ್ ಆಗಲಿಲ್ಲ, ಸಾಲ ತೆಗೆದುಕೊಂಡು ಬಂದ ಮೇಲೆ ಅಸೆಟ್ ಕ್ರಿಯೇಟ್ ಆಗಬೇಕು, ಆಸ್ತಿ ನಿರ್ಮಾಣವಾಗಬೇಕು, ಆಸ್ತಿ ನಿರ್ಮಾಣವಾಗಲಿಲ್ಲ. ಮತ್ತೆ ಸಾಲ ಸಿಗುತ್ತದೆಂದು ಸಾಲ ತೆಗೆದುಕೊಳ್ಳುವುದಕ್ಕೆ ಹೋಗಬಾರದು, on the basis of affordability, not on the basis of availability. ಸಾಲದ ಪ್ರಿನ್ಸಿಪಲ್ ಇರುವುದೇನು? Good finance ಎಂದರೆ, ಸಾಲ ಸಿಗುತ್ತದೆಂದು ಸಾಲ ತೆಗೆದುಕೊಳ್ಳಬಾರದು, ನಮ್ಮ ಅಗತ್ಯಕ್ಕೆ ಮತ್ತು ಶಕ್ತಗನುಗುಣವಾಗಿ ಸಾಲ ತೆಗೆದುಕೊಳ್ಳಬೇಕು. ಸಾಲ ತೆಗೆದುಕೊಂಡು ಮೇಲೆ ಅದನ್ನು ಸಂಬಳ ಕೊಡುವುದಕ್ಕೋ, non-developmental expenditureಗೋ ಖರ್ಚು ಮಾಡುವುದಲ್ಲ ಅದನ್ನು capital outlay ಗೆ ಖರ್ಚು ಮಾಡಬೇಕು capital formation ಗೆ ಖರ್ಚು ಮಾಡಬೇಕು. ಇಲ್ಲಿ capital formation ಗೆ ಖರ್ಚು ಮಾಡಿಲ್ಲ. Capital formation every year decline ಆಗುತ್ತಿದೆ Nonplen

expenditure if going up. plan expenditure is declining. Thereby, ಇವತ್ತು ಈ ರಾಜ್ಯದ ಅಭಿವೃದ್ಧಿ ಕುಂಠಿತವಾಗಿದೆ ಎನ್ನುವುದು ಬಹಳ ಸ್ಪಷ್ಟವಾಗಿ ಕಾಣಿಸುತ್ತದೆ. ಇನ್ನು ಕೃಷಿ, ಬಹಳ ಚೆನ್ನಾಗಿ ಮಾಡಿದ್ದೇವೆ, ಉತ್ಪಾದನೆ ಜಾಸ್ತಿಯಾಗಿದೆ, ಎಂದು ಹೇಳಿದ್ದಾರೆ. 2011–12, 2012–13 ಮತ್ತು 2013–14, ಹೀಗೆ 3ನೇ ಕೃಷಿ ಬಜೆಟ್ ಮಂಡಿಸಿದ್ದಾರೆ. ಕೃಷಿ ಸಚಿವಾರಾದ ಉಮೇಶ್ ಕತ್ತಿಯವರೆ, 3 ಕೃಷಿ ಬಜೆಟ್ ಮಂಡಿಸಿದ ಮೇಲೆ ಕೃಷಿ ಪ್ರೈಮರಿ ಸೆಕ್ಟರ್‌ನಲ್ಲಿ ಒಂದು ದೊಡ್ಡ ಬದಲಾವಣೆಯಾಗಬೇಕು ಹೌದು ತಾನೆ? ಬದಲಾವಣೆಯಾಗಿದೆಉಯೇ? ಏರುಮುಖವಾಗಿ ಬದಲಾವಣೆಯಾ–ಗಿದೆಯೆ ಎಂದು ನಾನು ಕೇಳುತ್ತಿರುವುದು? ಆದರೆ ಇಳಿಮುಖವಾಗಿ ಬದಲಾವಣೆಯಾಗಿದೆ. Economic Surveyನಲ್ಲಿ ನಿಮ್ಮ ಪರಿಸ್ಥಿತಿ ಏನಾಗಿದೆ ಎಂದು ಹೇಳಲೇ?

**ಶ್ರೀ ಬಿ.ಎನ್ ಬಚ್ಚೇಗೌಡ** : ಮೊನ್ನೆ Economic Survey ಬಗ್ಗೆ ಹೇಳಿದ್ದೀರಿ.

**ಶ್ರೀ ಸಿದ್ದರಾಮಯ್ಯ** : ನಾನು ಮಾತನಾಡಿಲ್ಲ, ಹೊರಗಡೆ ಮಾತನಾಡಿದ್ದೆ, ಇಲ್ಲಿ ನಾನು ಇದರ ಬಗ್ಗೆ ನಾನು ಮಾತನಾಡೇ ಇಲ್ಲ, ಹೊರಗಡೆ ಹೇಳಿದ್ದನ್ನೇ ಹೇಳುತ್ತಿದ್ದೀರಾ? ನಾನು ಹೊರಗಡೆ ಹೇಳಿದ್ದನ್ನು ನೀವು ಓದಿಕೊಂಡಿದ್ದೀರಿ ಅಷ್ಟೆ. ಇವತ್ತು ಕೃಷಿ primary sector ನಿಂದ tham agriculture and allied subjects, what is the percentage of contribution to GDP? ಕಳೆದ ವರ್ಷಕ್ಕೆ ಈ ವರ್ಷಕ್ಕೆ ಜಾಸ್ತಿಯಾಗಿದೆಯೋ ಕಡಿಮೆಯಾಗಿದೆಯೋ? ಕಡಿಮೆಯಾಗಿದೆ. why? ಕಳೆದ ವರ್ಷ ಬರಗಾಲ–ವಿರಲಿಲ್ಲವೇ? ಕಳೆದ ವರ್ಷ ನಿಮ್ಮ ಪ್ರಕಾರ food production was 118 lakh tonnes This year you have expected 125 lakh tonnes. ಬರಗಾಲವಿದ್ದದ್ದು 2010–11, 2011–12, 2012–13ರಲ್ಲಿ, ಇದನ್ನು ನಾನು ಓದಿಕೊಂಡೇ ಹೇಳುತ್ತಿರುವುದು, ನಾನು ಹೇಳುವ ಫಿಗರ್ಸ್ ನಲ್ಲಿ ಹೆಚ್ಚು ಕಡೆಮೆಯಾದರೆ rectify ಮಾಡಿ.

**ಶ್ರೀ ಉಮೇಶ್ ವಿ. ಕತ್ತಿ** : ನಮ್ಮ ಸರ್ಕಾರ ಬರುವುದಕ್ಕೆ ಮುಂಚೆ ಈ ರಾಜ್ಯದ ಆಹಾರೋತ್ಪಾದನೆ ಎಷ್ಟು ಇತ್ತು ಹೇಳಿ? ನಾಲ್ಕು ವರ್ಷಗಳ ಹಿಂದೆ 109 ಲಕ್ಷ ಮೆಟ್ರಿಕ್ ಟನ್ ಅಷ್ಟು ಆಹಾರೋತ್ಪಾದನೆ ಇತ್ತು. We have brought it to 140 lakh tonnes.

ಶ್ರೀ ಸಿದ್ದರಾಮಯ್ಯ :- ಕಳೆದ 10 ವರ್ಷಗಳಿಂದ ಆಹಾರೋತ್ಪಾದನೆ stagnant ಆಗಿದೆ. 108, 109, 110, 112 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಆಗಿರುವುದು. ಕಳೆದ ವರ್ಷ ನಿಮ್ಮ ಪ್ರಕಾರ 118 ಲಕ್ಷ ಮೆಟ್ರಿಕ್ ಟನ್ ಇತ್ತು. 2011-12ರ ಅಂಕಿ ಅಂಶಗಳನ್ನು ಓದಿ ಹೇಳಲಾ? ಹೋದ ವರ್ಷ 118 ಲಕ್ಷ ಮೆಟ್ರಿಕ್‌ಟನ್ ಇತ್ತು, ಈ ವರ್ಷ 2012-13ಕ್ಕೆ ಮಾರ್ಚ್ ಕೊನೆಯವರೆಗೆ ಈ ಆರ್ಥಿಕ ವರ್ಷದಲ್ಲಿ 125 ಲಕ್ಷ ಮೆಟ್ರಕ್ ಟನ್ ಆಗಬಹುದು ಎಂದು ಅಂದಾಜು ಮಾಡಲಾಗಿದೆ. ನಿಮ್ಮ ಅಂದಾಜಿನ ಪ್ರಕಾರ ಕಳೆದ ವರ್ಷಕ್ಕೂ ಈ ವರ್ಷಕ್ಕೂ ಏಳು ಲಕ್ಷ ಮೆಟ್ರಿಕ್‌ಟನ್ ಕಡಿಮೆ ಆಗಿದೆ. ಅದರ ಹಿಂದಿನ ವರ್ಷ ನಿಮಗೆ 132 ಲಕ್ಷ ಮೆಟ್ರಿಕ್ ಟನ್ ಆಹಾರೋತ್ಪಾದನೆಯಾಗಿತ್ತು. 2011-12ರಲ್ಲಿ ಬರಗಾಲ 118 ಲಕ್ಷ ಮೆಟ್ರಿಕ್‌ಟನ್ 2012-13ರಲ್ಲಿ ಬರಗಾಲ 125 ಲಕ್ಷ ಮೆಟ್ರಿಕ್ ಟನ್, ನಿಮ್ಮ ಆಹಾರೋತ್ಪಾದನೆ ಜಾಸ್ತಿಯಾಗಿದೆ ಆದರೆ comtribution to the GDP decline ಆಗಿದೆ. Why this anomaly, why this contradiction? ಅದು estimate ಅಷ್ಟೇ. ಅಷ್ಟೇ ಆಗುತ್ತದೆ ಎಂದಲ್ಲ ಅದಕ್ಕಿಂತ ಕಡಿಮೆ ಆಗುತ್ತದೆ.

ಶ್ರೀ ವೈ.ಎನ್.ರುದ್ರೇಶ್‌ಗೌಡ : ಮಳೆ 25% ಕಡಿಮೆಯಾಗಿದೆ.

ಶ್ರೀ ಸಿದ್ದರಾಮಯ್ಯ : ಮಳೆ 25% ಕೊರತೆಯಾಗಿದೆ ಎಂದು ಹೇಳಿದರು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕೃಷಿಗೆ investment ಮೇಳ ಮಾಡಿದರು. ಬಂಡಾವಾಳ ಹೂಡಿಕೆ. ಮಾನ್ಯ ಮುರುಗೇಶ್ ನಿರಾಣಿಯವರು GIM ಮಾಡಿದರು. ಅಲ್ಲಿಯೂ ಕೂಡ ನೀವು GIM ಮಾಡುವುದಕ್ಕಿಂತ ಮುಂಚಿತವಾಗಿ 27% ಇತ್ತು. It has been reduced to 25% and odd. After the GIM ಕೈಗಾರಿಕಾ ಉತ್ಪಾದನೆ ಕಡಿಮೆ ಆಗಿ ಹೋಯಿತು. Economic Survey ಸರಿಯೋ ತಪ್ಪೋ? ಇದನ್ನು ಓದಿ ನಾನು ಹೇಳಿರುವುದು ಸರಿಯಾಗಿಲ್ಲವೆಂದರೆ ನೀವು ಹೇಳಿ. ನೀವೇ ಕೊಟ್ಟಿರುವ Economic Survey ನಾನು ಓದುತ್ತಿರುವುದು.

ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ : ನಾನು ಅದನ್ನು ನೋಡಿಲ್ಲ. ನೋಡುತ್ತೇನೆ.

ಶ್ರೀ ಸಿದ್ಧರಾಮಯ್ಯ : Economic Survey survey, this is furnished by you only. ನಾನು ಓದಿಕೊಂಡು ಬಂದು ಹೇಳುತ್ತಿದ್ದೇನೆ.

**ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ** : 2002ರಲ್ಲಿ ಕಾಂಗ್ರೆಸ್ ಸರ್ಕಾರದಲ್ಲಿ ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯ ಮಂತ್ರಿಗಳಾಗಿದ್ದಾಗ ಒಂದು Global Investors meet ಮಾಡಿದ್ದರು. ಆ ಸಂದರ್ಭದಲ್ಲಿ 12,000 ಕೋಟಿ ರೂ.ಗಳಷ್ಟು MOU ಗಳಿಗೆ ಸಹಿ ಮಾಡಲಾಗಿತ್ತು. ಅದರಲ್ಲಿ ಅಂದಾಜು 60% ನಷ್ಟು conversion ಆಗಿ implement ಆಯಿತು. ಅಂದಾಜು 8,000 ಕೋಟಿ ರೂ. ಗಳಷ್ಟು, ಎಲ್ಲವೂ ಫಿಗರ್‌ಗಳು ಇವೆ. ಆದರೆ ನಾವು 2010 ರ ಜೂನ್‌ನಲ್ಲಿ ಮಾಡಿದಾಗ 3,72,000 ಕೋಟಿ ರೂ.ಗಳಷ್ಟು MOU ಗಳಿಗೆ ಸಹಿ ಆಯಿತು, ಅದರಲ್ಲಿ 62% ನಷ್ಟು ಬೇರೆ ಬೇರೆ ಹಂತಗಳಲ್ಲಿ implement ಆಗುತ್ತಿದೆ. 2012ರಲ್ಲಿ ಬಂಡಾವಾಳ ಹೂಡಿಕೆದಾರರ ಸಮಾವೇಶ (GIM) ಮಾಡಿದಾಗ 7,82,000 ಕೋಟಿ ರೂ.ಗಳಷ್ಟಾಗಿದೆ. Practical ಆಗಿ implement ಆಗುತ್ತಿದೆ. ಇದಕ್ಕೆ proof ಏನು ಎಂದು ನೀವು ಕೇಳಬಹುದು. 1,200 ಕೋಟಿ ರೂ.ಗಳಷ್ಟು ಹಣವನ್ನು ಭೂಮಿ ಸಲುವಾಗಿ MOU ಸಹಿ ಮಾಡಿರುವಂತಹ ಕಂಪನಿಗಳು ನಮ್ಮ KIADB ಗೆ ಡೆಪಾಸಿಟ್‌ಗಳನ್ನು ಮಾಡಿದ್ದಾರೆ. ಇದರಿಂದ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ, ಇಡೀ ದೇಶದಲ್ಲಿ MOU ಸಹಿ ಮಾಡುವುದರಲ್ಲಿ ಹೆಚ್ಚು conversion ಆಗುತ್ತಿರುವುದು ಕರ್ನಾಟಕ ರಾಜ್ಯದಲ್ಲಿ. ಕಳೆದ ಮೂರು ತಿಂಗಳುಗಳ ಹಿಂದೆ World Economic Survey ಯೂನಿಟ್‌ದವರು ಸರ್ವೇ ಮಾಡಿರುವಂತಹ ಹಿನ್ನೆಲೆಯಲ್ಲಿ ಬಂಡಾವಳ ಆಕರ್ಷಣೆ ಮತ್ತು ಆರ್ಥಿಕ ಸದೃಢತೆಯಲ್ಲಿ ದೇಶದಲ್ಲಿಯೇ ಕರ್ನಾಟಕ ರಾಜ್ಯ ಮೊದಲನೇ ಸ್ಥಾನದಲ್ಲಿದೆ. ಇಡೀ ಜಗತ್ತಿನ ಪ್ರಮುಖ 20 ದೇಶಗಳಲ್ಲಿ ಕರ್ನಾಟಕ ರಾಜ್ಯ 16ನೇ ಸ್ಥಾನದಲ್ಲಿದೆ. ಗುಜರಾತ್ 19ನೇ ಸ್ಥಾನದಲ್ಲಿದೆ.

**ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್** : ಆದರೆ GDP contribution reduce ಆಗಿದೆ. ಅದನ್ನು ಮಾನ್ಯ ಮಂತ್ರಿಗಳು ತಿಳಿದುಕೊಳ್ಳಬೇಕು.

**ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ** : Recession ಇರುವುದರಿಂದ ದೇಶದ ಎಲ್ಲಾ ರಾಜ್ಯಗಳಲ್ಲಿಯೂ ಡೌನ್ ಆಗಿರುವುದರಿಂದ ನಮ್ಮ ಕರ್ನಾಟಕ ರಾಜ್ಯದಲ್ಲಿಯೂ ಆಗಿದೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ರಾಜ್ಯದಲ್ಲಿ ಕಡಿಮೆಯಾಗಿಲ್ಲ. We are number one.

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್** : GIM ಬಗ್ಗೆ ಅವರ conversion ನೋಡಿದರೆ ಅದರ ಬಗ್ಗೆ ಸದನದಲ್ಲಿ ಚರ್ಚೆಯೇ ಆಗಲಿ. ಅದರಲ್ಲಿ ಬರೀ real estate ಗೆ ಕೊಟ್ಟಿದ್ದಾರೆ. ಇದರಲ್ಲಿ ಸ್ವಂತ ಲಾಭಕ್ಕಾಗಿ ಮಾಡಿರುವಂಥದ್ದು ಜಾಸ್ತಿ ಇದೆ. Manufacturing unit ಗೆ conplete investment ಆಗಿ ಅದು ಎಷ್ಟು ಜನರಿಗೆ ಉದ್ಯೋಗ ಕೊಟ್ಟಿದೆ. ಎಷ್ಟು production ಆಗಿದೆ ಎನ್ನುವುದು ಈ ಸದನದಲ್ಲಿ ಚರ್ಚೆಯಾದರೆ ಗೊತ್ತಾಗುತ್ತದೆ. ಸುಮ್ಮನೆ ಅಂಕಿ ಅಂಶಗಳನ್ನು ಹೇಳುವುದಲ್ಲ. ಮಾನ್ಯ ಮಂತಿಗಳು ಒಂದು white paper publish ಮಾಡಿ. ಏಕೆಂದರೆ, 2010 GIM ಅಲ್ಲಿ ಏನಾಯಿತು? What is the fact and figures? 2012 ರಲ್ಲಿ ಏನಾಯಿತು, ಎಷ್ಟು implement ಆಗಿದೆ? ಇದು ಸುಮ್ಮನೆ ಮರೆ ಮಾಚತಕ್ಕಂತಹ ಕೆಲಸ. 60% ಎಂದು ಹೇಳಿದ್ದಾರೆ, 20% production ಆಗಿದೆಯೇ ಹೇಳಿ ಬೇರೆ ಬೇರೆ ಹಂತ ಎಂದು ಹೇಳಬೇಡಿ. ಮೂರು ವರ್ಷಗಳು ಕಳೆದವು.

**ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ** : ಯಾವುದೇ ಒಂದು ಪ್ರಾಜೆಕ್ implement ಆಗಬೇಕಾದರೆ, ಮಿನಿಮಮ್ ಎರಡು ವರ್ಷದಿಂದ ಐದು ವರ್ಷಗಳವರೆಗೆ ಕಾಲಾಕಾಶ ಬೇಕಾಗುತ್ತದೆ. 2010ರ GIM ಮಾಡಿರುವಂಥ-ದ್ದು ಇವತ್ತು ಮೂರನೇ ವರ್ಷದಲ್ಲಿ ಪಾದಾರ್ಪಣೆ ಮಾಡುತ್ತಿದ್ದೇವೆ. ಈಗಾಗಲೇ 42 ಯೂನಿಟ್‌ಗಳು complete ಆಗಿ work ಮಾಡುತ್ತಿವೆ. 186 ಯೂನಿಟ್‌ಗಳು ಬೇರೆ ಬೇರೆ ಹಂತಗಳಲ್ಲಿವೆ. ಪೂರ್ತಿ ಮಾಡಬೇಕಾದರೆ, ಒಟ್ಟು MOU ಸಹಿ ಮಾಡಿದವರಲ್ಲಿ 62% project ಬರುತ್ತಿದೆ, ಅದು complete ಆಗಬೇಕಾದರೆ ಐದು ವರ್ಷಗಳು ಬೇಕು. ಇಡೀ ರಾಜ್ಯದ ಹಾಗೂ ದೇಶದ ಜನತೆಗೆ ಗೊತ್ತಾಗುವ ಸಲುವಾಗಿ ಪ್ರತಿ ಮೂರು ತಿಂಗಳಿಗೊಮ್ಮೆ ಯಾವ್ಯಾವ ಯೂನಿಟ್‌ಗಳು ಯಾವ್ಯಾವ ಜಿಲ್ಲೆಯಲ್ಲಿ ಯಾವ ಸೆಟ್‌ನಲ್ಲಿ ಬರುತ್ತವೆ ಎನ್ನುವುದನ್ನು advertisement ಗಳ ಮುಖಾಂತರ ನಾವು ತೋರಿಸುತ್ತಿದ್ದೇವೆ. ಪ್ರತಿ quarterly ಮಾಡುತ್ತಿದ್ದೇವೆ. ಇದಕ್ಕಿಂತ ಮೇಲಾಗಿ white paper ಬೇಕಾದರೆ ಅದನ್ನು ತಯಾರು ಮಾಡಿಕೊಡುತ್ತೇನೆ.

**ಶ್ರೀ ಸಿದ್ದರಾಮಯ್ಯ** : ಮಾನ್ಯ ನಿರಾಣಿಯವರೇ, ನಾನು Economic Survey ಯನ್ನು ನಿಮ್ಮ ಗಮನಕ್ಕೆ ತಂದು ಬಿಡುತ್ತೇನೆ. ಅದು ನಿಮ್ಮ

ಗಮನದಲ್ಲಿರಲಿ, the sectoral composition of Gross State Domestic Product (GSDP) a marginal decrease ಮಾಡಿದ ಮೇಲೆ increase ಆಗಬೇಕೋ decrease ಆಗಬೇಕೋ?

**ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ :** ಯಾವುದೇ ಪ್ರಾಜೆಕ್ಟ್ MOU ಸಹಿ ಮಾಡಿದ ಮೇಲೆ it takes its own time.

**ಶ್ರೀ ಸಿದ್ದರಾಮಯ್ಯ :** My point is ನೆನ್ನೆ ಮೊನ್ನೆ ಅಲ್ಲ, ಒಂದು GIM ಆಗಿ ಎರಡು ವರ್ಷಗಳು ಕಳೆದವು. ಮೊನ್ನೆ ಒಂದು GIM ಆಗಿದೆ. 2012 ಕ್ಕೆ ಒಂದು ಆಯಿತು, 2010 ಕ್ಕೆ ಒಂದು ಆಯಿತು. ನೀವು ಏನೂ ಮಾಡಿಲ್ಲವೆಂದು ಇಟ್ಟುಕೊಳ್ಳೋಣ, ನಿಮ್ಮ industries growth ಸ್ವಲ್ಪವಾದ-ರೂ, ಒಂದೊಂದು ವರ್ಷ ಹೆಚ್ಚಾಗುತ್ತಾ ಹೋಗಬೇಕಲ್ಲಾ?. ಕಡಿಮೆ ಆಗಬೇಕೋ, ಹೆಚ್ಚಾಗುತ್ತಾ ಹೋಗಬೇಕೋ? ಇಲ್ಲಿ ಇವೆಲ್ಲಾ ಆದ ಮೇಲೂ a marginal decrease is evident in the composition of GSDP of Agriculture and allied activities and Industry Sector from 16.1 percent ಕಳೆದ ವರ್ಷ 2011–12ಕ್ಕೆ 27% ಇತ್ತು. In 2011-12 contribution of agriculture 16.1 point ನಿಂದ 15.3 ಗೆ ಬಂತು. Industry ನಲ್ಲಿ 27.0 to 25.9 percent ಗೆ ಬಂತು. 27 ಜಾಸ್ತಿಯೋ, 25.9 ಜಾಸ್ತಿಯೋ? ಕಡಿಮೆ ಆಯಿತು. ಅದನ್ನೆ ನಾನು ಹೇಳುವುದು. ಇದು ನೀವು ಕೊಟ್ಟಿರುವ ಮಾಹಿತಿ. ಕಳೆದ ಎರಡು ವರ್ಷಗಳಲ್ಲಿ industries ನಲ್ಲಿ ಏನೇನಾಯಿತು ಎಂದು ಇಲ್ಲಿ ಬರೆದಿದ್ದೀರಿ. ಇದೆಲ್ಲಾ ಕಸರತ್ತು ಮಾಡಿದ ಮೇಲೆ ಕೂಡ Global Investors Meet ಆದ ಮೇಲೆ, ಮೊದಲನೇ Meet ಆಗಿ ಎರಡು ವರ್ಷವಾಯಿತು. ಎರಡನೇ Meet ಆಗಿ ಆರು ತಿಂಗಳ ಮೇಲಾಯಿತು. ಇಷ್ಟೆಲ್ಲಾ ಆದರೂ ಕೂಡ the contribution from the Industries sector to GSDP, GDP is decreased. Likewise in agriculture also it is decreased. This is the report in the Economic Survey in the year 2012–13. ಗೊತ್ತಾಯಿತಾ? ನೀವು ಒಪ್ಪಿಕೊಳ್ಳಲೇಬೇಕು, ವಿಧಿ ಇಲ್ಲ. ನಾನು ಓದಿಯೇ ಹೇಳಿಬಿಟ್ಟಿದ್ದೇನಲ್ಲ, ನೀವೇನು ಇಂಥದ್ದನ್ನೆಲ್ಲ ಓದುವುದಕ್ಕೇ ಹೋಗುವುದಿಲ್ಲವೆಂದು ಕಾಣುತ್ತದೆ, ನೀವು ಇಂಥದ್ದನ್ನೆಲ್ಲ ಓದಲೇಬೇಡಿ, ಓದಿ ತಲೆಯನ್ನೇಕೆ ಕೆಡಿಸಿಕೊಳ್ಳುತ್ತೀರಿ.

ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರಲ್ಲಿ ಯಾರೋ ಬರೆಯುತ್ತಾರೆ, ನೀವೇಕೆ ಇಂಥದ್ದನ್ನೆಲ್ಲ ಓದುವುದಕ್ಕೆ ಹೋಗುತ್ತೀರಿ ಹೇಳಿ.

**ಶ್ರೀ ಉಮೇಶ್ ವಿ. ಕತ್ತಿ** :– ಇಷ್ಟು ದೊಡ್ಡ ಪುಸ್ತಕ ಕೊಟ್ಟರೆ ಅದನ್ನು ನಾವು ಯಾವಾಗ ಓದುವುದು ಹೇಳಿ, ನಾನು ಶಾಲೆಗೆ ಸರಿಯಾಗಿ ಹೋಗಿ ಕಲಿತವನಲ್ಲ.

**ಶ್ರೀ ಸಿದ್ದರಾಮಯ್ಯ** :– ಒಂದು ಕೆಲಸ ಮಾಡಿ. ಇನ್ನು ಮುಂದೆ ನಾವು Economic Survey report ಅನ್ನು furnish ಮಾಡುವುದಿಲ್ಲವೆಂದು ತೀರ್ಮಾನವನ್ನು ತೆಗೆದುಕೊಳ್ಳಿ.

**ಶ್ರೀ ಉಮೇಶ್ ವಿ ಕತ್ತಿ** :– ಅದನ್ನು ನಾನು ಮಾಡುವುದಕ್ಕೆ ಆಗುವುದಿಲ್ಲ. ಸರ್ಕಾರಗಳು ಮಾಡಬೇಕಾಗುತ್ತದೆ.

**ಶ್ರೀ ಸಿದ್ದರಾಮಯ್ಯ** :– ಸರ್ಕಾರ ಎಂದರೆ ನೀವೇರಿ. ಸರ್ಕಾರ ಎಂದರೆ ಅದೇನು ದೇವಲೋಕದಲ್ಲಿದೆಯೇ?

**ಶ್ರೀ ಉಮೇಶ್ ವಿ. ಕತ್ತಿ** :– ಹಾಗಲ್ಲ, ಅದನ್ನು ಮಾಡಬೇಕಾಗುತ್ತದೆ, ಮಾಡುತ್ತಾರೆ. ಆದರೆ ಸದನದಲ್ಲಿರುವ ಬಹಳ ಜನರು ಯಾರು ಯಾರು ಶಾಲೆಗೆ ಸರಿಯಾಗಿ ಹೋಗಿಲ್ಲವೋ ಅವರೆಲ್ಲರೂ ಇಲ್ಲಿಗೆ ಬಂದಿದ್ದಾರೆ. ಅವರ ಕೈಗೆ ಇಷ್ಟು ದೊಡ್ಡ ಬುಕ್ ಕೊಟ್ಟು ಓದಿ ಓದಿ ಎಂದರೆ ಅವರು ಏನು ಓದುತ್ತಾರೆ ಹೇಳಿ.

**ಶ್ರೀ ಸಿದ್ದರಾಮಯ್ಯ** :– ಪಾಪ, ಈಗ ಉಮೇಶ್ ಕತ್ತಿಯವರು ಸತ್ಯ ಒಪ್ಪಿಕೊಂಡುಬಿಟ್ಟರು.

**ಛೇರ್ಮನ್** :– ಸಿದ್ದರಾಮಯ್ಯನವರೆ, ಏಕೆ ಅವರಿಗೆ ಈ ರೀತಿ ಕಷ್ಟ ಕೊಡುತ್ತೀರಿ?

**ಶ್ರೀ ಸಿದ್ದರಾಮಯ್ಯ** :– ಬೇಡ ಅಲ್ಲವೆ, ನೀವು ಹೇಳಿದ ಮೇಲೆ ಬಿಟ್ಟುಬಿಡುತ್ತೇವೆ. ಇನ್ನು ಸರ್ಕಾರದವರು ಹೇಳಿರುವಂತೆ ಕೃಷಿ ಕ್ಷೇತ್ರದಲ್ಲಿ ಅಧಿಕ ಉತ್ಪಾದನೆಯಾಯಿತು, ಇಂಡಸ್ಟ್ರಿಗಳು ಬೆಳೆದುಬಿಟ್ಟಿವೆ, ಇಂಡಸ್ಟ್ರಿಯಲ್ಲಿ ನಾವು ಕ್ರಾಂತಿಯನ್ನು ಮಾಡಿಬಿಟ್ಟಿದ್ದೇವೆ ಎಂದು ಹೇಳಿರುವುದೆಲ್ಲವೂ ಸತ್ಯಕ್ಕೆ ದೂರವಾದಂಥ ಮಾತುಗಳು. ರಾಜ್ಯಪಾಲರ ಭಾಷಣದಲ್ಲಿ ಸತ್ಯಕ್ಕೆ ದೂರವಾದ ವಿಚಾರಗಳನ್ನು ಹೇಳಿಸಿದ್ದಾರೆ. ಪಾಪ ಉಮೇಶ್ ಕತ್ತಿ ಯಾವಾಗಲೂ ಸತ್ಯವನ್ನು ಒಪ್ಪಿಕೊಳ್ಳುತ್ತಾರೆ. ಅವರು ಅದಕ್ಕೆಲ್ಲಾ ಹಿಂದು ಮುಂದು

ನೋಡುವುದಿಲ್ಲ. ಆ ಪುಸ್ತಕವನ್ನೇ ಓದಿಲ್ಲವೆಂದು ಹೇಳಿ ಅದರ ಗೋಜೇ ಬೇಡವೆಂದು ಹೇಳಿದ್ದಾನೆ.

**ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ** :- ಉಮೇಶ್ ಕತ್ತಿ ಓದಿರುವುದೇ ಬಹಳ ಕಡಿಮೆ ತರಗತಿ.

**ಶ್ರೀ ಸಿದ್ದರಾಮಯ್ಯ** :- ಆದರೂ ಇಲ್ಲಿಯವರೆಗೆ ಬಂದಿದ್ದಾರಲ್ಲ? ಉಮೇಶ್ ಕತ್ತಿ ನೀವು ಎಲ್ಲಿಯವರೆಗೆ ಓದಿದ್ದೀರಿ?

**ಶ್ರೀ ಉಮೇಶ್ ವಿ ಕತ್ತಿ** :- ಬಿ.ಎ.ಓದಿದ್ದೇನೆ.

**ಶ್ರೀ ಹೆಚ್.ಎಸ್.ಮಹದೇವ್ ಪ್ರಸಾದ್** :- ಯೂನಿವರ್ಸಿಟಿಯ graduation ಆಗಿದಿದ್ದರೂ public university ಯಲ್ಲಿ ಚೆನ್ನಾಗಿ ತಿಳಿದು-ಕೊಂಡಿದ್ದಾರೆ.

**ಶ್ರೀ ಸಿದ್ದರಾಮಯ್ಯ** :- ಆ ರೀತಿಯೇನಿಲ್ಲ, ಉಮೇಶ್ ಕತ್ತಿ ನೀನು graduate ಅಲ್ಲವೇನಯ್ಯಾ?

**ಶ್ರೀ ಉಮೇಶ್ ವಿ.ಕತ್ತಿ** :- ನಾನು ಬಿ.ಎ. ಮಾಡಿದ್ದೇನೆ. ಆದರೆ ಸರಿಯಾಗಿ ಶಾಲೆಗೆ ಹೋಗಿ ಕಲಿಯಲಿಲ್ಲವೆಂದು ಹೇಳಬಹುದು. ಈ ಸದನದಲ್ಲಿರುವವರಲ್ಲಿ ನಾನೊಬ್ಬನೇ ಆ ರೀತಿಯವನಲ್ಲ. ನನ್ನಂತೆ ಬಹಳ ಜನರು ಈ ಸದನದಲ್ಲಿ ಇದ್ದಾರೆ. ಬಹಳಷ್ಟು ಜನರು ಈ ಸದಸದಲ್ಲಿರುವವರು ಯಾರೂ ಹೆಚ್ಚು ಓದಿರುವುದಿಲ್ಲ.

**ಶ್ರೀ ಸಿದ್ದರಾಮಯ್ಯ** :- ಸತ್ಯವನ್ನು ಅಡ್ಮಿಟ್ ಮಾಡಿಕೊಂಡಿರುವುದ-ರಿಂದ ನಾನು ಪುನಃ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದುದರಿಂದ ಇವರು ಕೃಷಿ ಕ್ಷೇತ್ರದಲ್ಲಿ ಅಧಿಕ ಉತ್ಪಾದನೆ ಯಾಗಿದೆ, industries ನಲ್ಲಿ development ಜಾಸ್ತಿಯಾಯಿತು ಮತ್ತು growth ಜಾಸ್ತಿಯಾಗಿದೆ ಎಂದು ಹೇಳಿರತಕ್ಕಂಥದ್ದು ಸತ್ಯಕ್ಕೆ ದೂರವಾದುದು. ಅಂಕಿ ಅಂಶಗಳ ಪ್ರಕಾರ ಜಾಸ್ತಿಯಾಗಿಲ್ಲ. ಜಾಸ್ತಿ ಆಗಿದೆ ಎನ್ನುವುದನ್ನು ಅವರು ಸಾಬೀತು ಮಾಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಅಧಿಕ ಬೆಳೆ ಉತ್ಪಾದನೆಯಾಗಿದೆ ಎನ್ನುವುದು ಸತ್ಯಕ್ಕೆ ದೂರವಾದುದು. ಇನ್ನು ಈ ಬರ ಮತ್ತು ಸಾಲ ಮನ್ನಾ ಮಾಡಿದ್ದೇವೆಂದು ಇವರು ಹೇಳುತ್ತಿದ್ದಾರೆ. 2010-11, 2011-12ರಲ್ಲಿ ಕಳೆದ ನಲವತ್ತು ನಲವತ್ತೊಂದು ವರ್ಷಗಳಲ್ಲಿಯೇ ಇಲ್ಲದೇ ಇರತಕ್ಕಂಥ ರೀತಿಯಲ್ಲಿ ಅತಿ ಹೆಚ್ಚಿನ ಭೀಕರವಾದಂಥ ಬರಗಾಲ ಬಂತು. ಈ ಬರಗಾಲವನ್ನು

ಎದುರಿಸುವುದರಲ್ಲಿ ಇವರು ಸಂಪೂರ್ಣವಾಗಿ ಸೋತುಬಿಟ್ಟರು. **They have miserably failed** ಕುಡಿಯುವುದಕ್ಕೆ ನೀರೂ ಕೂಡ ಈಗ ಎಲ್ಲಿಯೂ ಇಲ್ಲ, ದನಕರುಗಳಿಗೆ ಮೇವಿಲ್ಲ, ಜನಗಳು ಗುಳೆ ಹೋಗುತ್ತಿದ್ದಾರೆ. ಆದುದರಿಂದ ಬರಗಾಲ ಎದುರಿಸುವುದರಲ್ಲಿ ಇವರು ಸಂಪೂರ್ಣ ವಿಫಲರಾದರು. ಇವತ್ತಿನವರೆವಿಗೂ ಹಣವನ್ನು ಬಿಡುಗಡೆ ಮಾಡಿಲ್ಲ ಈಶ್ವರಪ್ಪನವರೆ, ಆ 30 ಲಕ್ಷ ರೂ.ಗಳನ್ನು ಬಿಡುಗಡೆ ಮಾಡುತ್ತೇವೆಂದು ನೀವು ಹೇಳಿದ್ದಿರಲ್ಲ, ಆ ಹಣವನ್ನು ಇವತ್ತಿನವರೆವಿಗೂ ಬಿಡುಗಡೆ ಮಾಡಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ** :- ಸಿದ್ದರಾಮಯ್ಯನವರೆ, ತಾವು ಕುಳಿತುಕೊಳ್ಳಿ, ಹೇಳುತ್ತೇನೆ. ಅವತ್ತು ಇಡೀ ಸದನಕ್ಕೆ ನಾವು ಹೇಳಿದ್ದೆವು. 30 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದೇವೆ, ಅದನ್ನು ಟ್ಯಾಂಕರ್ ಮತ್ತು ಮೇವಿಗೋಸ್ಕರ ಖರ್ಚು ಮಾಡಬೇಕೆಂದು ಹೇಳಿದ್ದೆವು. ಅದಾದ ನಂತರ ನಿನ್ನೆಯಲ್ಲ, ಮೊನ್ನೆಯೇ ಮತ್ತೆ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 30 ಲಕ್ಷ ರೂ.ಗಳಂತೆ ಒಟ್ಟು 47 ಕೋಟಿ ರೂ.ಗಳಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಎಲ್ಲಾ ಜಿಲ್ಲಾಧಿಕಾರಿಗಳಿಗೂ ಕಳುಹಿಸಿದ್ದೇವೆ. ಅದರ ಬಗ್ಗೆ ಟಾಸ್ಕ್‌ಫೋರ್ಸ್‌ನಲ್ಲಿ ತಾವೇ ಕೇಳಿದ್ದಿರಿ. ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಣ ಹೋಗಿದೆ. ಹಣ ಬಿಡುಗಡೆ ಮಾಡಿರುವ ಪ್ರತಿಯನ್ನು ತಮಗೆ ಕೊಡುತ್ತೇವೆ.

**ಶ್ರೀ ಸಿದ್ದರಾಮಯ್ಯ** :- ಹಣ ಬಿಡುಗಡೆ ಮಾಡಿರುವ ಆದೇಶದ ಒಂದು ಪ್ರತಿಯನ್ನು ನಮಗೆ ಕಳುಹಿಸಿಕೊಡಿ.

**ಶ್ರೀ ಕೆ.ಎಸ್.ಈಶ್ವರಪ್ಪ** :- ಕಳುಹಿಸಿಕೊಡುತ್ತೇನೆ.

**ಶ್ರೀ ಸಿದ್ದರಾಮಯ್ಯ** :- ಇವತ್ತು ಕುಡಿಯುವ ನೀರಿನ ಸಮಸ್ಯೆ ಬಹಳ ಗಂಭೀರವಾಗಿದೆ. ಒಂದು ವಿಧಾನಸಭಾ ಕ್ಷೇತ್ರದಲ್ಲಿ ನೂರರಿಂದ ನೂರೈವತ್ತು ಹಳ್ಳಿಗಳಿರುತ್ತವೆ. ಆ ಎಲ್ಲಾ ಹಳ್ಳಿಗಳಿಗೂ ಟ್ಯಾಂಕರ್ ಮೂಲಕ ಕುಡಿಯುವ ನೀರನ್ನು ಕೊಡುವುದಕ್ಕಾಗುತ್ತದೆಯೇ? ಇವತ್ತು ಅಂತರ್ಜಲ ಮಟ್ಟ ಕೂಡ ಬಹಳ ಕುಸಿದು ಕೆಳಗೆ ಹೋಗಿದೆ. 1000 ಅಡಿ, 1200 ಅಡಿ, 1500 ಅಡಿ, ಹೀಗೆ ಬಹಳ ಕೆಳಗೆ ಅಂತರ್ಜಲದ ಮಟ್ಟ ಹೋಗಿದೆ. ಇದರ ಜೊತೆಗೆ ಈಗ ವಿದ್ಯುತ್ ಸಮಸ್ಯೆ ಬೇರೆ ಇದೆ. ದಿನಕ್ಕೆ ಎರಡು ಗಂಟೆಗಳ ಕಾಲ ಕೂಡ ಕರೆಂಟ್ ಸಿಗುತ್ತಿಲ್ಲ. ಆದರೆ ಇವರು 6 ಗಂಟೆಗಳ ಕಾಲ ಥ್ರೀ ಫೇಸ್‌ನಲ್ಲಿ ವಿದ್ಯುತ್ ಪೂರೈಕೆ ಮಾಡುತ್ತೇವೆಂದು ಹೇಳಿದ್ದಾರೆ. ಆಮೇಲೆ ಸಿಂಗಲ್

ಫೇಸ್‌ನಲ್ಲಿ ಸಾಯಂಕಾಲ 6.00 ಗಂಟೆಯಿಂದ ಬೆಳಗ್ಗೆ 6.00 ಗಂಟೆಯವರೆವಿಗೆ ನಿರಂತರವಾಗಿ ಕರೆಂಟ್ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಮಧ್ಯೆ ಮಧ್ಯೆ ಎಷ್ಟೋ ಗಂಟೆಗಳ ಕಾಲ ಕರೆಂಟ್ ಹೋಗುತ್ತಲೇ ಇರುತ್ತದೆ. ರಾತ್ರಿ ಹೊತ್ತಂತೂ ಕರೆಂಟ್ ಎಷ್ಟು ಸಾರಿ ಹೋಗುತ್ತದೋ, ಎಷ್ಟು ಸಾರಿ ಬರುತ್ತದೋ ಗೊತ್ತೇ ಇಲ್ಲ. ಇದರಿಂದಾಗಿ ಇವತ್ತು ಶಾಲಾ ಮಕ್ಕಳು ಓದಿಕೊಳ್ಳುವುದಕ್ಕೂ ಕೂಡ ಕರೆಂಟ್ ಇಲ್ಲವಾಗಿದೆ. ಪಾಪ ಅವರು ಮನೆಯಲ್ಲಿ ಜನರೇಟರ್ ಅಥವಾ ಇನ್ನ್ಯಾವುದೋ ಲ್ಯಾಂಪ್‌ಗಳನ್ನು ತೆಗೆದುಕೊಂಡು ಬಂದು ಬ್ಯಾಟರಿ ಹಾಕಿಕೊಂಡು ಓದಿಕೊಳ್ಳಬೇಕಾದಂಥ ಪರಿಸ್ಥಿತಿ ಇವತ್ತು ಬಂದುಬಿಟ್ಟಿದೆ. ಇವತ್ತು ಶಾಲಾ ಮಕ್ಕಳು ಓದಿಕೊಳ್ಳಲೂ ಕೂಡ ಕರೆಂಟ್ ಇಲ್ಲವಾಗಿದೆ. ಆದರೆ ಇವರು ವಿದ್ಯುತ್ ಉತ್ಪಾದನೆಯನ್ನು ಬಹಳ ಚೆನ್ನಾಗಿ ಮಾಡಿಬಿಟ್ಟಿದ್ದೇವೆಂದು ಹೇಳಿಬಿಟ್ಟಿದ್ದಾರೆ. ಇವರು ಅಧಿಕಾರಕ್ಕೆ ಬಂದ ಮೇಲೆ ಕಳೆದ ನಾಲ್ಕು ವರ್ಷದಲ್ಲಿ 4593 M.W. ವಿದ್ಯುತ್ ಉತ್ಪಾದನೆಯನ್ನು ಮಾಡಿದ್ದೇವೆಂದು ಹೇಳಿದ್ದಾರೆ. ರಾಯಚೂರಿನ ಥರ್ಮಲ್ ಯೂನಿಟ್‌ನ 8ನೇ ಘಟಕದ 250 M.W. ಮತ್ತು ಬಳ್ಳಾರಿಯದ್ದು 500 M.W. ವಿದ್ಯುತ್ ಉತ್ಪಾದನೆ ಮಾಡಿರುವುದು, ಹೀಗೆ ಇವೆರಡನ್ನು ಬಿಟ್ಟರೆ ಬೇರೆ ವಿದ್ಯುತ್ ಉತ್ಪಾದನೆ ನೀವು ಮಾಡಿಲ್ಲ. ಆದರೆ ಇವೆರಡೂ ಕೂಡ ನಿಮ್ಮ ಕಾಲದಲ್ಲಿ ಪ್ರಾರಂಭವಾಗಿರುವಂಥದ್ದಲ್ಲ. ನೀವು ಅದನ್ನು ಪ್ರಾರಂಭ ಮಾಡಿದ್ದೂ ಕೂಡ ಅಲ್ಲ. ಆದುದರಿಂದ ಅವೆರಡರಿಂದ ವಿದ್ಯುತ್ ಉತ್ಪಾದನೆ ಆಗಿರುವುದಕ್ಕೆ ಸಂಬಂಧಪಟ್ಟಂತೆ ಅದರ ಕ್ರೆಡಿಟ್‌ನ್ನು ನೀವು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಇವೆರೆಡು ಬಿಟ್ಟರೆ ನೀವು ಒಂದೇ ಒಂದು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಿದ್ದೇವೆಂದು ತೋರಿಸಿ ನೋಡೋಣ. ಖಾಸಗಿ ಕ್ಷೇತ್ರದಲ್ಲಿ ಆಗಿದೆ **that is different** ನೀವು ಬಂದ ಮೇಲೆ ಐದು ವರ್ಷದಲ್ಲಿ 500 **M.W. Bellary and 250 M.W. in Raichur 8th unit,** ಇವೆರಡರಲ್ಲಿ ಆಗಿರುವ ವಿದ್ಯುತ್ ಉತ್ಪಾದನೆಯನ್ನು ಬಿಟ್ಟರೆ ನೀವು ಒಂದು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಿದ್ದೇವೆಂದು ತೋರಿಸಿ ನೋಡೋಣ. ಮತ್ತೆ ಕರೆಂಟ್ ಪರಿಸ್ಥಿತಿ ಈ ರೀತಿ ಬರದೇ ಇನ್ನೇನಾಗುತ್ತದೆ ಹೇಳಿ? ಎಲ್ಲವೂ ನಿಮ್ಮದು ಕೇವಲ ಪ್ಲಾನ್‌ಗಳೇ ಆಗಿವೆ. ಛತ್ತೀಸ್‌ಘಡದಲ್ಲಿ ಮಾಡುತ್ತೇವೆ, ಯಡ್ಲಾಪುರದಲ್ಲಿ ಮಾಡುತ್ತೇವೆ. ಎರ್‌ರಸ್‌ನಲ್ಲಿ ಮಾಡುತ್ತೇವೆ,

ಬಿಡದಿಯಲ್ಲಿ ಮಾಡುತ್ತೇವೆ, ಉಡುಪಿಯಲ್ಲಿ ಮಾಡುತ್ತೇವೆ, ಜಾರ್ಖಂಡ್‌ನಲ್ಲಿ ಮಾಡುತ್ತೇವೆ, ಹೀಗೆ ಎಲ್ಲವೂ ನಿಮ್ಮದು ಕೇವಲ ಪ್ಲಾನ್‌ಗಳು. ಇವರ ಕೈಯಲ್ಲಿ ಕಳೆದ ಐದು ವರ್ಷದಲ್ಲಿ ಒಂದೇ ಒಂದು ಮೆಗಾವ್ಯಾಟ್ ಉತ್ಪಾದನೆಯನ್ನು ಮಾಡುವುದಕ್ಕೆ ಆಗಲಿಲ್ಲ. ಇವತ್ತು ನಮ್ಮ ರಾಜ್ಯದ ಗ್ರಿಡ್‌ಗೆ except 250 M.W. and 500 M.W, ಹೀಗೆ ಇವೆರಡು ಬಿಟ್ಟರೆ ಕೇವಲ ಒಂದೇ ಒಂದು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯನ್ನು ಇವರ ಕೈಯಲ್ಲಿ ಮಾಡುವುದಕ್ಕೆ ಆಗಿಲ್ಲ. ಆದರೂ ಕೂಡ ನಾವು 4593 ಮೆಗಾವ್ಯಾಟ್ ವಿದ್ಯುತ್‌ನ್ನು ಉತ್ಪಾದನೆ ಮಾಡಿದ್ದೇವೆ ಎಂದು ಹೇಳಿಕೊಂಡಿದ್ದಾರೆ. It is far from truth, not at all correct. This is the position. That is why, ಇವತ್ತು ಎರಡು ಗಂಟೆಗಳ ಕಾಲ ಕರೆಂಟ್ ಸಿಗುತ್ತಿಲ್ಲ, ಕುಡಿಯುವುದಕ್ಕೆ ನೀರಿಲ್ಲ, ಮಕ್ಕಳು ಓದಿಕೊಳ್ಳುವುದಕ್ಕೆ ಕರೆಂಟ್ ಇಲ್ಲ. ಇವತ್ತು 20 ಲಕ್ಷ ಪಂಪ್‌ಸೆಟ್‌ಗಳಿವೆ ಇವಕ್ಕೆ ದಿನಕ್ಕೆ ಎರಡು ಗಂಟೆಗಳ ಕಾಲವೂ ಕೂಡ ಕರೆಂಟ್ ಸಿಗದಿದ್ದರೆ ರೈತರು ಏನು ಮಾಡಬೇಕು? ಈ 20 ಲಕ್ಷ ಪಂಪ್‌ಸೆಟ್‌ಗಳಿಂದ ಸುಮಾರು 50 ಲಕ್ಷ ಎಕರೆ ಅಚ್ಚುಕಟ್ಟಾಗಿದೆ. ಈ ಪಂಪ್‌ಸೆಟ್‌ಗಳಿಗೆ ಕರೆಂಟ್ ಸಿಗದಿದ್ದರೆ ಈ ರೈತರು ಹೇಗೆ ಉದ್ಧಾರವಾಗುತ್ತಾರೆ ಹೇಳಿ ನೋಡೋಣ. ನಾವು ರೈತರ ಪರವಿದ್ದೇವೆ, ನಮ್ಮದು ರೈತರ ಪರವಾಗಿರತಕ್ಕಂಥ ಸರ್ಕಾರ, ರೈತರಿಗೆ ಅನ್ಯಾಯವಾದರೆ ಈ ಕುರ್ಚಿಯಲ್ಲಿ ನಾವು ಉಳಿಯುವುದಿಲ್ಲವೆಂದು ಹೇಳಿದ್ದಿರಿ. ಮತ್ತೆ ನೀವು ಇನ್ನೂ ಏಕೆ ಈ ಕುರ್ಚಿಯಲ್ಲಿ ಉಳಿದಿದ್ದೀರಿ? ರೈತರಿಗೆ ಆಗಿರುವುದು ಅನ್ಯಾಯವಲ್ಲವೆ? This is the ground reality.

ಈ ರೀತಿ ಅನೇಕ ವಿಚಾರಗಳನ್ನು ಹೇಳಿಸಿದ್ದಾರೆ. ವಿದ್ಯುತ್ ಕ್ಷೇತ್ರದಲ್ಲಿ ಇವರ ಸಾಧನೆ ಜೀರೋ. ಕೃಷಿಯಲ್ಲಿ Production ಕಡಿಮೆಯಾಗಿದೆ. ಕಾನೂನು ವ್ಯವಸ್ಥೆ ಹದಗೆಟ್ಟು ಹೋಗಿದೆ. ಹಣಕಾಸಿನ ಪರಿಸ್ಥಿತಿ ನೋಡಿದರೆ ಇವತ್ತು ರಾಜ್ಯ ಸಾಲಗಾರವಾಗಿದೆ. ನಾನು ಈಗಾಗಲೇ ಹೇಳಿದಂತೆ 1,37,000 ಕೋಟಿ ರೂಪಾಯಿ ಮುಂದಿನ ವರ್ಷಕ್ಕೆ ಸಾಲ, ಈ ವರ್ಷ 1,18,000 ಕೋಟಿ ರೂಪಾಯಿ ಸಾಲ ಇದೆ. ಇದೆಲ್ಲವನ್ನು ನಾವು ಬಂದು ತೀರಿಸಬೇಕು. ನೀವು ಇನ್ನು ಬರುವುದಿಲ್ಲವೆಂದು ಗೊತ್ತಾಗಿ ಈ ರೀತಿ ಮಾಡಿಟ್ಟು ಹೋಗಿರುವುದು. ನಾವು ಬಂದಿರುವುದಿಲ್ಲವೇ? ನೀವು ಕನಸು ಕಾಣುತ್ತಿರಿ. ಸವದಿಯವರೆ, ಈಗ ತೇರದಾಳದಲ್ಲಿ ಗಲಾಟೆ ನಡೆಯುತ್ತಿರಬೇಕಲ್ಲ? ಅದಕ್ಕೆ

ನಮ್ಮ ಮಂದಿನೇ ಕಾರಣವೆ? ನೀವು ಅದನ್ನು ತಾಲ್ಲೂಕು ಮಾಡಿಸುತ್ತೇವೆಂದು ಹೇಳಿ ಮಾಡಿಸದಿದ್ದರೆ ಇನ್ನೇನು ಮಾಡುತ್ತಾರೆ? ನೀವು ಮಾಡಡಿಸಿಯೇ ಇಲ್ಲ. ತೇರದಾಳನ್ನು ತಾಲ್ಲೂಕು ಮಾಡಿಸಬೇಕೆಂದು ಗಲಾಟೆ ಮಾಡಿಕೊಂಡು ನಮ್ಮ ಮನೆ ಹತ್ತಿರ 500 ಜನ ಬಂದಿದ್ದರು. ನಾನು ಏಕೆ ಹೇಳುತ್ತಿದ್ದೇನೆಂದರೆ ಇವತ್ತು ಎಲ್ಲಾ ಕ್ಷೇತ್ರದಲ್ಲಿ ಕೂಡ ಇವರು ವಿಫಲರಾಗಿದ್ದಾರೆ. ನಮ್ಮ ಅಭಿವೃದ್ಧಿ ಹತ್ತು ವರ್ಷ ಹಿಂದಕ್ಕೆ ಹೋಗಿಬಿಟ್ಟಿದೆ. ಆಮೇಲೆ ಭ್ರಷ್ಟಾಚಾರದ ಬಗ್ಗೆ ಹೇಳುವುದಾದರೆ, ಯಾವ ಕಾಲದಲ್ಲಿ ಕೂಡ ಮಂತ್ರಿಮಂಡಲದಲ್ಲಿ ಇರುವಂ-ತಹ 15–20 ಜನರ ಮೇಲೆ ಭ್ರಷ್ಟಾಚಾರ ಆರೋಪ ಹೊತ್ತಿರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿತ್ತು ಹೇಳಿ, ಒಬ್ಬ ಮುಖ್ಯಮಂತ್ರಿನೇ 24 ದಿನ ಜೈಲಿಗೆ ಹೊರಟು ಹೋದರು. ಇನ್ನೊಬ್ಬ ಮಂತ್ರಿ ಜೈಲಿನಲ್ಲಿಯೇ ಇದ್ದಾರೆ, ಬಿಡುಗಡೆಯಾಗಿಲ್ಲ. ಇನ್ನಿಬ್ಬರು ಮಂತ್ರಿ ಜೈಲಿಗೆ ಹೋಗಿ ವಾಪಸ್ಸು ಬಂದರು. ಬೇಲ್ ಮೇಲೆ ಇದ್ದಾರೆ, ಕೆಲವರ ಮೇಲೆ ಸಿ.ಬಿ.ಐ, ಇನ್ನು ಕೆಲವರ ಮೇಲೆ ಲೋಕಾಯುಕ್ತ ತನಿಖೆ ನಡೆಯುತ್ತಿದೆ. ಈ ಸದನದ ಗೌರವ ಹಾಳಾಗಿ ಹೋಯಿತು. ಇಲ್ಲಿ **blue film** ಕೂಡ ನೋಡಿಬಿಟ್ಟರು. ಈ ರೀತಿ ಯಾವ ಕಾಲದಲ್ಲಿ ಕೂಡ ಆಗಿರಲಿಲ್ಲ. ಹಿಂದೆ ಈ ರೀತಿ ಯಾವತ್ತಾದರೂ ನಡೆದಿತ್ತೇ? ಇತಿಹಾಸದಲ್ಲಿ ನಡೆದಿರಲಿಲ್ಲ. ಇದು ದೇಗುಲ. ನೀವು ಬಹಳ ಸಜ್ಜನರು ಪಾಪ. ಇದನ್ನು ಒಪ್ಪಿಕೊಳ್ಳುತ್ತೀರಾ? ಇಲ್ಲಿ ಎಂತಹ ಪರಿಸ್ಥಿತಿ ನಿರ್ಮಾಣವಾ-ಯಿತು ನೋಡಿ ರೈತರ ಸಾಲ 25 ಸಾವಿರ ರೂಪಾಯಿ–ಯವರೆಗೆ ಮನ್ನಾ ಮಾಡಿದ್ದೇವೆಂದು ಈಗ ಹೇಳಿದರು. ಇವರು ಸಾಲ ಮನ್ನಾ ಮಾಡಿದ ಮೇಲೆ ಹಣವನ್ನು ಡಿ.ಸಿ.ಸಿ. ಬ್ಯಾಂಕ್‌ಗೆ ಕೊಡಬೇಕಾಗಿತ್ತು, ಆದರೆ ಇವತ್ತಿನವರೆಗೂ ಹಣವನ್ನು ಕೊಡಲಿಲ್ಲ.

**ಶ್ರೀ ಉಮೇಶ್ ವಿ.ಕತ್ತಿ** : ತಿಂಗಳು, ತಿಂಗಳು ಕೊಡುತ್ತಿದ್ದೇವೆ.

**ಶ್ರೀ ಸಿದ್ದರಾಮಯ್ಯ** : ಬೇರೆಯವರಿಗೆ ಹೊಸದಾಗಿ ಸಾಲ ಸಿಗುತ್ತಿಲ್ಲ. ಅದು ಏನು ಮಾಡಿದ್ದಾರೆ ಗೊತ್ತೇ? ಕೆಲವು ಡಿ.ಸಿ.ಸಿ. ಬ್ಯಾಂಕ್‌ಗಳಲ್ಲಿ ವಿಚಾರ ಮಾಡಿ. ಮುಂದಿನ ಸಾಲ ಕೊಡಬೇಕಲ್ಲ, 25 ಸಾವಿರ ರೂಪಾಯಿ ಹಿಡಿದುಕೊಂಡಿದ್ದಾರೆ. ಈಗ ನೀವು ಮೈಸೂರು ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ಕೇಳಿ. ಅವರು 25.000 ರೂಪಾಯಿ ಹಿಡಿದುಕೊಂಡು 75,000 ರೂಪಾಯಿ ಕೊಟ್ಟಿದ್ದಾರೆ. ಅದನ್ನು ಡೆಪಾಸಿಟ್ ಎಂದು ಇಟ್ಟುಕೊಂಡು, ಅದಕ್ಕೆ ಬಡ್ಡಿ

ಕೊಡುತ್ತೇವೆಂದು ಹೇಳಿದ್ದಾರೆ. ನೀವು ಕೊಟ್ಟಮೇಲೆ ಅದನ್ನು ಕೊಡುತ್ತೇವೆಂ-ದು ಹೇಳಿದ್ದಾರೆ. This is the position. ಇದನ್ನು ನನಗೆ ಸ್ವತಃ ಮೈಸೂರು ಡಿ.ಸಿ.ಸಿ. ಬ್ಯಾಂಕ್‌ನ ಅಧ್ಯಕ್ಷರೇ ಹೇಳಿದರು. ನೀವು ಜೀರೋ ಪರ್ಸೆಂಟ್‌ನಂತೆ ಸಾಲವನ್ನು ಒಂದು ಲಕ್ಷ ರೂಪಾಯಿಯವರೆಗೆ ಕೊಡುತ್ತಿದ್ದೀರಿ. ಅದಕ್ಕೆ ಏನು ಮಾಡಬೇಕೆಂದು ಇವತ್ತಿನವರೆಗೂ ಹೇಳಿಲ್ಲ. ಅವರಿಗೆ ಸಬ್ಸಿಡಿ ಹಣ ಕೂಡ ಕೊಟ್ಟಿಲ್ಲ. 3ಲಕ್ಷ ರೂಪಾಯಿಯವರೆಗೂ 3% ಬಡ್ಡಿ ಎಂದು ಹೇಳುತ್ತಿದ್ದೀರಿ. ಅದಕ್ಕೂ ಕೂಡ ಸ್ಪಷ್ಟವಾದಂತಹ ಆದೇಶ ಹೋಗಿಲ್ಲ. 25.000 ರೂಪಾಯಿಯವರೆಗೆ ಕೊಟ್ಟಿರುವುದರಲ್ಲಿ ನೀವು 3,600 ಕೋಟಿ ರೂಪಾಯಿ ಬಡ್ಡಿ ಕೊಡಬೇಕಾಗಿರುವುದರಲ್ಲಿ ಇಲ್ಲಿಯವರೆಗೂ ಕಟ್ಟಿ ಕೊಟ್ಟಿರತಕ್ಕಂಥಾದ್ದು 900 ಕೋಟಿ ರೂಪಾಯಿ ಚಿಲ್ಲರೆ. ಇನ್ನು ಎಷ್ಟು ಕೊಡಬೇಕು?

(ಈ ಹಂತದಲ್ಲಿ ಸಭಾಧ್ಯಕ್ಷರಾದ ಶ್ರೀ ಕೆ.ಜಿ.ಬೋಪಯ್ಯನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

**ಶ್ರೀ ಉಮೇಶ್ ವಿ.ಕತ್ತಿ** : 3,600 ಕೋಟಿ ರೂಪಾಯಿ ಬರಗಾಲ ಎಂದು ಸಾಲ ಮನ್ನಾ ಮಾಡಿದ್ದೇವೆ. Due date ಬಂದಾಗ ಯಾವ ರೈತ ಎಷ್ಟು ತುಂಬಬೇಕಾಗಿತ್ತು ಅಷ್ಟು ಬಿಟ್ಟು ಅಸಲು ಮತ್ತು ಬಡ್ಡಿ ಪ್ರತಿ ತಿಂಗಳು 900 ಕೋಟಿ ಹಣವನ್ನು ಕಟ್ಟಲಾಗಿದೆ. ಇದು due date ಬಂದಾಗ ಮಾತ್ರ ಕೊಡಬೇಕು. ಇದನ್ನು ಒಂದೇ ಬಾರಿ ಕೊಡಬೇಕಾಗಿಲ್ಲ. ರೈತರ ಸಾಲದ ಕಡೆ ಕಟ್ಟಬೇಕಾಗಿರುವುದು due date ಬಂದಾಗ, ಸರ್ಕಾರ ಏನು ಮನ್ನಾ ಮಾಡಿದ್ದೇವೆ, ಆ 25,000 Plus ಬಡ್ಡಿಯನ್ನು ಆ ಬ್ಯಾಂಕ್‌ನಿಂದ ಮಾಹಿತಿ ಪಡೆದು ಪ್ರತಿ ತಿಂಗಳು ಅಷ್ಟಷ್ಟು release ಮಾಡಿ ಕಳೆದ ಮೂರು ತಿಂಗಳಿನಲ್ಲಿ 900 ಕೋಟಿ ರೂಪಾಯಿ ಹಣವನ್ನು ಈ ರೀತಿ ಕೊಟ್ಟಿದ್ದೇವೆ. ಅದಲ್ಲದೆ ಒಂದು ಲಕ್ಷ ರೂಪಾಯಿಗೆ ಜೀರೋ ಪರ್ಸೆಂಟ್ ಬಡ್ಡಿಯಲ್ಲಿ ಸಾಲ ಹೇಗೆ ಕೊಡಬೇಕು, ಮೂರು ಲಕ್ಷ ರೂಪಾಯಿ ಸಾಲಕ್ಕೆ ಮೂರು ಪರ್ಸೆಂಟ್ ಬಡ್ಡಿ ಕೊಡಬೇಕು ಎನ್ನುವ ಬಗ್ಗೆ ಆದೇಶಗಳು ಕೂಡ ಹೋಗಿವೆ. ರಾಜ್ಯದ ಅತೀ ದೊಡ್ಡ ಜಿಲ್ಲೆ ಬೆಳಗಾಂ ನಿಂದ ನಾನು ಬಂದಿದ್ದೇನೆ. 4,438 ಕೋಟಿ ರೂಪಾಯಿಯಷ್ಟು ಸಾಲ ಮನ್ನಾ ಆಗಿದೆ. ಅದರ ಬಡ್ಡಿ ಬರುತ್ತಿದೆ, ಸಾಲ ಕಟ್ಟುತ್ತಿದ್ದೇವೆ, ಹೊಸ ಸಾಲ ಕೊಡುತ್ತಿದ್ದೇವೆ, ಯಾವುದೇ ಡೆಪಾಸಿಟ್‌ಗಳನ್ನು ಇಡುತ್ತಿಲ್ಲ. ನಿಮಗೆ ಬೇಕಾದರೆ ಬೆಳಗಾಂ ಬ್ಯಾಂಕ್‌ನ ಮಾಹಿತಿ ಕೊಡಿ ಎಂದರೆ

ಕೊಡುತ್ತೇನೆ. ಈ ರಾಜ್ಯದಲ್ಲಿ ಅತಿ ದೊಡ್ಡ ಬ್ಯಾಂಕ್ ಎಂದರೆ ಬೆಳಗಾಂ ಡಿ.ಸಿ.ಸಿ ಬ್ಯಾಂಕ್ ಸಾಲ ಮನ್ನಾ ಮಾಡಿರುವಮತಹ ಬ್ಯಾಂಕ್. ಅದಾದಮೇಲೆ 418 ಕೋಟಿ ರೂಪಾಯಿ ಸಾಲ ಮನ್ನಾ ಮಾಡಿರುವಂತಹ ಬಾಗಲಕೋಟೆ ಜಿಲ್ಲೆಯ ಬ್ಯಾಂಕ್. ಇವೆರಡು ಬ್ಯಾಂಕ್‌ಗಳಲ್ಲಿ 1,900 ಕೋಟಿ ರೂಪಾಯಿಯ–ಷ್ಟು ಸಾಲ ಮನ್ನಾ ಮಾಡಿದ್ದೇವೆ. ಆ ಸಾಲ ಮನ್ನಾ ಮಾಡುವುದಕ್ಕೆ repayment ಆಗುತ್ತಿದೆ. ಅಸಲು ಮತ್ತು ಬಡ್ಡಿ ಮನ್ನಾ ಆಗುತ್ತಿದೆ, ಹೊಸ ಸಾಲ ಕೂಡ ಕೊಡುತ್ತಿದ್ದೇವೆ. ಜೀರೋ ಪರ್ಸೆಂಟ್‌ನಂತೆ ಮತ್ತು ಮೂರು ಪರ್ಸೆಂಟ್‌ನಂತೆ ಕೂಡ ಸಾಲವನ್ನು ಕೊಡುತ್ತಿದ್ದೇವೆ. ನಾವು ಬ್ಯಾಂಕ್ ನಡೆಸುತ್ತೇವೆ, ನಮ್ಮ ಹತ್ತಿರ ಇರುವ ಮಾಹಿತಿಯನ್ನು ಹೇಳುತ್ತಿದ್ದೇವೆ.

**ಶ್ರೀ ಬಂಡೆಪ್ಪ ಖಾಶೆಂಪೂರ್ :** ಮಾನ್ಯ ಮಂತ್ರಿಗಳು ಹೇಳುತ್ತಿರುವುದು ನಮಗೂ ಗೊತ್ತಾಗುತ್ತಿದೆ. ಆದರೆ ಇವರು ಇಲ್ಲಿ ತೀವ್ರವಾದಂತಹ ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ಸರ್ಕಾರವು ಸಹಕಾರ ಬ್ಯಾಂಕ್‌ಗಳಿಂದ 25,000 ರೂಪಾಯಿವರೆಗೆ ಬೆಳೆ ಸಾಲ ಪಡೆದಿದ್ದು, ಒಟ್ಟು ಮೊತ್ತ 3,600 ಕೋಟಿ ರೂಪಾಯಿಗಳನ್ನು 15 ಲಕ್ಷ ರೂಪಾಯಿ ಸಂಬಂಧದಲ್ಲಿ ಮನ್ನಾ ಮಾಡಿರುತ್ತದೆ ಎಂದು ಹೇಳಿದ್ದಾರೆ. ಮಾಡಿರುತ್ತದೆ ಎಂದರೆ ಏನು? ಎಲ್ಲಿ ಕೊಟ್ಟಿದ್ದೀರಿ?

**ಶ್ರೀ ಉಮೇಶ್ ವಿ. ಕತ್ತಿ :** Due date ಬಂದಾಗ ದುಡ್ಡು ಕೊಡುತ್ತೇವೆ.

**ಶ್ರೀ ಬಂಡೆಪ್ಪ ಖಾಶೆಂಪೂರ್ :** ಮತ್ತೇ ಬರಗಾಲ ಎಂದು ಏಕೆ ಹಾಕಿದ್ದೀರಿ? ಇದು wrong. ಬಜೆಟ್‌ನಲ್ಲಿ 1,521 ಕೋಟಿ ರೂಪಾಯಿ next ಗೆ provision ಮಾಡಿದ್ದಾರೆ.

**ಶ್ರೀ ಉಮೇಶ್ ವಿ. ಕತ್ತಿ :** ಬಂಡೆಪ್ಪನವರೇ, ನಿಮ್ಮ ಕಣ್ಣಿಗೆ ಹೇಗೆ ಕಾಣುತ್ತದೆ, ನೀವು ಹಾಗೆ ಓದಿಕೊಳ್ಳಬಹುದು.

**ಶ್ರೀ ಬಂಡೆಪ್ಪ ಖಾಶಿಂಪೂರ್:** ಕಣ್ಣಿಗಲ್ಲ. ಇಡೀ ರಾಜ್ಯಕ್ಕೆ ಗೊತ್ತಾಗುತ್ತಿದೆ.

**ಶ್ರೀ ಉಮೇಶ್ ವಿ.ಕತ್ತಿ :** Practically ರೈತರು ಪಡೆದಂಥ ಸಾಲದ due date ಬಂದಾಗ ಆ date ಗೆ 25,000 plus ಬಡ್ಡಿ ಕೊಡುವುದು ಸರ್ಕಾರದ ಕರ್ತವ್ಯ ಅದನ್ನು ಕೊಡುತ್ತಿದ್ದೇವೆ.

**ಶ್ರೀ ಬಂಡೆಪ್ಪ ಖಾಶಿಂಪೂರ್** : ತಾವು ಹೇಳಿವುದನ್ನು ಒಪ್ಪುತ್ತೇವೆ. ಆದರೆ ತಾವು 3,600 ಕೋಟಿ ರೂ.ಗಳನ್ನು ಮಾಡಲಾಗಿದೆಯೆಂದು ಏಕೆ ಬರೆದಿದ್ದೀರಿ?

**ಶ್ರೀ ಉಮೇಶ್ ವಿ.ಕತ್ತಿ** : ಇಡೀ ವರ್ಷದಲ್ಲಿ 3,600 ಕೋಟಿ ರೂ.ಗಳನ್ನು ಮನ್ನಾ ಮಾಡಲಾಗಿದೆ.

**ಶ್ರೀ ಬಂಡೆಪ್ಪ ಖಾಶಿಂಪೂರ್** : ರೈತರ account ನಲ್ಲಿ ಇನ್ನು ಕಡಿಮೆಯಾಗಿಲ್ಲ. ಹಾಗಿದ್ದಮೇಲೆ ತಾವು ಮನ್ನಾ ಎಂದು ಹೇಗೆ ಹೇಳುತ್ತೀರಿ?

**ಶ್ರೀ ಉಮೇಶ್ ವಿ.ಕತ್ತಿ** : ಆ due date ಬಂದಾಗ ಕೊಡುತ್ತಿದ್ದೇವೆ.

**ಶ್ರೀ ಬಂಡೆಪ್ಪ ಖಾಶಿಂಪೂರ್** : ಅಂದರೆ ಇನ್ನೂ ಉದ್ದರಿ ಇದೆಯೆಂದು ಹೇಳಿ, ನಗದು ಇಲ್ಲ.

**ಶ್ರೀ ಉಮೇಶ್ ವಿ.ಕತ್ತಿ** : ತಮ್ಮ ಲೆಕ್ಕದಲ್ಲಿ ಉದ್ದರಿ, ನಮ್ಮ ಲೆಕ್ಕದಲ್ಲಿ due date ಬಂದಾಗ ಕೊಡುವುದು.

**ಶ್ರೀ ಬಂಡೆಪ್ಪ ಖಾಶಿಂಪೂರ್** : ತಾವು ಅದನ್ನು ಹೇಳಬೇಕಾಗುತ್ತದೆ, ಸುಮ್ಮನೆ ಜನರನ್ನು ದಾರಿ ತಪ್ಪಿಸುವ ಕೆಲಸವನ್ನು ಮಾಡುತ್ತಿದ್ದೀರಿ, ಮತ್ತೆ ಏನು ಮಾಡುತ್ತಿದ್ದೀರಿ?

**ಶ್ರೀ ಉಮೇಶ್ ವಿ.ಕತ್ತಿ** : ತಾವು ಆ ರೀತಿ ಓದಿಕೊಳ್ಳಬೇಕು.

**ಶ್ರೀ ಬಂಡೆಪ್ಪ ಖಾಶಿಂಪೂರ್** : ತಾವು ಬರೆದಿರುವುದನೇ ನಾವು ಓದುತ್ತಿದ್ದೇವೆ, ಇದನ್ನು ನಾವು ಏನು special ಆಗಿ ಬರೆದಿಲ್ಲ.

**ಶ್ರೀ ಸಿದ್ದರಾಮಯ್ಯ** : ಮಾನ್ಯ ಬಂಡೆಪ್ಪ ಖಾಶಿಂಪೂರ್‌ರವರು ಹೇಳುವ ವಿಚಾರ ಸರಿಯಾಗಿದೆ. you are correct, I am not alleging it is a fact. ಇವರು 900 ಚಿಲ್ಲರೆ ಕೋಟಿ ರೂ.ಗಳನ್ನು ಕೊಟ್ಟು 3,600 ಕೋಟಿ ರೂ. ಗಳಿಗೆ ಇನ್ನೂ due date ಬಂದಿಲ್ಲ, ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. ಈ ಬಜೆಟ್‌ನಲ್ಲಿ 1,500 ಸಾವಿರ ಕೋಟಿ ರೂ.ಗಳನ್ನು ಕೊಡುತ್ತೇವೆಂದು ಇಟ್ಟುಕೊಂಡಿದ್ದಾರೆ.

**ಶ್ರೀ ಬಂಡೆಪ್ಪ ಖಾಶಿಂಪೂರ್** : ಈ ವರ್ಷಕಲ್ಲ, ಮುಂದಕ್ಕೆ..

ಈ ವರ್ಷ, ಮುಂದಿನ ವರ್ಷ ಎರಡೂ ಸೇರಿ 1,500 ಕೋಟಿ ರೂ.ಗಳು ಅಥವಾ 1,800 ಕೋಟಿ ರೂ.ಗಳಷ್ಟೆ ಇರುವುದು. ಇನ್ನು

ಸರ್ಕಾರದವರು ಏನು ಮಾಡುತ್ತಾರೆ? ಮುಂದಿನ ವರ್ಷಕ್ಕೆ 1,500 ಕೋಟಿ ರೂ.ಗಳು ಅಷ್ಟೆ, ಸುಮ್ಮನೆ ಹೇಳಿ ರೈತರಿಗೆ ಏಕೆ ಪಂಗನಾಮ ಇಡುತ್ತಿದ್ದೀರಿ?

**ಶ್ರೀ ಸಿದ್ದರಾಮಯ್ಯ** : ಈಗಾಗಲೇ 3,600 ಕೋಟಿ ರೂ.ಗಳನ್ನು ಕೊಟ್ಟು ಬಿಡಬೇಕಾಗಿತ್ತು. ಏಕೆಂದರೆ, ಇವರು 25,000 ರೂಪಾಯಿವರೆಗೆ ಸಾಲ ತೆಗೆದುಕೊಂಡಿರುವುದನ್ನು ಅಷ್ಟೇ ಮನ್ನಾ ಮಾಡಿರುವುದು ನೀವು ಬೆಳೆ ಸಾಲವನ್ನು ಮನ್ನಾ ಮಾಡಿರುವುದಲ್ಲವೇ? ಈ ಬೆಳೆ ಸಾಲಕ್ಕೆ due date ಎಷ್ಟು ಇರುವುದು? ತಾವು ಮನ್ನಾ ಮಾಡಿ ಎಷ್ಟು ದಿವಸಗಳು ಆಯಿತು? ತಾವು ಎಲ್ಲಿಂದ ಎಲ್ಲಿಯವರೆಗೂ ಎಂದು ಹೇಳಿದ್ದೀರಿ? ತಾವು ಜೂನ್ ತಿಂಗಳಿಂದ ಆಗಸ್ಟ್ ತಿಂಗಳವರೆಗೂ ಎಂದು ಹೇಳಿದ್ದೀರಿ. ಆಗಸ್ಟ್ ತಿಂಗಳಿಂದ ಆಗಸ್ಟ್ ತಿಂಗಳು ಅಂದರೆ ಒಂದು ವರ್ಷ ಆಯಿತು. ಮಾನ್ಯ ಉಮೇಶ್ ಕತ್ತಿಯವರೆ, ಕಳೆದ ಆಗಸ್ಟ್ ತಿಂಗಳಿಗೆ ಒಂದು ವರ್ಷ ಆಯಿತು, ಮುಂದಿನ ಆಗಸ್ಟ್ ತಿಂಗಳಿಗೆ ಎರಡು ವರ್ಷಗಳಾಗುತ್ತದೆ. ತಾವು ಸಾಲ ಮನ್ನಾ ಮಾಡಿದ್ದು ಯಾವಾಗ? ಮಾನ್ಯ ಜಗದೀಶ್ ಶೆಟ್ಟರ್ ತಾನೇ ಸಾಲ ಮನ್ನಾ ಮಾಡುತ್ತೇವೆಂದು announce ಮಾಡಿದ್ದು. ಇದನ್ನು ಸದಾನಂದ ಗೌಡರು ಇದ್ದಾಗ ಮಾಡಿದ್ದಾರೆಯೇ?

**ಶ್ರೀ ಉಮೇಶ್ ವಿ.ಕತ್ತಿ** : ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾಡಿದ್ದು.

**ಶ್ರೀ ಸಿದ್ದರಾಮಯ್ಯ** : ಅದು ಯಾವ ಕಾಲದಲ್ಲಿ ಆಗಿದ್ದು?

**ಶ್ರೀ ಉಮೇಶ್ ವಿ.ಕತ್ತಿ** : ಜುಲೈ ತಿಂಗಳಲ್ಲಿ, 6 ತಿಂಗಳ ಹಿಂದೆ ಆಗಿದ್ದು.

**ಶ್ರೀ ಸಿದ್ದರಾಮಯ್ಯ** : ಜುಲೈ ತಿಂಗಳಲ್ಲಿ ಎಂದು ಆಗಿ ಆಗಸ್ಟ್ ತಿಂಗಳವರೆಗೂ ಇತ್ತು. ಅದನ್ನು ಉತ್ತರ ಕೊಡುವಾಗ ಹೇಳಿದ್ದು. ತಾವು ಮನ್ನಾ 2011ರಲ್ಲಿ ಮಾಡಿದ್ದು.

**ಶ್ರೀ ಉಮೇಶ್ ವಿ.ಕತ್ತಿ** : ಆಗಸ್ಟ್‌ನಲ್ಲಿ ಮನ್ನಾ ಮಾಡಿದ್ದು.

**ಶ್ರೀ ಸಿದ್ದರಾಮಯ್ಯ** : ಮನ್ನಾ ಯಾವಾಗಲಾದರೂ ಮಾಡಲಿ, 2011ರ ಜೂನ್ ತಿಂಗಳಿಂದ ಆಗಸ್ಟ್‌ವರೆಗೆ ಸಾಲ ತೆಗೆದುಕೊಂಡಿರುವುದು.

**ಶ್ರೀ ಉಮೇಶ್ ವಿ.ಕತ್ತಿ** : ಮುಂದೆ ಬರುವ ಆಗಸ್ಟ್‌ವರೆಗೆ ಇರುವುದು.

**ಶ್ರೀ ಸಿದ್ದರಾಮಯ್ಯ** : ತಾವು ನಾಳೆ ಇಲ್ಲಿಗೆ ಅಪೆಕ್ಸ್ ಬ್ಯಾಂಕ್‌ನ ಎಂ.ಡಿ.ಯನ್ನು ಕರೆಸಿ.

**ಶ್ರೀ ಉಮೇಶ್ ವಿ.ಕತ್ತಿ** : ಬೆಳಗಾಂ ಡಿಸಿಸಿ ಬ್ಯಾಂಕ್, ಬಾಗಲಕೋಟೆ ಡಿಸಿಸಿ ಬ್ಯಾಂಕ್, ಮೈಸೂರು ಡಿಸಿಸಿ ಬ್ಯಾಂಕ್, ಅಪೆಕ್ಸ್ ಬ್ಯಾಂಕ್ ಎಂ.ಡಿ. ಮತ್ತು ಸಹಕಾರ ಇಲಾಖೆಯ ಅಧಿಕಾರಿಗಳನ್ನು ಎಲ್ಲರನ್ನೂ ಕರೆಸಿ ತಮ್ಮೊಂದಿಗೆ ಮೀಟಿಂಗ್ ಮಾಡುತ್ತೇನೆ.

**ಶ್ರೀ ಸಿದ್ದರಾಮಯ್ಯ** : ಮೊನ್ನೆ ತಾನೆ ಮೈಸೂರಿನಲ್ಲಿ ಮಾತನಾಡಿದ್ದೇನೆ.

**ಶ್ರೀ ಉಮೇಶ್ ವಿ.ಕತ್ತಿ** : ಜುಲೈ ತಿಂಗಳಿಂದ ಆಗಸ್ಟ್ ತಿಂಗಳವರೆಗೆ ಒಂದು ವರ್ಷ ಅಂದರೆ next ಆಗಸ್ಟ್‌ಗೆ ಇರುತ್ತದೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ** : Next ಆಗಸ್ಟ್‌ಗೆ ನೀವು ಎಲ್ಲಿ ಇರುತ್ತಿರಿ?

**ಶ್ರೀ ಉಮೇಶ್ ವಿ.ಕತ್ತಿ** : ನಾವು provision ಮಾಡಿ ಹೋಗುತ್ತೇವೆ, ನಾವೇ ಬರುತ್ತೇವೆ, ನಾವೇ ಕೊಡುತ್ತೇವೆ. ಅದರ ಪ್ರಶ್ನೆ ಇಲ್ಲ.

**ಶ್ರೀ ಸಿದ್ದರಾಮಯ್ಯ** : ನಾನು ಮೊನ್ನೆ ಸಾಯಂಕಾಲ 7 ಗಂಟೆಯಲ್ಲಿ ಚರ್ಚೆ ಮಾಡಿದೆ. ಅವರು ಏನು ಹೇಳಿದ್ದಾರೆಂದರೆ 25,000 ರೂ.ಗಳನ್ನು ಏನು ಮನ್ನಾ ಮಾಡಿದ್ದೀರಿ. ರೈತರಿಗೆ next ಬೆಳೆ ಸಾಲವನ್ನು ಕೊಡುವಾಗ ಈ 25,000 ರೂ.ಗಳನ್ನು ಹಿಡಿದುಕೊಂಡು deposit ನಲ್ಲಿ ಇಟ್ಟಿದ್ದಾರೆ. ಇದನ್ನು ನಾನು ಹೇಳುವುದು ಸರಿ ಇಲ್ಲವೆಂದರೆ I will withdraw my words.

ಶ್ರೀ ಉಮೇಶ್ ವಿ.ಕತ್ತಿ : ರಾಜ್ಯದಲ್ಲಿ ಬೆಳಗಾಂ ಅತೀ ದೊಡ್ಡ ಜಿಲ್ಲಾ ಬ್ಯಾಂಕ್ ಆಗಿದ್ದು, second ಬಾಗಲಕೋಟೆ ಬ್ಯಾಂಕ್‌ಗಳಲ್ಲಿ ಸಾಲ ಮನ್ನಾ ಆಗಿರುವಂಥ ಬ್ಯಾಂಕ್‌ಗಳಾಗಿದೆ.

**ಶ್ರೀ ಸಿದ್ದರಾಮಯ್ಯ** : ನಾನು ಮೈಸೂರು ಬ್ಯಾಂಕ್ ಬಗ್ಗೆ ಹೇಳುತ್ತಿದ್ದೇನೆ.

**ಶ್ರೀ ಉಮೇಶ್ ವಿ.ಕತ್ತಿ** : ಸಾವಿರ ಕೋಟಿ ರೂ.ಗಳಷ್ಟು ಸಾಲ ಮನ್ನಾ ಆಗಿರುವಂಥ ಜಿಲ್ಲೆಗಳಾದ ಬೆಳಗಾಂ ಮತ್ತು ಬಾಗಲಕೋಟೆಯಲ್ಲಿ. ಇವರ ಪೂರ್ಣ ಮಾಹಿತಿಯನ್ನು ತಮಗೆ ಹೇಳುತ್ತಿದ್ದೇನೆ. ಇಲ್ಲಿ major ಸಾಲ ಮನ್ನಾ ಆಗಿರುವಂಥದ್ದು, ತಾವು ಇದನ್ನು ಸರಿ ಮಾಡೋಣವೆಂದರೆ ಅಧ್ಯಕ್ಷರನ್ನು ಕರೆಸಿ ಸರಿ ಮಾಡೋಣ, we will check up.

**ಶ್ರೀ ಸಿದ್ದರಾಮಯ್ಯ** : ಡಿಡಿಸಿ ಬ್ಯಾಂಕ್‌ನ ಅಧ್ಯಕ್ಷ ಬಸವೇಗೌಡ ಎಂದು ಇದ್ದಾರೆ, ನಾನು ಅವರ ಜೊತೆಯಲ್ಲಿ ಮಾತನಾಡಿ ಹೇಳುತ್ತಿದ್ದೇನೆ.

**ಶ್ರೀ ಉಮೇಶ್ ವಿ.ಕತ್ತಿ** : ಆ ರೀತಿ ಏನಾದರೂ deposit ಹಿಡಿದುಕೊಂಡಿದ್ದರೆ, definitely we will take serious action. ಏಕೆಂದರೆ ಆ provision ಅವರಿಗೆ ಇಲ್ಲ. ಸರ್ಕಾರದ ಸಾಲ ಮನ್ನಾ ಘೋಷಣೆಯಂತೆ ಅವರು ವಾಯಿದೆ ಪ್ರಕಾರ ಕೊಟ್ಟಂಥ ಹಣವನ್ನು ಕೊಡದೇ ಇದ್ದಾಗ, ಸರ್ಕಾರ ಅವರ ಮೇಲೆ ಕೇಸ್ ಹಾಕಬಹುದು. ರೈತರ deposit ಹಣವನ್ನು ಪಡೆದುಕೊಳ್ಳುವ ಅಧಿಕಾರವಿಲ್ಲ.

**ಶ್ರೀ ಸಿದ್ದರಾಮಯ್ಯ** : ಅದರ ಬಡ್ಡಿಯನ್ನು ಕೊಡುತ್ತಾರಂತೆ..

**ಶ್ರೀ ಉಮೇಶ್ ವಿ.ಕತ್ತಿ** : provision ಇಲ್ಲ, there is no provision for that.

**ಶ್ರೀ ಸಿದ್ದರಾಮಯ್ಯ** : ತಾವು ನಾಳೆ check up ಮಾಡಿ ಹೇಳಿ, ಇಲ್ಲವೆಂದರೆ ಈಗಲೇ ಫೋನ್‌ನಲ್ಲಿ ಹೇಳುವುದಕ್ಕೆ ಹೇಳಿ.

**ಶ್ರೀ ಉಮೇಶ್ ವಿ.ಕತ್ತಿ** : ಕೇಳಿ, ತಮಗೆ ಹೇಳುತ್ತೇನೆ.

**ಶ್ರೀ ಸಿದ್ದರಾಮಯ್ಯ** : ಮಾನ್ಯ ಅಧ್ಯಕ್ಷರೆ, ಈ ರೀತಿ ಮಾಡಿ, ಇವರು ರೈತರ ಮೂಗಿಗೆ ತುಪ್ಪನ್ನು ಹಚ್ಚಿ ಬಿಟ್ಟು, ಹಣವನ್ನು ಕೊಡದೇ, ಅವರು ಸರಿಯಾದ ರೀತಿಯಲ್ಲಿ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಆಗದೇ ಇರುವಂಥ ಕೆಟ್ಟ ಪರಿಸ್ಥಿತಿ ಇದೆ. ಹಾಗಾಗಿ ಇವರು ಬರಗಾಲದಲ್ಲೂ ಸರಿ ಮಾಡಲಿಲ್ಲ. ಕೇಂದ್ರ ಸರ್ಕಾರ ಬರಗಾಲದಲ್ಲಿ ಕೊಟ್ಟಂಥ ಹಣವನ್ನೂ ಖರ್ಚು ಮಾಡಲಿಲ್ಲ. ಇವತ್ತು ಆಸರೆ ಯೋಜನೆ ಇದೆ, 2009 ಸೆಪ್ಟೆಂಬರ್ ತಿಂಗಳಲ್ಲಿ ಮಳೆ ಬಂದು ಪ್ರವಾಹ ಬಂದಿದ್ದು, ಇಲ್ಲಿಗೆ ಮೂರು ವರ್ಷಗಳಾಯಿತು. ಇವರ ಕೈಯಲ್ಲಿ ಈ ಮೂರು ವರ್ಷಗಳಲ್ಲಿ ಪ್ರವಾಹ ಪೀಡಿತರಿಗೆ ಮನೆಗಳನ್ನು ಕಟ್ಟಿಕೊಡುವುದಕ್ಕೆ ಆಗಲಿಲ್ಲ. ಇವತ್ತಿನವರೆಗೂ 30,000 ಮನೆಗಳನ್ನು ಅಷ್ಟೆ ಹಂಚಿಕೆ ಮಾಡಿರುವಂಥದ್ದು. ನಮ್ಮ ಸರ್ಕಾರದಲ್ಲಿ ಬರ ಪರಿಸ್ಥಿತಿಯನ್ನು ಚೆನ್ನಾಗಿ ನಿರ್ವಹಣೆ ಮಾಡಿದ್ದೇವೆ ಕುಡಿಯುವ ನೀರನ್ನು ಕೊಟ್ಟಿದ್ದೇವೆ ಪವರ್ ಕೊಟ್ಟಿದ್ದೇವೆಂದು ಎಲ್ಲಾ ಸತ್ಯಕ್ಕೆ ದೂರವಾಗಿರುವುದನ್ನೇ ಹೇಳಿಸಿದ್ದಾರೆ. ಆರೋಗ್ಯ ಇಲಾಖೆಯನ್ನು ಬಹಳ ಚೆನ್ನಾಗಿ ಮಾಡಿ ಬಿಟ್ಟಿದ್ದೇವೆಂದು

ಹೇಳಿದ್ದಾರೆ. ಏನಾದರೂ ಕೇಂದ್ರ ಸರ್ಕಾರ Rural Health Mission ಬರದೇ ಇದ್ದಿದ್ದರೆ ಇವರ ಹತ್ತಿರ ಹಣವೇ ಇರುತ್ತಿರಲಿಲ್ಲ.

**ಶ್ರೀ ವೈ.ಎನ್.ರುದ್ರೇಶ್ ಗೌಡ** : ಒಂದು ಸಾವಿರ ಕೋಟಿ ರೂ.ಗಳನಷ್ಟೆ ಖರ್ಚು ಮಾಡಿರುವುದು.

**ಶ್ರೀ ಸಿದ್ದರಾಮಯ್ಯ** : ಕಳೆದ ವರ್ಷ 1,500 ಕೋಟಿ ರೂ.ಗಳು ಕುಡಿಯುವ ನೀರಿಗೆ ಖರ್ಚು ಮಾಡುವುದಕ್ಕೆ ಆಗಿಲ್ಲ. ಇದರಲ್ಲಿ ಬರೀ 1,100 ಕೋಟಿ ರೂ.ಗಳನ್ನು ಅಷ್ಟೆ ಖರ್ಚು ಮಾಡಿರುವುದು. ಇವರು ಅದನ್ನು ಖರ್ಚು ಮಾಡಲಿಲ್ಲ, ಇಷ್ಟು ಕೆಟ್ಟ ಸರ್ಕಾರ ಯಾವಾಗಲೂ ಬಂದಿರಲಿಲ್ಲ. ಇವರಿಗೆ ಬೆಂಗಳೂರಿನಲ್ಲಿ ಕಸ ವಿಲೇವಾರಿ ಮಾಡುವುದಕ್ಕೆ ಆಗಿಲ್ಲ. ಒಂದು ಕಾಲದಲ್ಲಿ ಬೆಂಗಳೂರು ನಗರಕ್ಕೆ ಎಂಥ ಹೆಸರು ಇತ್ತು. ಇಡೀ ಜಗತ್ತಿನ ಭೂಪಟದಲ್ಲಿ ಬೆಂಗಳೂರು ಎಂದರೆ, ಎಲ್ಲರೂ ನೋಡುವುದಕ್ಕೆ ಬರುತ್ತಿದ್ದರು. ಇದನ್ನು Silicon Valley ಎಂದು ಕರೆಯುತ್ತಿದ್ದರು, ಬೆಂಗಳೂರನ್ನು ಉದ್ಯಾನ ನಗರ ಎಂದು ಕರೆಯುತ್ತಿದ್ದರು, ಈಗ garbage city ಮಾಡಿ ಬಿಟ್ಟಿದ್ದಾರೆ. ಇಲ್ಲಿ ಭ್ರಷ್ಟಾಚಾರವಂತೂ ಗಗನಕ್ಕೆ ಮುಟ್ಟಿದೆ. ಮಂತ್ರಿಗಳೆಲ್ಲಾ ಜೈಲಿಗೆ ಹೋದರು, ಮುಖ್ಯಮಂತ್ರಿಗಳು ಜೈಲಿಗೆ ಹೋದರು. ಈ ರೀತಿ ಯಾವ ಕಾಲದಲ್ಲಿ ಮಂತ್ರಿಗಳು ಅಧಿಕಾರದಲ್ಲಿದ್ದುಕೊಂಡು ಜೈಲಿಗೆ ಹೋಗಿ ಅಧಿಕಾರವನ್ನು ಕಳೆದುಕೊಂಡಿದ್ದಾರೆ? Housing Boardನ ಕರ್ಮಕಾಂಡ-ವನ್ನು ಹೇಳುವುದಕ್ಕೇ ಆಗುವುದಿಲ್ಲ. ಇಲ್ಲಿ ಮಾನ್ಯ ಕೃಷ್ಣಯ್ಯ ಶೆಟ್ಟರು ಇದ್ದಾರೋ, ಇಲ್ಲವೋ, ಗೊತ್ತಿಲ್ಲ. ಅವರು ಮಂತ್ರಿ ಸ್ಥಾನವನ್ನು ಕಳೆದುಕೊಂಡರು. ಇವರು ಶಿಡ್ಲಘಟ್ಟದ ಹತ್ತಿರ ಜಮೀನನ್ನು ತೆಗೆದುಕೊಳ್ಳುವು-ದಕ್ಕೆ ಹೋಗಿದ್ದರು ನಾವೇ ಇದನ್ನು ಇಲ್ಲಿ ಪ್ರಸ್ತಾಪ ಮಾಡಿದೆವು. Housing Board ನಿಂದ ಮೂವತ್ತಾರೂವರೆ ಲಕ್ಷ ರೂ.ಗಳನ್ನು ಕೊಡಿಸುವುದು, ರೈತರಿಗೆ ಹತ್ತು ಲಕ್ಷ ರೂ.ಗಳನ್ನು ಕೊಡಿಸುವುದು. ಮೊನ್ನೆ ಮೈಸೂರು ಜಿಲ್ಲೆಯಲ್ಲಿ ನಡೆದಿದೆ. ಹೌಸಿಂಗ್ ಬೋರ್ಡ್‌ನವರು ಮೂವತ್ತಾರೂವರೆ ಲಕ್ಷ ರೂ.ಗಳನ್ನು ಕೊಡುವುದು ರೈತರಿಗೆ ಹತ್ತು ಲಕ್ಷ ರೂ.ಗಳನ್ನು ಕೊಟ್ಟು , ಅಲ್ಲಿರುವಂಥ ಅಧ್ಯಕ್ಷರು, ಅಧಿಕಾರಿಗಳೆಲ್ಲಾ 26 ಲಕ್ಷ ರೂ.ಗಳನ್ನು ನುಂಗಿ ಹಾಕುವುದು.

ಚೀಫ್ ಸೆಕ್ರೆಟರಿ ಎನ್‌ಕ್ವೈರಿ ಮಾಡಿದರು, ಅದರ ರಿಪೋರ್ಟನ್ನು ಇವತ್ತಿನವರೆಗೆ ಸದನದ ಮುಂದೆ ಮಂಡಿಸಲಿಲ್ಲ. ಅಷ್ಟೇ ಅಲ್ಲ, ಇವರು ಯಾವ ರಿಪೋರ್ಟನ್ನು ಮಂಡಿಸಲಿಲ್ಲ, ರಾಮಸ್ವಾಮಿ ರಿಪೋರ್ಟನ್ನು ಮಂಡಿಸಲಿಲ್ಲ, ಚೀಫ್ ಸೆಕ್ರೆಟರಿ ರಿಪೋರ್ಟನ್ನೂ ಮಂಡಿಸಲಿಲ್ಲ. ಕಲ್ಲಿದ್ದಲು ಪರ್ಚೇಸ್ ಬಗ್ಗೆ ಮೋಹನ್ ಎನ್ನುವ ಜಡ್ಜ್‌ರವರ ಅಧ್ಯಕ್ಷತೆಯಲ್ಲಿ ಒಂದು ಆಯೋಗ ರಚನೆಯಾಗಿತ್ತು, ಅದರ ರಿಪೋರ್ಟನ್ನೂ ಮಂಡಿಸಲಿಲ್ಲ. ಅವರು ರಿಪೋರ್ಟ್ ಕೊಟ್ಟು ಆರು ತಿಂಗಳಾಯಿತು. ಬಾಲಸುಬ್ರಮಣಿಯನ್ ರಿಪೋರ್ಟನ್ನೂ ಮಂಡಿಸಲಿಲ್ಲ, ಲೋಕಾಯುತ್ತ ರಿಪೋರ್ಟ್ ಮೇಲೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಇವರು ಏನೇನು ಕಮಿಷನ್‌ಗಳನ್ನು ಮಾಡಿದರು, ಅವರು ಕೊಟ್ಟ ವರದಿಯ ಮೇಲೆ ಏನೂ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಲೋಕಾಯುಕ್ತ ರಿಪೋರ್ಟ್‌ನಲ್ಲಿ ಸುಮಾರು ಹದಿನಾರು ಸಾವಿರ ಕೋಟಿಗೂ ಹೆಚ್ಚು ಹಣವನ್ನು ವಸೂಲಿ ಮಾಡಿ ಎಂದು ಹೇಳಿದ್ದಾರೆ. ಇವತ್ತಿನವರೆಗೆ ಒಂದು ರೂಪಾಯಿಯನ್ನಾದರೂ ವಸೂಲಿ ಮಾಡಿದ್ದಾರೆಯೇ? ಸರ್ಕಾರಕ್ಕೆ ಅದು ಬೇಕಾಗಿಲ್ಲವೇ? ಆ ಹದಿನಾರು ಸಾವಿರ ಕೋಟಿ ರೂಪಾಯಿ ಸರ್ಕಾರದ್ದಲ್ಲವೇ? ಅದು ಜನರ ದುಡ್ಡಲ್ಲವೇ? ಅದರ ಐದು ಪಟ್ಟು ವಸೂಲು ಮಾಡಿ ಎಂದು ಹೇಳಿದ್ದಾರೆ. ಇವತ್ತಿನವರೆಗೆ ಆ ರಿಪೋರ್ಟನ್ನು ಜಾರಿ ಮಾಡಲು ಹೋಗಲೇ ಇಲ್ಲ. ಬಾಲಸುಬ್ರಮಣಿಯನ್ ರಿಪೋರ್ಟ್ ಜಾರಿ ಮಾಡಲಿಲ್ಲ. ರಾಮಸ್ವಾಮಿ ರಿಪೋರ್ಟ್ ಜಾರಿ ಮಾಡಲಿಲ್ಲ, ಜಡ್ಜ್ ಆದ ಮೋಹನ್ ಕುಮಾರ್‌ರವರ ರಿಪೋರ್ಟನ್ನು ಜಾರಿ ಮಾಡಲಿಲ್ಲ. ಚೀಫ್ ಸೆಕ್ರೆಟರಿಯವರ ರಿಪೋರ್ಟನ್ನು ಜಾರಿ ಮಾಡಲಿಲ್ಲ. ಹೀಗೆ ಯಾವ ರಿಪೋರ್ಟನ್ನೂ ಜಾರಿ ಮಾಡಲಿಲ್ಲ. ಎಲ್ಲವನ್ನೂ ಕಸದ ಬುಟ್ಟಿಗೆ ಹಾಕಿ ಕುಳಿತುಕೊಂಡು ಬಿಟ್ಟಿದ್ದಾರೆ. ಇವರು ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುವವರು. 33 ಜನ ಮಂತ್ರಿಗಳಲ್ಲಿ, 50% of the ministers are facing criminal charges. ಅನೇಕ ಜನ ಬೇಲ್ ತೆಗೆದುಕೊಂಡು, ಜಾಮೀನಿನ ಮೇಲಿದ್ದಾರೆ. ನಾಚಿಕೆಯಾಗಬೇಕು ಇವರಿಗೆ. ಜೈಲಿಗೆ ಹೋದರು. ನಮ್ಮ ಕಡೆ ಪೈಲ್ವಾನವರುಗಳು ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂದು ಹೇಳುತ್ತಾರೆ. ಆ ರೀತಿ ಇವರು ಜೈಲಿಗೆ ಹೋಗಿ ಬಂದ ಮೇಲೂ ಮೀಸೆ ತಿರುಗಿಸಿಕೊಂಡು ತಿರುಗಾಡುತ್ತಾರೆ. ಇದಕ್ಕಿಂತ ಲಜ್ಜೆಗೆಟ್ಟತನ ಇನ್ಯಾವುದೂ

ಇಲ್ಲ. ಆದ್ದರಿಂದ, ಇವರು ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿರುದೆಲ್ಲವೂ ಸತ್ಯಕ್ಕೆ ದೂರವಾದವು. ಇವತ್ತು ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲ, ಸ್ಕೂಲುಗಳಲ್ಲಿ ಟೀಚರ್‌ಗಳಿಲ್ಲ, ಟೀಚರ್‌ಗಳಿಗೆ ಸಂಬಳವಿಲ್ಲ. ಇವರು manifesto ನಲ್ಲಿ ಏನೇನು ಭರವಸೆ ಕೊಟ್ಟಿದ್ದರು, ಅವುಗಳನ್ಯಾವುದನ್ನೂ ಈಡೇರಿಸಿಲ್ಲ. ಪ್ರತಿ ಕೆ.ಜಿ.ಗೆ. ಎರಡು ರೂಪಾಯಿಯಂತೆ ಅಕ್ಕಿ ಕೊಡುತ್ತೇವೆ ಎಂದು ಈ ಬಜೆಟ್‌ನಲ್ಲಿ ಅನೌನ್ಸ್ ಮಾಡಿದ್ದಾರೆ. ಇವರು manifesto ದಲ್ಲಿ, 30,000 ಸಾವಿರದೊಳಗೆ ಆದಾಯ ಇರುವವವರನ್ನು ಕಡುಬಡವರು ಎಂದು ಗುರುತಿಸುತ್ತೇವೆ ಎಂದು ಹೇಳಿದ್ದರು. ಸಮೃದ್ಧ ಕರ್ನಾಟಕ, ಸಂಕಲ್ಪ – ನಮ್ಮ ಪ್ರಣಾಳಿಕೆ ಎಂದು ಹೇಳಿದ್ದರು. ಇವರು manifesto ದಲ್ಲಿ ಏನೆಲ್ಲಾ ಹೇಳಿದ್ದರು, 90% of them they have not been put into implementation. ಇಂಪ್ಲಿಮೆಂಟ್ ಮಾಡಲೇ ಇಲ್ಲ. "ಬಿ.ಜೆ.ಪಿ.ಯು ರಾಜ್ಯದಲ್ಲಿ ವಾರ್ಷಿಕ ರೂ. 30,000 ವರೆಗೆ ಆದಾಯವಿರುವ ಕುಟುಂಬಗಳ–ನ್ನು ಕಡುಬಡವರೆಂದು, 30,000ಕ್ಕೆ ಮೇಲ್ಪಟ್ಟು 60,000 ವರೆಗೆ ಆದಾಯವಿರುವ ಕುಟುಂಬಗಳನ್ನು ಬಡವರೆಂದು ಗುರುತಿಸುವ ಪ್ರಮುಖ ನಿರ್ಧಾರವನ್ನು ತೆಗೆದುಕೊಂಡಿದೆ. ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳ ಪೂರೈಕೆ–ಕಡುಬಡವರಿಗೆ ಅಕ್ಕಿಗೆ ಕೆ.ಜಿ. ಎರಡು ರೂಪಾಯಿನಂತೆ ಕೊಡುತ್ತೇವೆ" ಎಂದು ಹೇಳಿದ್ದರು. ಹೇಳಿ ಐದು ಚವರ್ಷವಾಯಿತು , ಅದನ್ನು ಮಾಡಲೇ ಇಲ್ಲ. "ಸಮುದಾಯ ಆರೋಗ್ಯ ವಿಮೆ ರಕ್ಷಣೆ ಒದಗಿಸಿ ಅಪಘಾತ ಚಿಕಿತ್ಸೆ, ಶಸ್ತ್ರ ಚಿಕಿತ್ಸೆ ಮತ್ತು ಆಸ್ಪತ್ರೆ ಚಿಕಿತ್ಸೆಯನ್ನು ಉಚಿತವಾಗಿ ಒದಗಿಸಲಗುವುದು" ಎಂದು ಹೇಳಿದ್ದರು. ಆದರೆ ಆಸ್ಪತ್ರೆಗಳಿಗೆ ಡಾಕ್ಟರುಗಳನ್ನೇ ಕೊಡಲಿಲ್ಲ. ಸಮುದಾಯ ವಿಮೆ ಮಾಡಿಬಿಡುತ್ತೇವೆ ಎಂದು ಭರವಸೆ ಕೊಟ್ಟಿದ್ದರು. "ಸುರಕ್ಷಿತ ಹೆರಿಗೆಗಾಗಿ ಒಂದು ಸಾವಿರ ರಾಪಾಯಿ ಸಹಾಯಧನ ಕೊಡಲಾಗುವುದು" ಎಂದು ಹೇಳಿದ್ದರು, ಅದನ್ನೂ ಕೊಡಲಿಲ್ಲ. ಕನ್ಯಾದಾನ ಯೋಜನೆ – ಅದನ್ನೂ ಕೊಡಲಿಲ್ಲ. ವಿಚ್ಛೇದಿತ ಮಹಿಳೆಯರಿಗೆ ಪುನರ್ವಿವಾಹ ಆಗುವವರಿಗೆ ತಿಂಗಳಿಗೆ ನಾಲ್ಕುನೂರು ರೂಪಾಯಿ ಮಾಸಾಶನ ಕೊಡಲಾಗುವುದು ಎಂದು ಹೇಳಿದ್ದರು, ಅದನ್ನೂ ಕೊಡಲಿಲ್ಲ. ಬಡಮಹಿಳೆಯರಿಗೆ ಮಕ್ಕಳಿದ್ದರೂ ಕೂಡ ನಾಲ್ಕುನೂರು ರೂಪಾಯಿ ಕೊಡುತ್ತೇವೆ ಎಂದು ಹೇಳಿದ್ದರು, ಅದನ್ನೂ ಕೊಡಲಿಲ್ಲ. ಅಂಗವಿಕಲರಿಗೆ

ಆದಾಯ ಮಿತಿಯನ್ನು ಪರಿಗಣಿಸದೇ ನಾಲ್ಕುನೂರು ರೂಪಾಯಿ ಕೊಡುತ್ತೇವೆ ಎಂದು ಹೇಳಿದ್ದರು, ಅದನ್ನೂ ಕೊಡಲಿಲ್ಲ. ಹೀಗೆಲ್ಲ ಹೇಳಿ, ಇವರು ಅಧಿಕಾರಕ್ಕೆ ಬಂದ ಮೇಲೆ ಕಳೆದ ಒಂದು ವರ್ಷದಿಂದ ಅಂಗವಿಕಲರ ಮಾಸಾಶನ, ವಿಧವಾ ಮಾಸಾಶನ, ವೃದ್ಧಾಪ್ಯ ವೇತನ ಇವೆಲ್ಲವೂ ನಿಂತುಹೋಗಿವೆ. ಒಂದು ಕೆ.ಜಿ.ಗೆ ಎರಡೂ ರೂಪಾಯಿನಂತೆ ಅಕ್ಕಿ ಕೊಡುತ್ತೇವೆ ಎಂದು ಹೇಳಿದ ಇವರು ಬಂದ ಮೇಲೆ ತಲಾ ನಾಲ್ಕು ಕೆ.ಜಿ. ಎಂದು ಮಾಡಿಬಿಟ್ಟರು. ಆಮೇಲೆ, ಹನ್ನೆರಡು ವರ್ಷದೊಳಗಿನ ಮಕ್ಕಳಿಗೆ ಅಕ್ಕಿ ಕೊಡುತ್ತಿಲ್ಲ, ಅವರಿಗೆ ರೇಷನ್ ಕೊಡುತ್ತಿಲ್ಲ. ಜಾಸ್ತಿ ಅನ್ನ ಊಟ ಮಾಡುವವರು ಅವರೇ. ಅವರಲ್ಲದೇ ದೊಡ್ಡವರು ಊಟ ಮಾಡಲು ಆಗುತ್ತದೆಯೇ? ಅನೇಕ ಜನ ದೊಡ್ಡವರಿಗೆ ಶುಗರ್ ಕಾಯಿಲೆ ಬಂದು, ಅವರು ಅನ್ನವನ್ನು ಊಟ ಮಾಡುವ ಹಾಗಿಲ್ಲ. ಅನ್ನ ಊಟ ಮಾಡುವ ಮಕ್ಕಳ ಹೊಟ್ಟೆ ಮೇಲೆ ಹೊಡೆದುಬಿಟ್ಟರು. ಹನ್ನೆರಡು ವರ್ಷದೊಳಗಿನ ಮಕ್ಕಳಿಗೆ ಅಕ್ಕಿ ಕೊಡುತ್ತಿಲ್ಲ. ಬಚ್ಚೇಗೌಡರೇ, ನಿಮಗೆ ಇದು ಗೊತ್ತೇ? ನೀವು ಇಷ್ಟೊಂದು ಸ್ಟ್ರಾಂಗ್ ಮಿನಿಸ್ಟರ್ ಆಗಿದ್ದು ಇವೆಲ್ಲವನ್ನೂ ಏಕೆ ಕೇಳಲಿಲ್ಲ? ಏಕೆ ಸುಮ್ಮನೆ ಮೈಮೇಲೆ ಹಾಕಿಕೊಳ್ಳುವುದು ಎಂದು ಹೇಳಿ, ಬೇಡವೆಂದು ಬಿಟ್ಟಿರೇನು? ಶ್ರೀರಾಮುಲುರವರು ಇಲ್ಲಿ ಇದ್ದಾರೇನು? ಚುನಾವಣೆಗೋಸ್ಕರ 200 ಕೋಟಿ ರೂಪಾಯಿ ಕೊಟ್ಟಿದ್ದೇವೆ ಎಂದು ಅವರು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಈ ರಾಜ್ಯದಲ್ಲಿ ಇವರು ಮಾಡಿದಂಥ ಅನಾಹುತ ಒಂದಲ್ಲ, ಎರಡಲ್ಲ. ಇವರು ಬಂದ ಮೇಲೆ ರಾಜಕಾರಣಿಗಳು, ಎಂ.ಎಲ್.ಎ.ಗಳು ತಲೆತಗ್ಗಿಸಬೇಕಾದಂಥ ಪರಿಸ್ಥಿತಿ ನಿರ್ಮಾಣವಾಗಿ ಹೋಯಿತು. ಮೌಲ್ಯಗಳನ್ನೆಲ್ಲ ನಾಶ ಮಾಡಿಬಿಟ್ಟರು. ಇವರು ಅಧಿಕಾರಕ್ಕೆ ಬಂದ ಮೇಲೆ ಈ ರಾಜ್ಯದ ಅಭಿವೃದ್ಧಿ ಕುಂಠಿತವಾಯಿತು, ಕಾನೂನು ವ್ಯವಸ್ಥೆ ಹಾಳಾಯಿತು, ಹೆಣ್ಣುಮಕ್ಕಳ ಮೇಲೆ ದೌರ್ಜನ್ಯಗಳು ಜಾಸ್ತಿಯಾದವು, ಕಾನೂನು ಮತ್ತು ಸುವ್ಯವಸ್ಥೆ ಇಲ್ಲವೇ ಇಲ್ಲ. ಹೆಣ್ಣುಮಕ್ಕಳಿಗೆ ಮೊಬೈಲ್ ಫೋನ್ ಕೊಡುತ್ತೇವೆ ಎಂದು ಹೇಳಿದರು. ಎಲ್ಲಿ ಕೊಟ್ಟರೋ ಗೊತ್ತಿಲ್ಲ. ಯುವಕ–ಯುವತಿಯರಿಗೆ ಒಂದೂವರೆ ಸಾವಿರ ರೂಪಾಯಿ ಭತ್ಯೆ ಕೊಡುತ್ತೇವೆ ಎಂದು ಹೇಳಿದರು. ಹೀಗೆ ಜನಗಳಿಗೆ ಬರೀ ಮೋಸ ಮಾಡಿದ್ದಾರೆ. ಇದನ್ನೆಲ್ಲ ನಾವು ಕುಳಿತುಕೊಂಡು ಕೇಳಬೇಕಲ್ಲ? ಮೊದಲೇ ಇವರಿಗೆ ಬಹುಮತವಿಲ್ಲ,

ಅನೈತಿಕವಾದಂಥ ಸರ್ಕಾರ ಇಲ್ಲಿದೆ, ಅನೈತಿಕ ಚಟುವಟಿಕೆಗಳು ದಿನನಿತ್ಯ ನಡೆಯುತ್ತವೆ. ಆದ್ದರಿಂದ, ರಾಜ್ಯಪಾಲರ ಭಾಷಣದ ಮೇಲೆ ತಂದಿರುವ ವಂದನಾ ನಿರ್ಣಯವನ್ನು ನಾನು ತೀವ್ರವಾಗಿ ವಿರೋಧ ಮಾಡುತ್ತೇನೆ ಇದನ್ನು ಒಪ್ಪಿಕೊಳ್ಳಲು ಆಗುವುದಿಲ್ಲ. ಇಷ್ಟನ್ನು ಹೇಳಿ, ಮಾತನಾಡಲು ನನಗೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಅಧ್ಯಕ್ಷರು :** ಇನ್ಯಾರಾದರೂ ಮಾತನಾಡುವವರು ಇದ್ದಾರೆಯೇ?

**ಶ್ರೀ ಹೆಚ್.ಸಿ. ಬಾಲಕೃಷ್ಣ :** ಈಗ ಮೀಟಿಂಗ್ ಇದೆ, ನಾವು ನಾಳೆ ಮಾತನಾಡುತ್ತೇವೆ.

**ಶ್ರೀ ಸಿದ್ದರಾಮಯ್ಯ :** ನಾಳೆ question hour ಆದಮೇಲೆ ಬಜೆಟ್ ಮೇಲೆ discussion initiate ಮಾಡಬೇಕು.

**ಅಧ್ಯಕ್ಷರು:** ಬೆಳಿಗ್ಗೆ ನಾಳೆ ಬೆಳಗ್ಗೆ ಉತ್ತರ ಕೊಡಲಿ. ಆಮೇಲೆ ಬಜೆಟ್ ಮೇಲೆ ಚರ್ಚೆ ಪ್ರಾರಂಭವಾದಾಗ ಎಲ್ಲರೂ ಮಾತನಾಡಲಿ.

**ಶ್ರೀ ಸಿದ್ದರಾಮಯ್ಯ :** ಉತ್ತರ ಯಾವಾಗ ಕೊಡುತ್ತಾರೆ?

**ಅಧ್ಯಕ್ಷರು:** ನಾಳೆ ಬೆಲಗ್ಗೆ 10 ಗಂಟೆಗೆ question hour ಮುಂಚಿತವಾಗಿ ಉತ್ತರ ಕೊಡುತ್ತಾರೆ. ಇಲ್ಲದಿದ್ದರೆ ಟೈಂ ಆಗುವುದಿಲ್ಲ. ಬಜೆಟ್ ಮೇಲೆ ಮಾತನಾಡಲು ಎಲ್ಲರಿಗೂ ಅವಕಾಶ ಕೊಡೋಣ.

**ಶ್ರೀ ಹೆಚ್.ಸಿ. ಬಾಲಕೃಷ್ಣ :** ಮಾನ್ಯ ಅಧ್ಯಕ್ಷರೆ, ಕಾವೇರಿ ವಿಷಯದ ಬಗ್ಗೆ ನಾಳೆ ಬೆಳಗ್ಗೆ ದಯಮಾಡಿ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸಬೇಕು.

**ಅಧ್ಯಕ್ಷರು :** ಅದನ್ನು ಕೊಡುತ್ತಾರೆ. ಈಗ ಈ ಚರ್ಚೆಯನ್ನು ಮುಕ್ತಾಯ ಮಾಡೋಣ, ದಯಮಾಡಿ ಎಲ್ಲರೂ ಸಹಕಾರ ಮಾಡಿ. ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣಾ ಪ್ರಸ್ತಾವದ ಚರ್ಚೆ ಮುಕ್ತಾಯವಾಗಿದೆ.

**ಶ್ರೀ ಬಂಡೆಪ್ಪ ಖಾಶೆಂಪೂರ್ :** ನಾಳೆ ಬೆಳಗ್ಗೆ ನಮ್ಮ ನಾಯಕರಾದ ರೇವಣ್ಣನವರು ಬರುತ್ತಾರೆ. ನಮ್ಮ ಕಡೆಯಿಂದ ಮಾತನಾಡಲಿಕ್ಕ 10 ನಿಮಿಷವಾದರೂ ಅವಕಾಶ ಮಾಡಿಕೊಡಿ.

**ಶ್ರೀ ಹೆಚ್.ಸಿ. ಬಾಲಕೃಷ್ಣ** : ಬೆಳಗ್ಗೆ 1 ಗಂಟೆ ಕಾಲಾವಕಾಶ ಕೊಡಿ ಸಾಕು.

**ಅಧ್ಯಕ್ಷರು** : one hour ಕೊಡುವುದಕ್ಕೆ ಕಷ್ಟವಾಗಿಉತ್ತದೆ.

**ಶ್ರೀ ಬಂಡೆಪ್ಪ ಖಾಶೆಂಪೂರ್**: one hour ಬೇಡ. ಮೊದಲ 10–15 ನಿಮಿಷ ಅವಕಾಶ ಮಾಡಿಕೊಡಿ.

**ಅಧ್ಯಕ್ಷರು** : ಚರ್ಚೆ ಪ್ರಾರಂಭ ಮಾಡಿದರೆ ಅದು ಬೇಗ ಮುಗಿಯುವುದಿಲ್ಲ. Please, ಸಹಕಾರ ಕೊಡಿ. ಎಲ್ಲರಿಗೂ ಬಜೆಟ್ ಮೇಲೆ ಮಾತನಾಡಲಿಕ್ಕೆ ಹೆಚ್ಚು ಅವಕಾಶ ಕೊಡುತ್ತೇನೆ.

(ಗೊಂದಲ)

**ಅಧ್ಯಕ್ಷರು** : ಅವಕಾಶ ಎಲ್ಲರಿಗೂ ಕೊಡುತ್ತೇನೆ.

(ಗೊಂದಲ)

**ಶ್ರೀ ಹೆಚ್.ಸಿ. ಬಾಲಕೃಷ್ಣ** : ನಾಳೆ ಬೆಳಗ್ಗೆ ಅರ್ಧ ಗಂಟೆ ಕಾಲಾವಕಾಶ ಕೊಡಿ.

**ಶ್ರೀ ಬಂಡೆಪ್ಪ ಖಾಶೆಂಪೂರ್** : ಅರ್ಧ ಗಂಟೆ ಕಾಲಾವಕಾಶ ಕೊಡಿ ಸರ್. ಜಾಸ್ತಿ ಏನೂ ಬೇಡ.

**ಅಧ್ಯಕ್ಷರು** : ಆಯಿತು. ಅರ್ಧ ಗಂಟೆ ಕೊಡುತ್ತೇನೆ.

## 6. ಪ್ರಕಟಣೆ

**ಅಧ್ಯಕ್ಷರು** : ಕಾಮನ್‌ವೆಲ್ತ್ ಸಂಸದೀಯ ಸಂಘ (ಕರ್ನಾಟಕ ಶಾಖೆ) ಯ ವಾರ್ಷಿಕ ಸಾಮಾನ್ಯ ಸಭೆಯು ಈ ದಿನ ಅಂದರೆ ಸೋಮವಾರ 11.2.2013ರಂದು ಸಂಜೆ 6–00 ಗಂಟೆಗೆ ವಿಧಾನಸಭೆಯ ವಿರೋಧ ಪಕ್ಷದ ಮೊಗಸಾಲೆಯಲ್ಲಿ ಜರುಗಲಿದ್ದು ಅದರಲ್ಲಿ ಎಲ್ಲಾ ಮಾನ್ಯ ಸಚಿವರುಗಳು ಮತ್ತು ಸದಸ್ಯರುಗಳು ಭಾಗವಹಿಸಬೇಕೆಂದು ಕೋರುತ್ತೇನೆ.

ಈಗ ಸದನವನ್ನು ನಾಳೆ ಬೆಳಗ್ಗೆ 10–00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ,